ಮಾರ್ಚಿ	೨೯	ಪ್ರಾತಃ.	೩	ಏಪ್ರಿಲ್	೧೨	„	೫
ಏಪ್ರಿಲ್	೨೫	ಮಧ್ಯಾನ್ಹ	೨	ಮೇ	೯	„	೧೦
ಮೇ	೨೪	ರಾತ್ರಿ	೧೦	ಜೂನ್	೫	ರಾತ್ರಿ	೧೨
ಜೂನ್	೨೧	ಸಾಯಂ.	೮	ಜುಲಾಯಿ	೩	ಸಾಯಂ.	೫
ಜುಲಾಯಿ	೧೮	ಪ್ರಾತಃ.	೩	„	೩೧	ಹಗಲು	೧೧
ಅಗೊಸ್ತು	೧೨	ಮಧ್ಯಾನ್ಹ	೨	ಅಗೊಸ್ತು	೨೮	ಪ್ರಾತಃ.	೩
ಸಪ್ತಂಬರ	೮	ಪ್ರಾತಃ.	೪	ಸಪ್ತಂಬರ	೨೪	ರಾತ್ರಿ	೧೨
ಒಕ್ತೋಬರ	೩	ಹಗಲು	೧೦	ಒಕ್ತೋಬರ	೩೨	ಪ್ರಾತಃ.	೮
ನವಂಬರ	೪	ಸಾಯಂ.	೮	ನವಂಬರ	೧೮	„	೮
ದಶಂಬರ	೩	ಪ್ರಾತಃ.	೧೦	ದಶಂಬರ	೧೫	ಸಾಯಂ.	೫
„	೨೧	ಸಾಯಂ.	೫				

೧೮೯೨ರಲ್ಲಿ ಕುಜಾದಿ ಗ್ರಹಗಳ ರಾಶಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾಶಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜಸ್ಥಿತಿ	ಜನವರಿ	೧	ಜನವರಿ	೧೩	ಪೂರ್ವಾಹ್ನ	೧	೪೭	ತುಲಾರಾಶಿಯಲ್ಲಿ
	"	೧೩	ಫೆಬ್ರುವರಿ	೨೯	ರಾತ್ರಿ	೧೦	೨	ವೃಶ್ಚಿಕ
	ಫೆಬ್ರುವರಿ	೨೯	ಎಪ್ರಿಲ್	೨೧	ಸಾಯಂಕಾಲ	೬	೩೭	ಧನು
	ಎಪ್ರಿಲ್	೨೧	ಒಕ್ತೋಬರ	೩೫	ರಾತ್ರಿ	೧೦	೧೫	ಮಕರ
	ಒಕ್ತೋಬರ	೩೫	ಡಿಸೆಂಬರ	೧೭	ಪ್ರಾತಃಕಾಲ	೧	೪೩	ಕುಂಭ
	ಡಿಸೆಂಬರ	೧೭	"	೩೧	ರಾತ್ರಿ	೧೨	೦	ಮೀನದಲ್ಲಿ
Mercury ಬುಧಸ್ಥಿತಿ	ಜನವರಿ	೧	ಫೆಬ್ರುವರಿ	೨	ಸಾಯಂಕಾಲ	೬	೫೫	ಧನುಸ್ಸಿನಲ್ಲಿ
	ಫೆಬ್ರುವರಿ	೨	"	೨೩	ಪ್ರಾತಃಕಾಲ	೪	೨೬	ಮಕರ
	"	೨೩	ಮಾರ್ಚಿ	೯	ಮಧ್ಯಾಹ್ನ	೧	೩೪	ಕುಂಭ
	ಮಾರ್ಚಿ	೯	"	೨೫	"	೧೨	೪೬	ಮೀನ
	"	೨೫	ಜೂನ್	೨	ಪ್ರಾತಃಕಾಲ	೫	೩೯	ಮೇಷ
	ಜೂನ್	೨	"	೧೭	"	೧೦	೫೨	ವೃಷಭ
	"	೧೭	ಜುಲಾಯಿ	೧	ಮಧ್ಯಾಹ್ನ	೧	೫೪	ಮಿಥುನ
	ಜುಲಾಯಿ	೧	"	೧೯	"	೨	೧೦	ಕರ್ಕಾಟಕ
	"	೧೯	ಸಪ್ತಂಬರ	೨೫	ಪ್ರಾತಃಕಾಲ	೧೦	೫೭	ಸಿಂಹ
	ಸಪ್ತಂಬರ	೨೫	ಒಕ್ತೋಬರ	೧೨	"	೯	೫೬	ಕನ್ಯಾ
	ಒಕ್ತೋಬರ	೧೨	"	೩೧	"	೯	೩	ತುಲಾ
	"	೩೧	ನವಂಬರ	೨೨	ಹಗಲು	೧೧	೨೧	ವೃಶ್ಚಿಕ
	ನವಂಬರ	೨೨	ಡಿಸೆಂಬರ	೧೧	ಪ್ರಾತಃಕಾಲ	೭	೪೦	ಧನು
	ಡಿಸೆಂಬರ	೧೧	"	೩೧	ರಾತ್ರಿ	೧೨	೦	ವಕ್ರವೃಶ್ಚಿಕದಲ್ಲಿ
Jupiter ಗುರುಸ್ಥಿತಿ	ಜನವರಿ	೧	ಫೆಬ್ರುವರಿ	೧೩	ಪ್ರಾತಃಕಾಲ	೫	೧೧	ಕುಂಭದಲ್ಲಿ
	ಫೆಬ್ರುವರಿ	೧೩	ಜುಲಾಯಿ	೩	"	೩	೩೬	ಮೀನ
	ಜುಲಾಯಿ	೩	ಸಪ್ತಂಬರ	೨೫	"	೭	೨೨	ಮೇಷ
	ಸಪ್ತಂಬರ	೨೫	ಡಿಸೆಂಬರ	೩೧	ರಾತ್ರಿ	೧೨	೦	ವಕ್ರಮೀನದಲ್ಲಿ
Venus ಶುಕ್ರಸ್ಥಿತಿ	ಜನವರಿ	೧	ಜನವರಿ	೧೪	ಪ್ರಾತಃಕಾಲ	೧೦	೫೯	ಮಕರದಲ್ಲಿ
	"	೧೪	ಫೆಬ್ರುವರಿ	೭	ಸಾಯಂಕಾಲ	೬	೩೧	ಕುಂಭ
	ಫೆಬ್ರುವರಿ	೭	ಮಾರ್ಚಿ	೩	;;	೭	೫೫	ಮೀನ
	ಮಾರ್ಚಿ	೩	"	೩೮	;;	೭	೧೧	ಮೇಷ
	"	೩೮	ಎಪ್ರಿಲ್	೩೭	;;	೭	೩೧	ವೃಷಭ
	ಎಪ್ರಿಲ್	೩೭	ಜೂನ್	೩	ಪ್ರಾತಃಕಾಲ	೬	೩೭	ಮಿಥುನ
	ಜೂನ್	೩	ಜುಲಾಯಿ	೩	ಸಾಯಂಕಾಲ	೭	೫೦	ಕರ್ಕಾಟಕ
	ಜುಲಾಯಿ	೩	ಆಗೊಸ್ತು	೨೯	ಪ್ರಾತಃಕಾಲ	೯	೨೩	ವಕ್ರಮಿಥುನ
	ಆಗೊಸ್ತು	೨೯	ಸಪ್ತಂಬರ	೩	ಸಾಯಂಕಾಲ	೬	೧೩	ಪುನಃಕರ್ಕಾಟಕ
	ಸಪ್ತಂಬರ	೩	ಒಕ್ತೋಬರ	೨೭	ಪ್ರಾತಃಕಾಲ	೭	೫೪	ಸಿಂಹ
	ಒಕ್ತೋಬರ	೨೭	ನವಂಬರ	೨೨	;;	೫	೧೯	ಕನ್ಯಾ
	ನವಂಬರ	೨೨	ಡಿಸೆಂಬರ	೧೬	ಸಾಯಂಕಾಲ	೪	೪೪	ತುಲಾ
	ಡಿಸೆಂಬರ	೧೬	"	೩೧	ರಾತ್ರಿ	೧೨	೦	ವೃಶ್ಚಿಕದಲ್ಲಿ
Saturn ಶನಿಸ್ಥಿತಿ	ಜನವರಿ	೧	ಡಿಸೆಂಬರ	೩೧	ರಾತ್ರಿ	೧೨	೦	ಕನ್ಯೆಯಲ್ಲಿ
Moon's ascending node ರಾಹುಸ್ಥಿತಿ	ಜನವರಿ	೧	ಫೆಬ್ರುವರಿ	೨	ಪ್ರಾತಃಕಾಲ	೯	೩೦	ವೃಷಭದಲ್ಲಿ
	ಫೆಬ್ರುವರಿ	೨	ಡಿಸೆಂಬರ	೩೧	ರಾತ್ರಿ	೧೨	೦	ಮೇಷದಲ್ಲಿ

೧೯೯೭ನೇ ಇಸವಿಯಲ್ಲಿ ಸಂಭವಿಸುವ

ಗ್ರಹಣಗಳು.

ಈ ವರ್ಷದಲ್ಲಿ ಎರಡು ಸೂರ್ಯಗ್ರಹಣಗಳೂ ಎರಡು ಚಂದ್ರಗ್ರಹಣಗಳೂ ಅವೆ. ಅವುಗಳಲ್ಲಿ ಚಂದ್ರಗ್ರಹಣಗಳೆರಡು ಮಾತ್ರ ನಮಗೆ ಕಾಣುವಂಥವು.

I. ಎಪ್ರಿಲ್ ೨೬ ಚೈತ್ರ ಅಮಾವಾಸ್ಯೆ ರಾತ್ರಿ ಸೂರ್ಯನ ಪೂರ್ಣ ಗ್ರಹಣ. ರಾತ್ರಿ ೧೨ರ ಮೇಲೆ ೪೬ ನಿಮಿಷಕ್ಕೆ ಆರಂಭಿಸಿ ಘಂಟೆ ೨ ನಿಮಿಷ ೧೩ಕ್ಕೆ ಮಧ್ಯವಾಗಿ, ಘಂಟೆ ೫ ನಿಮಿಷ ೩ಕ್ಕೆ ಅಂತ್ಯವಾಗುವದು. ಇದು ದಕ್ಷಿಣ ಅಮೆರಿಕ ಮತ್ತು ಶಾಂತಸಮುದ್ರದಲ್ಲಿ ಮಾತ್ರವೇ ದೃಶ್ಯ.

II. ಮೇ ೧೧ ವೈಶಾಖ ಪೂರ್ಣಿಮ ರಾತ್ರಿ ಚಂದ್ರಕ್ಕೆ ಪಾರ್ಶ್ವಗ್ರಹಣ (ಕಿಂಚಿತ್ ನೂನ ಪೂರ್ಣಗ್ರಾಸ)

ಚಂದ್ರನ ಉತ್ತರ ಬಿಂದುವಿನಿಂದ ೯೨ ಭಾಗ ಪೂರ್ವಕ್ಕೆ ಅಂದರೆ ಈಶಾನ್ಯ ಸ್ಪರ್ಶ	ಘಂಟೆ ೨	ನಿಮಿಷ ೧೦	ಗ್ರಹಣಪರಿಮಾಣ $\frac{೧೯}{೨೦}$
ಗ್ರಹಣದ ಮಧ್ಯಕಾಲ	,, ೩	,, ೫೩	
,, ,, ,, ೪೧ ಭಾಗ ಪಶ್ಚಿಮಕ್ಕೆ ಅಂದರೆ ನಾಯವ್ಯ ಮೋಕ್ಷ	,, ೪	,, ೩೬	

III. ಒಕ್ತೋಬರ ೨೦ ಆಶ್ವೀಜ ಅಮಾವಾಸ್ಯೆ ಸೂರ್ಯಗೆ ಪಾರ್ಶ್ವಗ್ರಹಣವು. ಇದು ಉತ್ತರ ಅಮೆರಿಕ ಅತ್ಲಾಂತಿಕ ಸಮುದ್ರದಲ್ಲಿಯೂ ಗೋಚರ.

ರಾತ್ರಿ ಸ್ಪರ್ಶ	ಘಂಟೆ ೯	ನಿಮಿಷ ೧೪
ಗ್ರಹಣದ ಮಧ್ಯಕಾಲ	,, ೧೧	,, ೩೪
ಮೋಕ್ಷ	,, ೧	,, ೪೭

IV. ನವಂಬರ ೪ ಕಾರ್ತಿಕ ಪೂರ್ಣಿಮಾ ಚಂದ್ರನ ಪೂರ್ಣಗ್ರಹಣ (ಖಗ್ರಾಸ).

ಚಂದ್ರನ ದಕ್ಷಿಣ ಬಿಂದುವಿನಿಂದ ಪೂರ್ವಕ್ಕೆ ೯೯ ಭಾಗ ಅಂದರೆ ಆಗ್ನೇಯ ಸ್ಪರ್ಶ	ಸಾಯಂಕಾಲ ಘಂಟೆ ೬	ನಿಮಿಷ ೯
ನಿಮೀಲನ	,, ,, ೯	,, ೩೨
ಗ್ರಹಣದ ಮಧ್ಯ	,, ,, ೯	,, ೪೪
ಉನ್ಮೀಲನ	,, ,, ೯	,, ೬
,, ,, ,, ಪಶ್ಚಿಮಕ್ಕೆ ೫೨ ಭಾಗ ಅಂದರೆ ನೈಋತ್ಯ ಮೋಕ್ಷ	,, ,, ೧೦	,, ೨೦

ಗುರು ಶುಕ್ರರ ಉದಯಸ್ತಂಗಳು.

ಮಾರ್ಚಿ ೪ನೆಯಿಂದ ಎಪ್ರಿಲ್ ೫೮ರ ವರೆಗೆ ಗುರು ಅಸ್ತ. ಜುಲಾಯಿ ೯ನೆಯಿಂದ ೧೯ನೆ ವರೆಗೆ ಶುಕ್ರಾಸ್ತ.

ಗುರುಚಂದ್ರಯುತಿ.

ಈ ವರ್ಷದಲ್ಲಿ ಗುರುಚಂದ್ರಸಮಾಗಮಗಳು ಮೂರು ನಮಗೆ ಕಾಣುವಂಥವು ಗಳು ಅವೆ. ಆವುಗಳಲ್ಲಿ (ರಾತ್ರಿ ಹನ್ನೆರಡು ಘಂಟೆಗೆ ಮುಂಚೆ) ಅನುಕೂಲವಾಗಿ ರುವ ಒಂದನ್ನು ಪ್ರಿಯ ವಾಚಕರಿಗೋಸ್ಕರ ಇಲ್ಲಿ ಕೊಡೋಣವಾಗಿದೆ. ಒಕ್ತೋಬರ ೬ನೇ ಆಶ್ವೀಜ ಪೂರ್ಣಿಮ ಗುರುವಾರ ರಾತ್ರಿ ಘಂಟೆ ೧೦ ನಿಮಿಷ ೩ಕ್ಕೆ ಚಂದ್ರನ ಪೂರ್ವಭಾಗದಲ್ಲಿ ಗುರುಗ್ರಸ್ತನಾಗಿ, ಘಂಟೆ ೧೦ ನಿಮಿಷ ೫೬ಕ್ಕೆ ಚಂದ್ರನ ಪಶ್ಚಿಮ ಭಾಗದಿಂದ ಹೊರಗೆ ಬರುವದು. ಸುಮಾರು ೫೩ ನಿಮಿಷ ಗುರು ಕಾಣಲಿಕ್ಕಿಲ್ಲ.

ಇನ್ನು ಬೇರೆ ಗ್ರಹರು ಚಂದ್ರನಿಂದ ಮುಚ್ಚಲ್ಪಡುವ ಗ್ರಹಯುತಿ (ಎಂಬ ಏನೋ ದಸಂಭವ)ಗಳು ಈ ವರ್ಷ ಗಣಿಸಲಿಕ್ಕೆ ಸಮಯ ದೊರಕದ ಕಾರಣ, ದೇವರ ಚಿತ್ತ ವಾದರೆ, ಮುಂದಕ್ಕೆ ಕೊಡ ಬಹುದಾಗಿ ತಿಳಿಸುತ್ತೇವೆ. ಶುಭವಿರಲಿ!

ಸ್ವಸ್ತಿ!

ಕಾಲಮಾನನಿರ್ಣಯ.

ದಿನವನ್ನು ವಿಭಾಗಿಸುವ ರೀತಿ ಹಿಂದು ಜನರಲ್ಲಿ ಬೇರೆ, ವಿಲಾಯತಿಯವರಲ್ಲಿ ಬೇರೆ; ಹ್ಯಾಗಂದರೆ:

ಹಿಂದು ರೀತಿ:	ವಿಲಾಯತಿ ರೀತಿ:
೧ ದಿನಕ್ಕೆ ೬೦ ಘಳಿಗೆ	೧ ದಿನಕ್ಕೆ ೨೪ ತಾಸು (ಹೋರ)
೧ ಘಳಿಗೆಗೆ ೬೦ ವಿಘಳಿಗೆ	೧ ತಾಸಿಗೆ ೬೦ ಮಿನಿಟು (ನಿಮಿಷ)
೧ ವಿಘಳಿಗೆಗೆ ೬ ಪ್ರಾಣ	೧ ಮಿನಿಟಿಗೆ ೬೦ ಸೆಕೆಂದ (ಕ್ಷಣ)

ಪ್ರಕಾರ ಈ ೧ ತಾಸಿಗೆ ೨½ ಘಳಿಗೆ
೧ ಘಳಿಗೆಗೆ ೨೪ ಮಿನಿಟು
೧ ವಿಘಳಿಗೆಗೆ ೨೪ ಸೆಕೆಂದ
೧ ಪ್ರಾಣಕ್ಕೆ ೪ ಸೆಕೆಂದ ಸಮವಾಗಿವೆ.

೨. ದಿನಮಾನ. ಸೂರ್ಯನು ಒಂದು ಸ್ಥಳದ ಮಧ್ಯಾನ್ಹರೇಖೆ ದಾಟಿ, ತಿರಿಗಿ ಅಲ್ಲಿಗೆ ಬರುವಷ್ಟು ಕಾಲಕ್ಕೆ "ಸೌರದಿನ" ಅನ್ನುವರು. ಒಂದು ಸೂರ್ಯೋದಯ ಹಿಡಿದು ಮತ್ತೊಂದು ಸೂರ್ಯೋದಯ ಪರ್ಯಂತರ "ಸಾವನದಿನ"ವೆಂದೆನ್ನಿಸುವದು. ವಿಲಾಯತಿಯವರು ಮಧ್ಯರಾತ್ರಿ ೧೨ ಘಂಟೆಯಿಂದ ಪುನಃ ಮಧ್ಯರಾತ್ರಿ ೨೪ ಘಂಟೇ ವರೆಗೆ ಒಂದು ದಿನವೆಂದೆಣಿಸುತ್ತಾರೆ.

೩. ಮಾಸಮಾನ. ಚಂದ್ರವು ಒಂದು ಅಮಾವಾಸ್ಯೆಯಿಂದ ಮತ್ತೊಂದು ಅಮಾವಾಸ್ಯೆಯ ತನಕ ಪೃಥ್ವಿಯ ಸುತ್ತಲು ಒಂದು ಪ್ರದಕ್ಷಿಣ ಮಾಡುವದಕ್ಕೆ ಹಿಡಿಯುವ ಕಾಲವು "ಚಾಂದ್ರಮಾಸ"ವೆಂದು ವರ್ತಿಸುವದು. ಆದರೆ ಪೃಥ್ವಿಯು ಮಾಡುವ ಸೂರ್ಯಪ್ರದಕ್ಷಿಣದ ಫಲದಿಂದ ಸೂರ್ಯವು ದ್ವಾದಶರಾತಿಗಳಲ್ಲಿ ಒಂದನ್ನು ಸಂಕ್ರಮಿಸಿ ಮತ್ತೊಂದಕ್ಕೆ ತೀರುವದಕ್ಕೆ ಬೇಕಾದ ಕಾಲವು "ಸೌರಮಾಸ"ವೆಂದನ್ನಿಸುವದು.

೪. ಸಂವತ್ಸರಮಾನ. ಪೃಥ್ವಿಯು ತನ್ನ ಕಕ್ಷದಲ್ಲಿ ಸೂರ್ಯನ ಸುತ್ತಲು ಒಂದು ಪ್ರದಕ್ಷಿಣ ಮಾಡುವದಕ್ಕೆ ೩೬೫ ದಿನ, ೬ ತಾಸು, ೪೯ ಮಿನಿಟು, ೪೯ ಸೆಕೆಂದ (ಅಂದರೆ ೩೬೫ ದಿನ, ೧೪ ಘಳಿಗೆ, ೩೨ ವಿಘಳಿಗೆ) ಹಿಡಿಯುವದು.

೫. ಅಯನಗಳು. ಸೂರ್ಯನು ಮಕರನಿಂದ ಮಿಥುನಾಂತ್ಯ ವರೆಗೆ ಉತ್ತರಕ್ಕೆ ಗಮಿಸುವದರಿಂದ ಉತ್ತರಾಯಣವೆಂದೂ ಕರ್ಕಾಟಕದಿಂದ ಧನು ಅಂತ್ಯ ವರೆಗೆ ದಕ್ಷಿಣಕ್ಕೆ ಗಮಿಸುವದರಿಂದ ದಕ್ಷಿಣಾಯನವೆಂದೂ ಹೇಳುತ್ತಾರೆ.

ವರ್ಷಫಲವು.

ವರ್ಷಫಲವನ್ನು ತಿಳಿಯ ಬೇಕೆಂದು ಹಲವರು ಕುತೂಹಲ ಪಡುವರು. ಪ್ರತಿ ವರ್ಷವೂ ಪಂಚಾಂಗದಲ್ಲಿ ವರ್ಷಫಲವನ್ನು ಹೇಳ ಬೇಕಷ್ಟೇ. ಆದರೆ ವರ್ಷಫಲವನ್ನು ಹೇಳುವ ಅಧಿಕಾರವು ಯಾರಿಗೆ ಆದೆ? ಪಂಚಾಂಗ ಗುಣಿಸುವವನಿಗೆ ಅದೆಯೋ? ಇಲ್ಲ; ತ್ರಿಕಾಲ ಜ್ಞಾನಿಯಾಗಿರುವವನು ಯಾವನೋ ಅವನಿಗೆ ಆ ಅಧಿಕಾರವು ಉಂಟು. ಇನ್ನೊಂದು ಘಳಿಗೆಯಲ್ಲಿ ಏನಾದೀತೆಂದು ಅರಿಯದ ಮೂಢರಾದ ಮನುಷ್ಯರಿಗೆ ತ್ರಿಕಾಲಜ್ಞಾನವೆಲ್ಲಿಂದ? ದೇವರೊಬ್ಬನೇ ತ್ರಿಕಾಲಜ್ಞಾನಿ. ಮಹಾ ಮಹಿಮೆಯುಳ್ಳವನೂ ಸರ್ವಶಕ್ತನೂ ಸರ್ವ ಕರ್ತನೂ ಸರ್ವನಿಯಾಮಕನೂ ಆಗಿರುವ ದೇವರು ಭಕ್ತವತ್ಸಲನೆಂದು ತಂದೆ ಎಂದು ಹೊಗಳಿಸಿಕೊಳ್ಳುತ್ತಾನೆ. ಮಕ್ಕಳು ತಾಯಿ ತಂದೆಗಳಲ್ಲಿ ಭರವಸವಿಟ್ಟು ಬರುವ ಕಾಲದಲ್ಲಿ ಏನು ಸಂಭವಿಸುವದೆಂದು ವ್ಯಾಕುಲ ಪಡದೆ ನಿಶ್ಚಿಂತರಾಗಿರುವಂತೆ ಭಕ್ತರು ದೇವರಲ್ಲಿ ದೃಢ ಭಕ್ತಿ ಇಟ್ಟು ತಮ್ಮ ಯಾವತ್ತು ಆರಭಾರವನ್ನು ಆತನಿಗೊಪ್ಪಿಸಿ ಸಂತೋಷದಲ್ಲಿರುವರು. ಅವರಿಗೆ ವರ್ಷಫಲ ತಿಳಿಯ ಬೇಕೆಂಬುವ ಅವಶ್ಯವೇನು? ದೇವರು ಮನುಷ್ಯರಿಗೆ ತಿಳಿಯ ಪಡಿಸದ್ದನ್ನು ಗಣಿತದಿಂದಲೋ ಇನ್ನೊಂದು ವಿದ್ಯೆಯಿಂದಲೋ ತಿಳಿಯ ಬೇಕೆಂದು ಪ್ರಯತ್ನ ಮಾಡುವದು ದೇವರಲ್ಲಿ ಅಭರವಸವಾಗುವದಕ್ಕೆ ಕಾರಣವಾಗುವದರಿಂದ ಪಾತಕವೆಂದು ತಿಳಿದು ಭಕ್ತರು ಆ ಮಾರ್ಗದಿಂದ ತೊಲಗಿ ಸ್ವಾಮಿಾ ನೀನೇ ಗತಿ, ನಿತ್ಯಕ್ಕೂ ನೀನೇ ನನ್ನ ಆಶ್ರಯವೆಂದು ಆತನ ಶರಣಹೊಕ್ಕು ಶಾಂತವಾಗಿರುವರು. ಈಗ ನಿಜವಾದ ವರ್ಷಫಲ ವನ್ನು ಕೇಳುತ್ತೀರೋ? ಮೇಘಗಳ ಸ್ವಾಮಿಯು ಪರ್ಜನ್ಯದ ಒಡೆಯನು ದೇವರೇ. ತಕ್ಕ ಶ್ರಾಯದಲ್ಲಿ ಮಳೆ ಮಂಜು ಬಿಸಿಲು ಗಾಳಿ ಕೊಡಿಸಿ, ಭೂಮಿಯ ಬೆಳಸನ್ನು ಕಾಪಾಡಿ ಪ್ರಜೆ ಗಳನ್ನು ಸಲಹುವವನೇ ಆತನು. ಈ ವರ್ಷಕ್ಕೆ ಮಾತ್ರವಲ್ಲ ನಿತ್ಯಕ್ಕೂ ಸಾರ್ವಭೌಮನಾ ಗಿದ್ದಾನೆ. ಊರ್ಧ್ವಲೋಕವೇ ಆತನ ಸಿಂಹಾಸನವು. ಭೂಮಿಯೇ ಅವನ ಪಾದಪೀಠವು. ಈ ವರ್ಷಕ್ಕೆ ಅರಸು ಮಹಾರಾಣಿ ವಿಕ್ಟೋರಿಯ ಚಕ್ರವರ್ತಿನಿಯವರು. ಮಹೋನ್ನತ ನಾದ ದೇವರು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆ, ತನ್ನ ಮನಸ್ಸಿಗೆ ಸರಿಯಾದವರಿಗೆ ಅದನ್ನು ಕೊಡುತ್ತಾನೆ ಎಂಬ ಸತ್ಯಶ್ರುತಿಯ ಮೇರೆಗೆ ಈ ಹಿಂದೂ ಸಾಮ್ರಾಜ್ಯದ ಭಾರ ವನ್ನು ಭಗವಂತನು ಅವರಿಗೆ ಒಪ್ಪಿಸಿದ್ದಾನೆ. ಈ ಸಾಮ್ರಾಜ್ಯದ ನಾಲ್ಕೂ ಕಡೆಯಲ್ಲಿ ಸ್ವಸ್ಥತೆ ಇರುವಂತೆ ಆತನೇ ಮಾಡಿದ್ದಾನೆ. ಇನ್ನು ಇದೇ ಪ್ರಕಾರವೂ ಇದಕ್ಕಿಂತಲೂ ಹೆಚ್ಚಾಗಿಯೂ ಸಮಾಧಾನವೂ ಸ್ವಸ್ಥತೆಯೂ ಸೀಮೆಯಲ್ಲಿ ನೆಲೆಗೊಳ್ಳುವದಾಗಲೆಂದು ಸರ್ವರೂ ದೇವ ರನ್ನು ಪ್ರಾರ್ಥಿಸ ಬೇಕು. ಮಂತ್ರಿಗಳು ಸಾಲ್ಸಬರಿ ಪ್ರಭುಗಳು. ಅವರೂ ಅವರ ಮಂತ್ರಿ ಸಭೆಯೂ ಚಕ್ರವರ್ತಿನಿಯವರ ಪ್ರಜೆಗಳ ಹಿತಚಿಂತಕರಾಗಿ ರಾಜ್ಯಭಾರವನ್ನು ಮಾಡುವ ಹಾಗೆ ದೇವರು ಅವರಿಗೆ ವಿವೇಕಜ್ಞಾನವನ್ನು ದಯೆಪಾಲಿಸಲಿ. ಮತ್ತು ಅವರಿಂದ ಇತ್ತ ಕಡೆಗೆ ಕಳುಹಿಸಿಕೊಂಡು ಬರುವ ವೈಸರಾಯ ಧೊರೆಗಳು ಗವರ್ನರ್ ಧೊರೆಗಳು ಸರ್ವ

ಅಧಿಕಾರಸ್ಥರು ಉತ್ತಮ ಜ್ಞಾನದಿಂದ ತುಂಬಿ, ದೇವರು ತಮ್ಮ ಮೇಲ್ವಿಚಾರಣೆಗೆ ಒಳಪಡಿಸಿದ ಅಸಂಖ್ಯ ಪ್ರಜೆಗಳನ್ನು ದಯೆಯಿಂದ ನಡಿಸಿಕೊಂಡು ಬರುವವರಾಗಲಿ. ಮತ್ತು ಈ ಒಳ್ಳೇ ಆರಸ್ಥಾನದಲ್ಲಿರುವ ನಾನಾ ಭಾಷೆಗಳನ್ನಾಡುವ ಜನಾಂಗಗಳೆಲ್ಲಾ ದೇವರು ತಮಗೆ ಶುಭಕಾಲವನ್ನು ಕೊಟ್ಟಿದ್ದಾನೆಂದು ನೆನಸಿ ಆ ಒಬ್ಬನೇ ಜೀವವುಳ್ಳ ದೇವರಾಗಿರುವಾತನನ್ನು ಆತನು ಈ ಲೋಕಕ್ಕೆ ಕಳುಹಿಸಿದ ಏಕ ರಕ್ಷಕನಾದ ಯೇಸು ಕ್ರಿಸ್ತನನ್ನು ನಂಬಿ ತಿಳಿದು ಸ್ಥಿರಂಜೀವ ಪದವಿಗೆ ಬಾಧ್ಯಸ್ಥರಾಗಲಿ.

ಈಗ ಗತವರ್ಷದಲ್ಲಿ ಸಂಭವಿಸಿದ ಮುಖ್ಯ ಮುಖ್ಯ ವಿಷಯಗಳನ್ನು ವಾಚಕರಿಗೆ ಶ್ರುತಪಡಿಸುತ್ತೇವೆ, ಇದೇ ನಾವು ಹೇಳುವ ವರ್ಷಫಲವು. ಸ್ತ್ರೀಯು ಹತ್ತು ವರ್ಷದವಳಾದರೆ ಪುರುಷನ ಸಹವಾಸಕ್ಕೆ ಅರ್ಹಳಾಗುತ್ತಾಳೆಂಬ ಮೊದಲಿನ ಕಾಯಿದೆಯನ್ನು ಸರಕಾರದವರು ರದ್ದು ಪಡಿಸಿ ಸ್ತ್ರೀಯ ವಯಃಪರಿಮಾಣವನ್ನು ಹನ್ನೆರಡು ವರ್ಷವೆಂದು ಹೆಚ್ಚಿಸಿ ಹೊಸ ಕಾಯಿದೆ ಮಾಡಿದರು. ಈ ಕಾಯಿದೆಯಿಂದ ಸ್ತ್ರೀಜಾತಿಗೆ ಎಷ್ಟು ಶುಭವಾಯಿತೆಂದು ಸೂಜ್ಞರು ತಿಳಿಯುವರು. ಆದರೆ ಬಹು ಜನರು ಈ ಕಾಯಿದೆ ತಮ್ಮ ಶಾಸ್ತ್ರಕ್ಕೂ ಮತಾಚಾರಕ್ಕೂ ವಿರೋಧವಾಗಿದೆ, ಮತಕಾರ್ಯಗಳಲ್ಲಿ ಸರಕಾರದವರು ಕೈಹಾಕುವದು ನ್ಯಾಯವಲ್ಲವೆಂದು ಗದ್ದಲ ಮಾಡಿ ಈ ಕಾಯಿದೆಯನ್ನು ಏರ್ಪಡಿಸದಂತೆ ಪ್ರಯತ್ನ ಮಾಡಿದರು. ಸರಕಾರದವರು ಇಂಥಾ ನಿಷ್ಪ್ರಯೋಜಕ ಮಾತುಗಳನ್ನು ಲಕ್ಷ್ಯ ಮಾಡಲಿಲ್ಲ. ಮತಾಚರಣೆ ಬೇರೆ, ಕ್ರೂರ ಅನ್ಯಾಯವಾದ ಪದ್ಧತಿಯು ಬೇರೆ. ಹೋಳಿಹಬ್ಬದಲ್ಲಿ ಬೈಯುವದು, ಕದಿಯುವದು, ಶಿವರಾತ್ರಿಯಲ್ಲಿ ನೆರೆಹೊರೆಯವರಿಗೆ ಉಪಟಳ ಮಾಡುವದು ನರಬಲಿ ಕೊಡುವದು ತನ್ನ ತನ್ನ ಮತವೆಂದು ಒಬ್ಬೊಬ್ಬನು ಹೇಳುವದಾದರೆ ಆರಸ್ಥಾನದವರು ರಾಜ್ಯದಲ್ಲಿ ವ್ಯವಸ್ಥೆಯನ್ನು ಕಾಪಾಡಿಸುವದು ಹ್ಯಾಗೆ? ದಂತಕಥೆಗಳನ್ನು ಸರಕು ಮಾಡದೆ ಕೆಡಕು ಪದ್ಧತಿಗಳನ್ನು ನಿರ್ಮೂಲ ಮಾಡುವದು ಹಿತವಾದ ಕಾಯಿದೆಗಳನ್ನು ಮಾಡುವದು ರಾಜ್ಯಧರ್ಮವಾಗಿದೆ. ಸತಿಸಹಗಮನ, ಶಿಡಿಪೂಜೆ ಮೊದಲಾದ ಕೆಟ್ಟ ನಡವಡಿಕೆಗಳನ್ನು ಅತಃಪೂರ್ವದಲ್ಲಿ ಸರಕಾರದವರು ನಿಲ್ಲಿಸಿ ಬಿಟ್ಟರು.—ಹಿಂದುಸ್ಥಾನದಲ್ಲಿ ಇಂಗ್ಲಿಷ ವಿದ್ಯಾಭ್ಯಾಸ ಮಾಡ ಬೇಕೆಂಬ ಹುಮ್ಮಸವು ಅಧಿಕಾಧಿಕ ಬಲವಾಗುತ್ತಾ ಬರುತ್ತದೆ. ತರುಣರು ಮಾತ್ರವಲ್ಲಾ ತರುಣಿಯವರು ಸಹಾ ಇಂಗ್ಲಿಷು ಕಲಿತು, ಪರೀಕ್ಷೆಗಳಲ್ಲಿ ತೇರ್ಗಡೆ ಪಟ್ಟು ಬಿರುದುಗಳನ್ನು ಸಂಪಾದಿಸಿದ್ದಲ್ಲದೆ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಕೆಲವರು ಸರಕಾರಿ ಉದ್ಯೋಗಗಳನ್ನು ಹೊಂದಿಕೊಂಡಿದ್ದಾರೆ. ಯುರೋಪೀಯ ವಿದ್ಯೆಯು ಪ್ರಸಾರವಾಗುತ್ತಾ ಮನುಷ್ಯರ ಬುದ್ಧಿಯೂ ಮನಸ್ಸೂ ತಿದ್ದುಪಾಟಾಗಿ ಹೊಸ ಆಲೋಚನೆಗಳು ರೂಢಿಯಾಗುತ್ತಾ ಬಂದ ಹಾಗೆ ಈ ದೇಶದ ಪ್ರಾಚೀನ ಪದ್ಧತಿಗಳೂ ಕುಲಾಚಾರಗಳೂ ಕಾಣದೆ ಹೋಗುತ್ತವೆ. ಉಣ್ಣುವದರಲ್ಲಿ ತಿನ್ನುವದರಲ್ಲಿ ಮುಟ್ಟುವದರಲ್ಲಿ ಧರ್ಮವದೆ ಎಂಬುವ ಅರುವು ದಿನೆದಿನೇ ಕ್ಷೀಣವಾಗುತ್ತದೆ. ಆದ್ದರಿಂದ ಹಳೇ ತರದ ವಿಶ್ವಾಸವುಳ್ಳವರು ಬ್ರಾಹ್ಮಣ ಜಾತಿಯವರಿಗೆ ರಾಜಭಯವೂ ಜಾತಿಭಯವೂ ಇಲ್ಲದೆ ಅಧರ್ಮವು ಬೆಳೆಯುತ್ತದೆ, ಶೂದ್ರ ಮ್ಲೇಚ್ಛ ಮೊದಲಾದವರ ಸಂಗಡ ಅನ್ನೋದಕ ವ್ಯವ

ಹಾರ ಮಾಡುವದೂ, ಅಭಕ್ಷ್ಯಭಕ್ಷಣ ಮಾಡುವದೂ, ವಿಧವೆಗಳ ಪುನರ್ವಿವಾಹವೂ ಮೊದಲಾದ ದುಷ್ಕರ್ಮಗಳು ಭಯಂಕರವಾಗಿ ಪ್ರಸಿದ್ಧವಾಗುತ್ತವೆಂದು ಪ್ರಳಾಪ ಪಡುತ್ತಾರೆ. ಆದರೆ ಈ ಪ್ರಳಾಪದಿಂದ ಪ್ರಯೋಜನವಿಲ್ಲಾ. ಯುರೋಪ ಖಂಡದ ಕಲಾಕೌಶಲ ಉದ್ದಿಮೆಗಳನ್ನೂ ವಿದ್ಯೆಯನ್ನೂ ಕಲಿತು ಉಪಜೀವನ ಮಾಡ ಬೇಕೆಂಬ ಅಪೇಕ್ಷೆಯು ಸರ್ವರಲ್ಲಿಯೂ ಹುಟ್ಟುತ್ತದೆ. ಹಳೆ ಪದ್ಧತಿಗಳು ಈ ಅಪೇಕ್ಷೆಗೆ ವಿಡ್ಡೂರ ಮಾಡಿದರೆ ತಮ್ಮಷ್ಟಕ್ಕೆ ತಾವೇ ಮುಣುಗಿ ಹೋಗುವದು ನಿಶ್ಚಯವು. ಮುಖ್ಯವಾಗಿ ಯೇಸು ಕ್ರಿಸ್ತ ಸ್ವಾಮಿಯವರ ಸುವಾರ್ತೆಯು ನಾಲ್ಕು ಕಡೆಯಲ್ಲಿಯೂ ಪ್ರಬಲವಾಗುತ್ತಾ ಬರುವದರಿಂದ ಬೆಳಕು ಮೂಡಿದ್ದಲ್ಲಿ ಕತ್ತಲೆ ಓಡುವಂತೆ ಹಳೇ ಮತವು ಅದೃಶ್ಯವಾಗುತ್ತದೆ. ಮೂರ್ತಿಗಳನ್ನು ಪೂಜಿಸುವದು ಒಳ್ಳೇದೋ? ಪರಮೇಶ್ವರನನ್ನು ಅನನ್ಯಭಾವದಿಂದ ಆರಾಧಿಸುವದು ಒಳ್ಳೇದೋ? ಮತ್ಸ್ಯಕೂರ್ಮವಾರಾಹ ಮೊದಲಾದ ಪ್ರಾಣಿಗಳೂ ರಾಮಕೃಷ್ಣ ಪರಶುರಾಮ ಮೊದಲಾದ ವೀರರೂ ದೇವರ ಅವತಾರವೆಂದು ನಂಬುವದು ಒಳ್ಳೇದೋ? ಯೇಸು ಕ್ರಿಸ್ತ ಸ್ವಾಮಿಯ ಪುಣ್ಯಚರಿತಾಮೃತವನ್ನು ಓದಿ ಅವರ ಶಿಷ್ಯರಾಗುವದು ಒಳ್ಳೇದೋ? ವಾಚಕರೇ ನಿರ್ಣಯಿಸಲಿ.

ಕಳದ ವರ್ಷದಲ್ಲಿ ಯುದ್ಧಕ್ಕೆ ಕಾರಣವಾದ ಒಂದು ಕಾರ್ಯವು ಸಂಭವಿಸಿತು. ಬಂಗಾಳಕ್ಕೆ ಮೂಡಲಾಗೆ ಮಣಿಪುರವೆಂದು ಸ್ವತಂತ್ರವಾದ ಸಣ್ಣ ಸಂಸ್ಥಾನವದೆ. ಅದರಲ್ಲಿ ಆಳುತ್ತಿದ್ದ ಅರಸನಿಗೂ ಅವನ ತಮ್ಮನಿಗೂ ಉಂಟಾದ ಕಲಾಪವನ್ನು ವಿಚಾರಿಸಿ ಇತ್ಯರ್ಥ ಮಾಡ ಬೇಕೆಂದು ಸರಕಾರದವರು ಕಳುಹಿಸಿದ ಕೆಲ ಸರದಾರರನ್ನೂ ಅವರ ತೈನಾತಿ ಶಿಪಾಯರನ್ನೂ ಅರಸನ ತಮ್ಮನೂ ಸೇನಾಪತಿಯೂ ಒಟ್ಟಾಗಿ ಏಕಾಏಕಿ ಕೊಲ್ಲಿಸಿದರು. ಆದದರಿಂದ ಅಲ್ಲಿಗೆ ಬೇರೆ ಸೈನ್ಯವನ್ನು ಕಳುಹಿಸಿ ಮಾರ್ಮಲೆತ ಯುವರಾಜನನ್ನೂ ಸೇನಾಪತಿಯನ್ನೂ ಹಿಡಿಸಿ ಕ್ರಮವಾಗಿ ವಿಚಾರಿಸಿ ತಕ್ಕ ಪ್ರಕಾರ ಶಿಕ್ಷೆ ಮಾಡಿಸಿದ್ದಾಯಿತು. ಆ ಸಣ್ಣ ಸಂಸ್ಥಾನವನ್ನು ಹಿಂದೂ ಸಾಮ್ರಾಜ್ಯಕ್ಕೆ ಕೂಡಿಸಿಕೊಂಡರು. ಕಾಶಿಯಲ್ಲಿಯೂ ಅಲ್ಪವಾದ ದಾಂದಲಿ ಉಂಟಾಯಿತು. ಪಟ್ಟಣದೊಳಗೆ ಶುದ್ಧ ನೀರು ತರುವದಕ್ಕಾಗಿ ಕಾಲಿವೆ ಆಗಿಯುವಾಗ ಹಳೇದೊಂದು ಗುಡಿಯನ್ನು ತೆಗೆಯ ಬೇಕಾದ್ದಲ್ಲಿ ಪಟ್ಟಣಿಗರಾದ ಹಿಂದುಗಳೂ ಮುಸಲ್ಮಾನರೂ ಒಕ್ಕಟ್ಟಾಗಿ ದೊಂಬಿ ಮಾಡಿ ಊರಿನಲ್ಲಿ ತಂಟೆ ನಡಿಸಿದರು. ಈ ಕಾಟಕತನವನ್ನು ನಿಲ್ಲಿಸುವ ಬಗ್ಯೆ ಸರಕಾರದವರು ಸೈನ್ಯವನ್ನು ತರಿಸಿದರು. ಕಲಹದಲ್ಲಿ ಮುಖಂಡರೆಂದು ತಿಳಿದುಬಂದವರಿಗೆ ಸರಕಾರದವರು ತಕ್ಕ ಶಿಕ್ಷೆ ಮಾಡಿಸಿದರು. ಕಲ್ಕತ್ತದಲ್ಲಿಯೂ ಒಂದು ಮಶೀದಿ ಸಂಬಂಧವಾಗಿ ಮುಸಲ್ಮಾನರು ಕೋಪೋದ್ರೇಕಗೊಂಡು ಹಿಂದು ಜನರಿಗೆ ಹೊಡೆಯಲಿಕ್ಕೆ ಹೋಗಿ ಮಾರಾಮಾರಿ ನಿಲ್ಲಿಸುವದಕ್ಕೆ ಬಂದ ಪೊಲೀಸಿನವರಿಗೂ ಪೆಟ್ಟು ಆಯಿತು. ಕಲ್ಕತ್ತದಲ್ಲಿ ಗ್ರೀಷ್ಮರುತುವಿನಲ್ಲಿ ಧಗೆ ತಾಳಲಾರದಷ್ಟು ಗಡುಸಾಗಿ ಮನುಷ್ಯರ ಪ್ರಾಣಕ್ಕೂ ಹಾನಿಕರವಾಯಿತು. ಕೆಲವು ಊರುಗಳಲ್ಲಿ ಭೂಕಂಪವೂ ಸಂಭವಿಸಿತು. ಆದರೆ ವಿಶೇಷ ನಷ್ಟವಾಗಲಿಲ್ಲ. ಉತ್ತರ ಹಿಂದುಸ್ಥಾನದ ಅನೇಕ ಊರುಗಳಲ್ಲಿ ಮಿಡಿತೆಗಳ ಅವಾಂತರದಿಂದ ಪಚ್ಚೆ ಪೈರಿಗೆ ಹಾವಳಿಯಾದದ್ದಲ್ಲದೆ, ಅವು ಮನೆಗಳಲ್ಲಿ

ಯೂ ನುಳಿಗೆಗಳಲ್ಲಿಯೂ ಸೇರಿಕೊಂಡದ್ದರಿಂದ ಮನುಷ್ಯರಿಗೂ ಹೆಚ್ಚು ಉಪಟಳವಾಯಿತು. ರೈಲುಮಾರ್ಗದಲ್ಲಿ ಬಂಡಿಗಳು ಸರಾಗವಾಗಿ ಓಡಲಾರದೆ ಹೋದವು; ಕೆರೆ ಕುಂಟೆಗಳಲ್ಲಿ ನೀರೂ ಗವ್ವಲು ನಾರುವದಾಯಿತು. ಇದಲ್ಲದೆ ಇನ್‌ಫ್ಲುವೆಂಜಾ ಎಂಬ ಜ್ವರವು ಸಹಾ ಅಲ್ಲಲ್ಲಿ ತೋರಿಸಿಕೊಳ್ಳುವದಕ್ಕೆ ಆರಂಭ ಮಾಡಿತು.

ಮದ್ರಾಸ ಸಂಸ್ಥಾನದ ಗವರ್ನರರಾದ ಲಾರ್ಡ್ ಕನ್ನಿಮಾರಾ ಧೊರೆಗಳು ಸ್ವದೇಶಕ್ಕೆ ತೆರಳಿದರು. ಅವರು ಅಧಿಪತ್ಯವನ್ನು ನೋಡಿದ ನಾಲ್ಕು ವರ್ಷಗಳಲ್ಲಿ ಸಂಸ್ಥಾನಕ್ಕೆ ಹಲವು ವಿಧದಲ್ಲಿ ಮೇಲ್ಮೆ ಉಂಟಾಯಿತು. ಅವರ ಬದಲಿಗೆ ಲಾರ್ಡ್ ವೆನ್ಲಾಕ್ ಧೊರೆಗಳು ವರ್ಷಾರಂಭದಲ್ಲಿ ಮದ್ರಾಸಿಗೆ ಬಂದು ತಲಪಿದರು. ಮದ್ರಾಸ ಸಂಸ್ಥಾನದ ಕೆಲವು ಜಿಲ್ಲೆಗಳಲ್ಲ ನೀರಿಗೆ ತತ್ವಾರವಾದ್ದರಿಂದಲೂ ಬರಗಾಲ ಬಾಧೆ ತೋರಿದ್ದರಿಂದಲೂ ಸರಕಾರದವರು ಕೆರೆ ಕುಂಟೆಗಳನ್ನು ಅಗಿಸುವದಕ್ಕೂ ಅನ್ನಛತ್ರಗಳನ್ನಿಟ್ಟು ಬಡವರನ್ನು ಸಂರಕ್ಷಣೆ ಮಾಡುವದಕ್ಕೂ ಅಪ್ಪಣೆ ಮಾಡಿದರು. ಕೆಲವು ಊರುಗಳಲ್ಲಿ ವಾಂತಿಭೇದಿ ಸಹಾ ಹಾವಳಿ ಮಾಡುವದಕ್ಕೆ ತೊಡಗಿತು. ಇದೇ ಕಳದ ವರ್ಷದಲ್ಲಿ ಸರಕಾರದವರು ಮಾಡಿಸಿದ ಖಾನೇಷುಮಾರಿ ಲೆಖ್ಖದಿಂದ ಇಂಗ್ಲಿಷ ಸರಕಾರಕ್ಕೆ ಒಳಪಟ್ಟ ಹಿಂದೂ ಸಾಮ್ರಾಜ್ಯದಲ್ಲಿ ಇಪ್ಪತ್ತು ಕೋಟಿ ನಾಲ್ಕು ಲಕ್ಷ ತೊಂಭತ್ತು ಸಾವಿರ ಪ್ರಜೆ ಇರುವದಾಗಿಯೂ ದೇಶೀಯ ಸಂಸ್ಥಾನಗಳಲ್ಲಿ ಆರು ಕೋಟಿ ನಾಲ್ವತ್ತೊಂಭತ್ತು ಲಕ್ಷ ಹದಿನಾರು ಸಾವಿರ ಪ್ರಜೆ ಇರುವದಾಗಿಯೂ ತಿಳಿದುಬರುತ್ತದೆ. ಗಲಲಗರಲ್ಲಿ ಆದಂಥಾ ಲೆಖ್ಖವನ್ನು ನೋಡಿದರೆ ಈಗ ಪ್ರಜೆ ನೂರಕ್ಕೆ ಹನ್ನೆರಡರ ಮೇರೆಗೆ ಹೆಚ್ಚಿತೆಂದು ಕಾಣುವದು.

ಯುರೋಪಿನಲ್ಲಿ ಅಸಾಧಾರಣವಾದ ಛಳಿಗಾಲವಾಗಿ ಮನೆಕಟ್ಟುವದು ಮೊದಲಾದ ಕೆಲಸಗಳೂ ಬೇರೆ ಉದ್ದಿಮೆಗಳೂ ಸಾಗುವದಕ್ಕೆ ಪ್ರತಿಬಂಧಕವಾದ್ದರಿಂದ ಕೂಲಿಕುಂಬಳ ಮಾಡಿ ಹೊಟ್ಟೆ ಹೊರೆಯುವ ಬಡಬಗ್ಗರು ಬಹಳ ಧಾವತಿ ಪಟ್ಟರು. ಬಹು ಜನರು ಕಡುದು ಛಳಿಯನ್ನು ತಾಳಲಾರದೆ ಸತ್ತು ಹೋದರು. ಅನೇಕ ಊರುಗಳಲ್ಲಿ ಇನ್‌ಫ್ಲುವೆಂಜಾ ಜ್ವರವು ಪ್ರಬಲಗೊಂಡು ಅನೇಕರನ್ನು ಕೆಡವಿ ಹಾಕಿತು. ಜರ್ಮನಿಯ ಚಕ್ರವರ್ತಿಯವರು ಇಂಗ್ಲಾಂಡಿಗೆ ಬಂದಿದ್ದರು. ಇಂಗ್ಲಿಷ ಅರಸ್ಥಾನದವರು ಅವರನ್ನು ಬಹುಮಾನ ಪುರಸ್ಸರವಾಗಿ ಆಗತಸ್ವಾಗತ ಮಾಡಿ ರಾಜಠೀವಿಗೆ ತಕ್ಕಂತೆ ಸತ್ಕಾರಗಳನ್ನು ಮಾಡಿದರು. ಜರ್ಮನ ಚಕ್ರವರ್ತಿಯವರು ಯುರೋಪಿನಲ್ಲಿ ಸ್ವಸ್ಥತೆ ನೆಲೆಯಾಗಿರುವಂತೆ ಹೆಚ್ಚು ಪ್ರಯತ್ನ ಮಾಡುತ್ತಾರೆ. ಒಸ್ಟ್ರಿಯ ಮಹಾರಾಜರೂ ಇತಲಿ ಅರಸರೂ ಅವರಿಗೆ ಅನುಕೂಲವುಳ್ಳವರಾಗಿದ್ದಾರೆ. ರುಸ್ಯ ಚಕ್ರವರ್ತಿಯವರು ತಮ್ಮ ಸಾಮ್ರಾಜ್ಯದಲ್ಲಿ ಯೆಹೂದೀಯರನ್ನು ಇರಗೊಡಿಸದೆ ಹೊರಗೆ ಹಾಕ ಬೇಕೆಂದು ಕಠಿಣ ಅಪ್ಪಣೆ ಮಾಡಿದ್ದಾರೆ. ಅಲ್ಲಿಂದ ಹೊರಟ ಯೆಹೂದೀಯರು ಪಲೆಸ್ತೀನದಲ್ಲಿಯೂ ಅಮೇರಿಕದಲ್ಲಿಯೂ ವಸ್ತಿ ಮಾಡಿಕೊಂಡಿರುವಂತೆ ಅವರ ಜಾತಿಯಲ್ಲಿ ಮಹಾಧನಿಕರಾಗಿರುವವರು ಸಹಾಯ ಮಾಡುತ್ತಾರೆ. ರುಸ್ಯ ಚಕ್ರವರ್ತಿಯವರ ಕುಮಾರರಾದ ಯುವರಾಜರು ಲೋಕದ ಸಮಸ್ತ ರಾಜ್ಯಗಳನ್ನು ನೋಡಿಕೊಂಡು ಬರಬೇಕೆಂದು ಹೊರಟವರು ಹಿಂದುಸ್ಥಾನಕ್ಕೂ ಬಂದು ದೊಡ್ಡ ದೊಡ್ಡ ಪಟ್ಟಣಗಳಿಗೆ

ಹೋಗಿ ಸರಕಾರದವರಿಂದ ಯೋಗ್ಯವಾದ ಸಾಭಿಮಾನ ಪಡೆದು ಇಲ್ಲಿಂದ ಚೀನಿ ಸಾಮ್ರಾಜ್ಯದ ಕಡೆಗೆ ಪಯಣವನ್ನು ಮುಂದರಿಸಿ ತಮ್ಮ ಊರಿಗೆ ಮುಟ್ಟಿದರು.

ಚೀನಿಯರು ಪೂರ್ವದಿಂದಲೇ ಪರದೇಶಗಳವರ ಮೇಲೆ ವೈಮನಸ್ಸುಳ್ಳವರು. ಈ ದುರ್ಭಾವವು ಒಮ್ಮೊಮ್ಮೆ ಫಕ್ಕನೆ ಕಾರ್ಯಾರ್ಥವಾಗಿ ಹೊರಬೀಳುವದು. ಇತ್ತಲಾಗೆ ಕೆಲವು ಊರುಗಳಲ್ಲಿ ಚೀನಿಯರು ನಿರ್ನಿಮಿತ್ತವಾಗಿ ಯುರೋಪೀಯರನ್ನು ಹಿಂಸೆ ಪಡಿಸಿದರು. ಆದರೆ ಸರಕಾರದವರು ಕೂಡಲೇ ಹಿಂಸೆಯನ್ನು ನಿಲ್ಲಿಸಿ ಪುಂಡುಗಾರರನ್ನು ಹಿಡಿಸಿ ಬಂದೋಬಸ್ತು ಮಾಡಿದರು.

ಅಮೇರಿಕದಲ್ಲಿ ನ್ಯೂಯೊರ್ಕ ಪಟ್ಟಣದ ಬಳಿಯಲ್ಲಿ ಎರಡು ರೇಲ್ವೆಗಾಡಿಗಳು ಆಚೆಯಿಂದ ಒಂದು ಈಚೆಯಿಂದ ಒಂದು ತೀವ್ರವಾಗಿ ಬರುವಾಗ್ಯೆ ಒಂದಕ್ಕೊಂದು ಬಡಿದು ಒಳಗೆ ಕೂತವರು ಹಲವರು ಸತ್ತು ಹೋದರು. ಚಿಕಾಗೋ ಎಂಬುವ ಪಟ್ಟಣದಲ್ಲಿ ಮಹತ್ತರವಾದ ಪ್ರದರ್ಶನವನ್ನು ಮಾಡುವದಕ್ಕೆ ಸಮಣಿಸುತ್ತಾರೆ. ಅದರಲ್ಲಿ ಲೋಕದ ಚಿತ್ರವಿಚಿತ್ರವಾದ ಅಪೂರ್ವ ಒಡವೆಗಳೂ ಮಾತ್ರವಲ್ಲದೆ ವಿದ್ಯುಲ್ಲತೆಯ ಶಕ್ತಿಯಿಂದ ಆದ ನಾನಾ ನೂತನ ಕೃತ್ರಿಮಗಳೂ ಇತರ ಯಂತ್ರಾದಿಗಳೂ ತೋರಿಸಲಾಗುವವು.

ಪಾದ್ರಿ ವಿಷ್ಣುಭಾಸ್ಕರ ಕರಮರಕರ.

ಈ ಪಂಚಾಂಗದ ಬುಡದಲ್ಲಿ ಈ ಹೆಸರಿನ ಮನುಷ್ಯನ ಚಿತ್ರವನ್ನು ವಾಚಕರು ಕಾಣುವರು. ಮತ್ತು ಸಹಜವಾಗಿ ಈ ಮನುಷ್ಯನು ಯಾವನು? ಎಂಬುವ ವಿಚಾರವು ಹುಟ್ಟುವದಕ್ಕೆ ಕಾರಣವದೆ. ಆದ್ದರಿಂದ ಆತನ ಪೂರ್ವಾಪರಗೋಷ್ಟಿಗಳನ್ನು ಸಂಕ್ಷೇಪವಾಗಿ ಪ್ರಸ್ತಾಪಿಸುವೆವು. ಈ ಮನುಷ್ಯನು ಸುಮಾರು ಐವತ್ತೇಳು ವರ್ಷಗಳ ಕೆಳಗೆ ಪುಣೆಯಲ್ಲಿ ಮಹಾರಾಷ್ಟ್ರ ಬ್ರಾಹ್ಮಣರಾದ ತಾಯಿ ತಂದೆಗಳಲ್ಲಿ ಹುಟ್ಟಿದನು. ಹದಿನೆಂಟನೇ ವ್ರಾಯದ ವರೆಗೆ ಅವನು ಸರಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಮೇಲೆ ಅವನಿಗೆ ಒಂದು ಶಾಲೆಯಲ್ಲಿ ಉಪಾಧ್ಯಾಯನ ಉದ್ಯೋಗವಾಯಿತು. ಆ ಕೆಲಸದಲ್ಲಿರುವಾಗ, ಜಾತಿಭೇದವಿರಬಾರದು, ಮೂರ್ತಿಪೂಜೆ ಪಾಪವಾಗಿದೆ, ಹಿಂದುಮತದ ಕಟ್ಟುಕಟ್ಟಳೆ ಕೈಕೊಳ್ಳಬಾರದೆಂಬುವ ಪರಮ ಹಂಸಸಮಾಜವೆಂಬುವ ಒಂದು ಗುಪ್ತವಾದ ಸಮಾಜಕ್ಕೆ ಸೇರಿದನು. ಈ ಸಮಾಜದ ಮುಖ್ಯ ಸ್ಥಳವು ಮುಂಬಾಯಿ. ಅವರ ಸಂಪರ್ಕದಲ್ಲಿ ಅವನಿಗೆ ಸ್ವಾರಸ್ಯ ತೋರದೆ ಹೋಯಿತು. ಬಳಿಕ ಅವನು ಅಹಮದ ನಗರಕ್ಕೆ ವರ್ಗವಾಗಿ ಬಂದು, ದೇವರು ಪ್ರಕಟ ಮಾಡಿದ ಸತ್ಯಧರ್ಮವನ್ನು ಶೋಧನೆ ಮಾಡಬೇಕೆಂದು ತಾತ್ಪರ್ಯ ಪಟ್ಟು, ಬೈಬಿಲನ್ನು ಮನಃಪೂರ್ವಕವಾಗಿ ಓದುತ್ತಿರುವಾಗ, ದೇವರ ದಯೆಯಿಂದ ಅವನ ಅಂತರ್ದೃಷ್ಟಿ ತೆರೆಯಿತು.

ಬೈಬಲು ಓದುವಾಗ ತನಗೆ ತಿಳಿಯದ ವಾಕ್ಯಗಳನ್ನು ಬಲ್ಲವರ ಹತ್ತರ ಕೇಳಿ ತಿಳಿದುಕೊಂಡು ಸತ್ಯವನ್ನು ಗ್ರಹಿಸಿಕೊಂಡು, ಇನ್ನು ತಾನು ಸುಳ್ಳಿನಲ್ಲಿ ಬದುಕಿ ನರಕಕ್ಕೆ ಪಾತ್ರನಾಗ ಬಾರದು, ಗ್ರಹಿಸಿದ ಸತ್ಯಾಧರ್ಮವನ್ನು ಕೈಕೊಳ್ಳ ಬೇಕೆಂದು ನಿರ್ಧಾರ ಮಾಡಿ, ತನ್ನ ಜಾತಿಯನ್ನೂ ತಾಯಿ ತಂದೆಗಳನ್ನೂ ಬಂಧುಬಾಂಧವರನ್ನೂ ಬಿಟ್ಟು, ಯೇಸು ಕ್ರಿಸ್ತ ಸ್ವಾಮಿಯವರ ಶಿಷ್ಯನಾಗಿ, ಅವರ ಪವಿತ್ರ ನಾಮದಲ್ಲಿ ಸ್ನಾನಸಂಸ್ಕಾರವನ್ನು ಸ್ವೀಕರಿಸಿ, ಕ್ರೈಸ್ತಸಭೆಯಲ್ಲಿ ಸೇರಿದನು. ಬಳಿಕ ಉಪಾಧ್ಯಾಯನ ಕೆಲಸವನ್ನು ಬಿಟ್ಟು ಪವಿತ್ರ ಶಾಸ್ತ್ರವನ್ನು ಹೆಚ್ಚು ಅಭ್ಯಾಸ ಮಾಡಿ ಪಾದ್ರಿಯಾದನು. ಮಹಾ ವಾಕ್ಸಾಮರ್ಥ್ಯವುಳ್ಳವನಾಗಿ ಮುಂಬಾಯಿಯಲ್ಲಿಯೂ ಬೇರೆ ಊರುಗಳಲ್ಲಿಯೂ ದೇವರ ವಾಕ್ಯವನ್ನು ಉಪದೇಶ ಮಾಡುವನು. ಲೌಕಿಕ ವಿಷಯಗಳಲ್ಲಿಯೂ ಒಳ್ಳೇ ಬುದ್ಧಿಶಾಲಿಯಾದದರಿಂದ ಅನೇಕರು ವ್ಯಾಜ್ಯವೋ ವ್ಯವಹಾರವೋ ಮತ್ತೊಂದು ಜಂಬರವೋ ಇದ್ದರೆ ಅವನ ಹತ್ತರ ಬಂದು ಆಲೋಚನೆ ಕೇಳುವರು. ಇವರಿಗೆ ಅವನು ಮನಸ್ಸಿಟ್ಟು ಸಹಾಯ ಮಾಡುವನು. ಈ ಪ್ರಕಾರವಾಗಿ ಆ ಮನುಷ್ಯನು ದೇವರ ಸೇವಾರ್ಥವಾಗಿಯೂ ಜನರ ಹಿತಾರ್ಥವಾಗಿಯೂ ಬಹಳ ವರ್ಷಗಳನ್ನು ಖರ್ಚು ಮಾಡಿದನಂತರ ತನ್ನ ರಕ್ಷಕನಾದ ಯೇಸು ಕ್ರಿಸ್ತ ಸ್ವಾಮಿಯವರಲ್ಲಿ ಪೂರ್ಣ ಭರವಸವಿಟ್ಟವನಾಗಿ ಇತ್ತಲಾಗೆ ಐದಾರು ವರ್ಷಗಳ ಕೆಳಗೆ ಇಹವನ್ನು ಬಿಟ್ಟು ಪರಂಧಾಮಕ್ಕೆ ಪಯಣ ಮಾಡಿದನು. ಈ ಮನುಷ್ಯನಂತೆ ದೇವರ ರಾಜ್ಯವೂ ನೀತಿಯೂ ಬೇಕು, ಅದೇ ಮಹಾ ದೊಡ್ಡ ದ್ರವ್ಯವು ಎಂದು ಸರ್ವವನ್ನೂ ಬಿಟ್ಟುಬಿಡುವದಕ್ಕೆ ಸಿದ್ಧರಾಗಿರುವವರು ಎಷ್ಟು ಮಂದಿ ಇದ್ದಾರೆ? ಯೇಸು ಕ್ರಿಸ್ತ ಸ್ವಾಮಿಯವರು ಬೋಧಿಸಿದ ಉಪಮೆಯನ್ನು ಧ್ಯಾನಿಸ ಬೇಕು: ಪರಲೋಕರಾಜ್ಯವು ಒಳ್ಳೇ ಮುತ್ತುಗಳನ್ನು ಹುಡುಕುವ ವರ್ತಕನಿಗೆ ಸಮಾನವಾಗಿದೆ; ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು, ಹೋಗಿ ತನಗಿದ್ದದ್ದನ್ನೆಲ್ಲಾ ಮಾರಿ ಬಿಟ್ಟು ಅದನ್ನು ಕೊಂಡನು.

ಸೂಕ್ಷ್ಮವಾದ ಧ್ವನಿ.

ಈ ಭೂಮಿಯಲ್ಲಿ ಮನುಷ್ಯರ ಧ್ವನಿ, ಮೃಗಗಳ ಧ್ವನಿ, ಪಕ್ಷಿ ಕೀಟಗಳ ಧ್ವನಿ ಹೀಗೆ ನಾನಾ ತರದ ಧ್ವನಿ ನಮ್ಮ ಕಿವಿಗೆ ಬೀಳುವದು. ಮನುಷ್ಯರು ಒಬ್ಬರನ್ನೊಬ್ಬರು ಕರೆಯುತ್ತಾರೆ, ಒಬ್ಬರಿಗೊಬ್ಬರು ಮಾತಾಡುತ್ತಾರೆ; ಧ್ವನಿಯ ಅರ್ಥವನ್ನು ಗ್ರಹಿಸುತ್ತಾರೆ. ಕೆಲವು ಧ್ವನಿಯಿಂದ ನಮಗೆ ಸಂತೋಷವಾಗುವದು, ಕೆಲವು ಧ್ವನಿಯಿಂದ ಭಯವಾಗುವದು. ಈ ಧ್ವನಿ ಎಲ್ಲಾ ನಮ್ಮ ಕಿವಿಗೆ ಗೋಚರವಾಗುವಂಥಾದ್ದು. ಆದರೆ ಮನುಷ್ಯನ ಅಂತರಂಗದಲ್ಲಿ ಒಂದು ಧ್ವನಿ ಅದೆ; ಅದು ಕಿವಿಗೆ ಕೇಳುವ ಹಾಗೆ ಒದರುವದಿಲ್ಲ; ಆದಾಗ್ಯೂ ಅದು ಹೇಳುವದೇನೆಂದು ಮನುಷ್ಯನು ಗ್ರಹಿಸ ಬಲ್ಲನು. ಇದೇ ಮನಸ್ಸಾಕ್ಷಿ. ಪ್ರತಿ ಮನುಷ್ಯನ ಹೃದಯದಲ್ಲಿ, ಅವನ ಅಂತರಂಗದ ಆಲೋಚನೆಗಳಿರುವಲ್ಲಿ ದೇವರು ಅದನ್ನು ಇಟ್ಟಿದ್ದಾನೆ. ಅದು ಮನುಷ್ಯನ ಹತ್ತರ ಸ್ಪಷ್ಟವಾಗಿ ಮಾತಾಡುತ್ತದೆ; ಆ ಮಾತು ಮನುಷ್ಯನು ತಿಳಿಯುತ್ತಾನೆ; ಅದು ಮಾ

ತಾಡುವಂಥಾದ್ದು ತನತನಗೆ ಗೊತ್ತಲ್ಲದೆ ಬೇರೆಯವರಿಗೆ ತಿಳಿಯದು. ಒಬ್ಬೊಬ್ಬನಲ್ಲಿ ಈ ಮನಸ್ಸಾಕ್ಷಿಯದೆ; ಒಬ್ಬನ ಮನಸ್ಸಾಕ್ಷಿಯನ್ನು ಇನ್ನೊಬ್ಬನು ಕೇಳಲಾರನು. ಈ ಮನಸ್ಸಾಕ್ಷಿಯನ್ನು ಕುರಿತು ತಿಳಿಯ ತಕ್ಕ ಕೆಲವು ಅಂಶಗಳವೆ.

ಮೊದಲನೆದು. ಅವನವನ ಮನಸ್ಸಾಕ್ಷಿ ಅವನಿಗೆ ವೈರಿ. ಈ ಕಾರಣದಿಂದ ಮನುಷ್ಯನು ಮನಸ್ಸಾಕ್ಷಿಗೆ ಹೆದರುವನು. ಅದು ಮನುಷ್ಯನನ್ನು ಗದರಿಸುತ್ತದೆ; ಮನುಷ್ಯನು ಎದುರಾಡ ಕೂಡದಂತೆ ಅಧಿಕಾರದಿಂದ ಗದರಿಸುತ್ತದೆ; ಬೆದರಿಸುತ್ತದೆ. ಮನಸ್ಸಾಕ್ಷಿಯ ಧ್ವನಿಯನ್ನು ಅರಿತು ಕಿವಿಕೊಟ್ಟು ಅದಕ್ಕೆ ಭಯ ಪಡ ಬೇಕು. ಮನುಷ್ಯನ ಹೃದಯದಲ್ಲಿ ಇಂಥಾ ಧ್ವನಿ ಇರುವದು ಭಯಂಕರವು; ಅದು ಮಲಗುವದಿಲ್ಲ, ಸುಮ್ಮನಿರುವದಿಲ್ಲ, ತನ್ನ ಜಾಗ ಬಿಟ್ಟು ಹೋಗುವದಿಲ್ಲ; ಮನುಷ್ಯನ ನಡತೆಯನ್ನು ಜಾಗ್ರತೆಯಿಂದ ಕಾಯುತ್ತದೆ, ಗದರಿಸುವ ಸಂದರ್ಭವು ಉಂಟಾದರೆ ಕೂಡಲೇ ಗದರಿಸುತ್ತದೆ.

ಎರಡನೆದು. ಮನಸ್ಸಾಕ್ಷಿ ನೀತಿಯಾಗಿ ಮಾತಾಡುತ್ತದೆ. ಮನಸ್ಸಾಕ್ಷಿ ಕೊಡುವ ತೀರ್ಪು ನೀತಿಯಲ್ಲವೆಂದು ಯಾರೂ ಹೇಳಲಾರನು. ಮನಸ್ಸಾಕ್ಷಿ ಮನುಷ್ಯನ ನಡಾವಳಿಯನ್ನೂ ಕೃತ್ಯಗಳನ್ನೂ ಚನ್ನಾಗಿ ಬಲ್ಲದು. ಮನುಷ್ಯನು ಮಾಡಿದ ಕೃತ್ಯಕ್ಕೆ ಗದರಿಸುವಾಗ ಅದು ತಪ್ಪಿ ಹೋಗುವದಿಲ್ಲ. ಮಹಾ ತನ್ನಿಷ್ಟದವನು ಮನಸ್ಸಾಕ್ಷಿಯ ಮೇಲೆ ಶಿಟ್ಟು ಮಾಡ ಬಹುದು, ಆದರೆ ಅದು ಗದರಿಸುವದು ಅನೀತಿ ಎಂದು ಹೇಳಲಾರನು. ಯಜಮಾನರೂ ಉಪಾಧ್ಯಾಯರೂ ತಮ್ಮ ಕೈಕೆಳಗಿರುವವರು ಮಾಡಿದ ಕೃತ್ಯಗಳಿಗಾಗಿ ಶಿಕ್ಷೆ ಮಾಡುವಾಗ ತಿಳಿಯದೆಯೋ ಮರವಿನಿಂದಲೋ ತಪ್ಪು ಮಾಡ ಬಹುದು. ಮನಸ್ಸಾಕ್ಷಿ ಇಂಥಾ ತಪ್ಪು ಮಾಡದು.

ಮೂರನೆದು. ಮನಸ್ಸಾಕ್ಷಿಗೆ ಒಳ್ಳೆ ಜ್ಞಾಪಕವದೆ. ಮನುಷ್ಯನು ಮಾತಾಡಿದ್ದೆಲ್ಲಾ ಅದಕ್ಕೆ ನೆನಪದೆ; ಎಷ್ಟು ವರುಷಗಳು ಕಳೆದರೂ ಮರೆಯುವದಿಲ್ಲ. ಮನುಷ್ಯರು ಒಂದಾನೊಂದು ತಪ್ಪಿತವನ್ನು ಮಾಡಿ ಶಿಕ್ಷೆ ಪರಿಹರಿಸಿಕೊಳ್ಳುವದಕ್ಕೆ ಊರು ಬಿಟ್ಟು ಓಡಿ ಹೋದರು; ವೇಷ ಪಲ್ಲಟ ಮಾಡಿದರು; ಅನೇಕ ವರ್ಷಗಳ ಮೇಲೆ ತಾವು ಅಪರಾಧ ಮಾಡಿದ್ದು ಯಾರೂ ಅರಿಯರು ಎಂದು ಭರವಸ ಮಾಡಿದರು. ಆದರೆ ಮನಸ್ಸಾಕ್ಷಿ ಅವರೊಳಗೆ ಇದ್ದು ಇಂಥಾ ವರ್ಷದಲ್ಲಿ ಇಂಥಾ ಸ್ಥಳದಲ್ಲಿ ನೀನು ಇಂಥಾ ಕೃತ್ಯ ಮಾಡಿದಿ ಎಂದು ಒಮ್ಮಿಂದೊಮ್ಮೆ ಹೆದರಿಸುವದು. ಅವರಿಗೆ ಯಾವದರಲ್ಲಿಯೂ ಸುಖವಿಲ್ಲ; ಅವರಿಗೆ ಜೀವನವೇ ಹೊರಲಾರದ ಹೊರೆಯಾಗಿ ತೋರಿತು.

ಮತ್ತೊಂದು ಸಂಗತಿ ಏನಂದರೆ: ಮನಸ್ಸಾಕ್ಷಿ ದೇವರ ಚಾಕರನು. ಅದರ ತೀರ್ಪುಗಳೂ ಗದರಿಕೆಗಳೂ ನ್ಯಾಯವಾಗಿರುವದರಿಂದ ಅದು ಮನುಷ್ಯನ ವೈರಿ. ಮನುಷ್ಯನು ಪಾಪಾಚರಣೆಯಲ್ಲಿ ನಿಮಗ್ನನಾಗಿ ಒಳ್ಳೇ ಯೋಚನೆಗಳನ್ನು ಅಣಗಿಸಿ ಸಜ್ಜನರ ಒಡನಾಟವನ್ನು ತೊರೆದು ದೇವರ ಭಯವನ್ನು ನೀಡಾಡಿ ಅಮಲೇರಿದವನಂತೆ ಬದುಕುವಾಗ ಮನಸ್ಸಾಕ್ಷಿ ದೇವರ ಅಪ್ಪಣೆಗಳನ್ನು ಅವನಿಗೆ ನೆನವರಿಕೆ ಮಾಡಿಸಿ ಎಚ್ಚರಿಸುತ್ತದೆ. ನಾನು ನನ್ನ ಹಿರಿಯರ ಮತದ ಪ್ರಕಾರ ನಡೆಯುತ್ತೇನೆಂದು ಹೇಳಿ ಅದನ್ನು ಸುಮ್ಮನಿರಿಸುವದಕ್ಕೆ ಪ್ರಯತ್ನ ಮಾಡುತ್ತಾನೆ. ಮನಸ್ಸಾಕ್ಷಿ ಹೇಳುತ್ತದೆ: ಮತದ ಕಟ್ಟಳೆಗಳು ದೇವರ ಅಪ್ಪಣೆಗಳಲ್ಲ. ಮತ್ತು ಮನುಷ್ಯನು ಹೇಳುತ್ತಾನೆ: ನಾನು ಈ ಕಟ್ಟಳೆಗಳನ್ನು ಮಾಡದಿದ್ದರೆ ಜಾತಿಭ್ರಷ್ಟನಾಗುತ್ತೇನೆ; ಪರಿಹಾ

ಸ್ಯಕ್ಕೊಳಗಾಗುತ್ತೇನೆ. ಮನಸ್ಸಾಕ್ಷಿ ಹೇಳುತ್ತದೆ: ಈ ಕಟ್ಟಳೆಗಳು ದೇವರ ಆಜ್ಞೆಗಳಲ್ಲ. ಮನುಷ್ಯನು ಹೇಳುತ್ತಾನೆ: ಈ ಕಟ್ಟಳೆಗಳನ್ನು ಅನಾದಿಯಿಂದ ವಂಶಪರಂಪರೆಯಾಗಿ ಕೈಕೊಂಡು ಬಂದಿದ್ದಾರೆ. ಮನಸ್ಸಾಕ್ಷಿ ಮುಂಚಿನಂತೆ ಹೇಳುತ್ತದೆ: ಈ ಕಟ್ಟಳೆಗಳು ದೇವರ ಅಪ್ಪಣೆಗಳಲ್ಲ. ಈ ರೀತ್ಯಾ ಮನಸ್ಸಾಕ್ಷಿ ದೇವರ ಚಾಕರನಾಗಿದ್ದು ಕೆಟ್ಟ ಹೃದಯಗಳಲ್ಲಿ ದೇವರ ಅಪ್ಪಣೆಗಳನ್ನು ನೆನಪು ಹುಟ್ಟಿಸುತ್ತಾ ಬರುತ್ತದೆ.

ಕಡೆಗೆ ಇದೇ ಮನಸ್ಸಾಕ್ಷಿ ನ್ಯಾಯತೀರ್ಪು ಆಗುವ ಮಹಾ ದಿನದಲ್ಲಿ ನಮಗೆ ಸಾಕ್ಷಿಯಾಗಿ ನಿಲ್ಲುವದು. ದೇವರು ಮನುಷ್ಯರಿಗೆ ನ್ಯಾಯತೀರ್ಪು ಆಗತಕ್ಕ ದಿವಸವನ್ನು ಗೊತ್ತು ಮಾಡಿದ್ದಾನೆ. ಅಂದು ಈ ಲೋಕದಲ್ಲಿ ನಡವಡಿಕೆಯಾಗಿರುವ ಮೋದಂಡವಾದ ಕಾಯಿದೆಗಳ ಪ್ರಕಾರವಲ್ಲ, ಪೂರ್ಣ ನೀತಿಯಿಂದ ಮನುಷ್ಯರಿಗೆ ನ್ಯಾಯತೀರ್ಪು ಮಾಡುವನು. ಮೃತವಾದವರೆಲ್ಲರೂ ಎದ್ದು ನ್ಯಾಯತೀರ್ಪು ಹೊಂದುವದಕ್ಕೆ ಬರುವರು. ಸಮುದ್ರವು ತನ್ನಲ್ಲಿರುವ ಮೃತವಾದವರನ್ನು ಒಪ್ಪಿಸಿಕೊಡುವದು. ಪಾಪಿಗಳೆಲ್ಲಾ ಹೆದರಿ ಕಂಗಾಲಾಗಿ ಗುಹೆಗಳಲ್ಲಿಯೋ ಗುಡ್ಡಗಳ ಪಾರ್ಶ್ವಗಳಲ್ಲಿಯೋ ಅಡಗಿಕೊಳ್ಳ ನೋಡುವರು. ಆದರೆ ಅಡಗಿರಲಾರರು. ದೂತರು ಅವರನ್ನು ದೇವರ ಸಿಂಹಾಸನದ ಮುಂದೆ ತಂದು ನಿಲ್ಲಿಸುವರು. ಆ ಭಯಂಕರ ದಿನದಲ್ಲಿ ಪಾಪದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವದಕ್ಕೆ ಮನುಷ್ಯರು ನಾನಾ ನೆವಗಳನ್ನು ಹುಡುಕುವರು. ಅಂತರಂಗದಲ್ಲಿ ಮಾಡಿದ ಅಪಕೃತ್ಯಗಳನ್ನು ಬಹು ವರ್ಷಗಳ ಹಿಂದೆ ಮಾಡಿದ ಪಾಪಗಳನ್ನು ತಾವು ಮಾಡಲಿಲ್ಲವೆಂದು ಹೇಳುವರು. ತಮಗೆ ನೆನಪಿಲ್ಲದ್ದರಿಂದ ಅವು ತಮಗೆ ಪರಿಹಾರವಾದವೆಂದು ಯೋಚಿಸುವರು. ಆದರೆ ದೇವರು ಹೃದಯದಲ್ಲಿಟ್ಟ ಅಂತರಂಗಸಾಕ್ಷಿಯು ಅವರಿಗೆ ವಿರೋಧವಾಗಿ ನುಡಿಯುವದು. ಅದರ ನುಡಿಯನ್ನು ಮನುಷ್ಯನು ಸುಳ್ಳು ಮಾಡಲಾರನು. ಆಗ ಮನುಷ್ಯನು ತನ್ನ ಕೆಟ್ಟ ಕೃತ್ಯಗಳಿಗೆ ನೀತಿಯಾದ ತೀರ್ಪು ಹೊಂದಿ ನಿತ್ಯ ನರಕಕ್ಕೆ ಸೇರುವನು.

ನಿನ್ನ ಮನಸ್ಸಾಕ್ಷಿ ಏನು ನುಡಿಯುತ್ತದೆ? ನಿನ್ನ ಮೇಲೆ ತಪ್ಪು ಹೊರಿಸುವದಿಲ್ಲವೋ? ನೀನು ಪಾಪಿ, ದೇವರ ಅವಕರುಣೆಗೆ ಪಾತ್ರನು, ನರಕಕ್ಕೆ ಯೋಗ್ಯನೆಂದು ಸಾಕ್ಷಿ ಕೊಡುವದಿಲ್ಲವೋ? ಈ ಸಾಕ್ಷಿ ಕೇಳಿ ಹೃದಯವನ್ನು ಕಲ್ಲು ಮಾಡಿ ಸುಮ್ಮನಿರುತ್ತಿಯಾ? ಇಲ್ಲವೆ ಆ ಸಾಕ್ಷಿಯನ್ನು ಅಣಗಿಸುತ್ತಿಯಾ? ಅಯ್ಯಾ ಪುಣ್ಯಕೃತ್ಯಗಳನ್ನು ಮಾಡಿ ಮನಸ್ಸಾಕ್ಷಿ ನನ್ನನ್ನು ಹೊಗಳುವಂತೆ ಮಾಡುವೆನು ಎಂದನ್ನುತ್ತಿಯಾ? ಇದು ನಿನ್ನಿಂದಲಾಗದು. ಪಾಪದ ಹೊರೆಯಿಂದ ನನ್ನನ್ನು ಬಿಡಿಸುವಂಥಾ ಹೃದಯ ಶುದ್ಧಿಯನ್ನೂ ಸಮಾಧಾನವನ್ನೂ ಕೊಡುವಂಥಾ ರಕ್ಷಕನು ಬೇಕೆಂದು ನಿನ್ನ ಮನಸ್ಸು ಹೇಳುವದಿಲ್ಲವೋ? ಅಂಥಾ ರಕ್ಷಕನು ನಿನಗೆ ಸಮೀಪವಾಗಿದ್ದಾನೆಂದು ತಿಳಿ. ಯೇಸು ಕ್ರಿಸ್ತ ಸ್ವಾಮಿಯವರು ಈ ಲೋಕಕ್ಕೆ ಬಂದು ನಿನ್ನ ಸಮಸ್ತ ಪಾಪಗಳಿಗೆ ತಾವೇ ಹೊಣೆಯಾಗಿ ಪವಿತ್ರಜೀವವನ್ನು ನಿನಗಾಗಿ ಅರ್ಪಣೆ ಮಾಡಿದರು. ವಿಶ್ವಾಸದಿಂದ ಅವರ ಶರಣ ಪಡೆದಿಯಾದರೆ ನಿನ್ನನ್ನು ಪಾಪಭಾರದಿಂದ ವಿಮೋಚನೆ ಮಾಡುತ್ತಾರೆ; ನಿನಗೆ ಅಭಯವನ್ನು ಪಾಲಿಸುತ್ತಾರೆ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು						ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ				ಸೌರಮಾನ					
		ಸಂವತ್ಸರಗಳು		ಶಾಲಿವಾಹನ ಶಕ		ಮಲಯಾಳ ಕೊಲ್ಲಮ್					
1807	1867	ಪ್ರಭವ		1729	1789	982	1042	1216	1276	1222	1284
1808	1868	ವಿಭವ		1730	1790	983	1043	1217	1277	1223	1285
1809	1869	ಶುಕ್ಲ		1731	1791	984	1044	1218	1278	1224	1286
1810	1870	ಪ್ರಮೋದೂತ		1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ		1733	1793	986	1046	1220	1280	1226	1288
1812	1872	ಆಂಗೀರಸ		1734	1794	987	1047	1221	1281	1227	1289
1813	1873	ಶ್ರೀಮುಖ		1735	1795	988	1048	1222	1282	1228-29	1290
1814	1874	ಭಾವ		1736	1796	989	1049	1223	1283	1230	1291
1815	1875	ಯುವ		1737	1797	990	1050	1224	1284	1231	1292
1816	1876	ಧಾತು		1738	1798	991	1051	1225	1285	1232	1293
1817	1877	ಈಶ್ವರ		1739	1799	992	1052	1226	1286	1233	1294-95
1818	1878	ಬಹುಧಾನ್ಯ		1740	1800	993	1053	1227	1287	1234	1296
1819	1879	ಪ್ರಮಾಥಿ		1741	1801	994	1054	1228	1288	1235	1297
1820	1880	ವಿಕ್ರಮ		1742	1802	995	1055	1229	1289	1236	1298
1821	1881	ವಿಷು		1743	1803	996	1056	1230	1290	1237	1299
1822	1882	ಚಿತ್ರಭಾನು		1744	1804	997	1057	1231	1291	1238	1300
1823	1883	ಸ್ವಭಾನು		1745	1805	998	1058	1232	1292	1239	1301
1824	1884	ತಾರಣ		1746	1806	999	1059	1233	1293	1240	1302
1825	1885	ಪಾರ್ಥಿವ		1747	1807	1000	1060	1234	1294	1241	1303
1826	1886	ವ್ಯಯ		1748	1808	1001	1061	1235	1295	1242	1304
1827	1887	ಸರ್ವಜಿತು		1749	1809	1002	1062	1236	1296	1243	1305
1828	1888	ಸರ್ವಧಾರಿ		1750	1810	1003	1063	1237	1297	1244	1306
1829	1889	ವಿರೋಧಿ		1751	1811	1004	1064	1238	1298	1245	1307
1830	1890	ವಿಕೃತಿ		1752	1812	1005	1065	1239	1299	1246	1308
1831	1891	ಖರ		1753	1813	1006	1066	1240	1300	1247	1309
1832	1892	ನಂದನ		1754	1814	1007	1067	1241	1301	1248	1310
1833	1893	ವಿಜಯ		1755	1815	1008	1068	1242	1302	1249	1311
1834	1894	ಜಯ		1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂ ಚ ನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.

2. ಸಂವತ್ಸರವೂ ಶಾಲಿವಾಹನ ಶಕವೂ (ಬಂದೇ ದಿವಸ) ಮಾರ್ಚಿ-ಎಪ್ರಿಲಲ್ಲಿ ಪ್ರಾರಂಭವಾಗುವದು

3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "

4. ಫಸಲಿ ಜುಲಾಯಿ 1ನೇ ತಾರೀಕಿಗೆ "

5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೪ ದಿವಸಕ್ಕೆ ಮುಂದಾಗಿ "

ದೇವರ ಶಾಸನವು.

ಮನುಷ್ಯನ ಆಯುಷ್ಯವೇ ಶಾಲೆ; ದೇವರೇ ಉಪಾಧ್ಯಾಯನು. ದೇವರು ಮನುಷ್ಯನಿಗೆ ಎರಡು ಪ್ರಕಾರವಾಗಿ ಕಲಿಸುತ್ತಾನೆ. ಬೋಧನೆ ಮಾಡುವದು ಒಂದು ವಿಧವು, ಶಾಸನ ಮಾಡುವದು ಒಂದು ವಿಧವು. ಹಟದಿಂದಲೋ ಗರ್ವದಿಂದಲೋ ಮನುಷ್ಯರಿಂದಲೂ ದೇವರಿಂದಲೂ ಬುದ್ಧಿಮಾರ್ಗವನ್ನು ಪಡಕೊಳ್ಳಲೊಲ್ಲದವರಿಗೆ ದೇವರು ಭಾರಿ ಶಿಕ್ಷೆ ಕೊಡುತ್ತಾನೆ. ಇದರ ಅನುಭವ ಮಾಡದವನ್ಯಾರು? ನಾವು ಕಳೆದ ಆಯುಷ್ಯವನ್ನು ಪುನರಾಲೋಚಿಸುವವರಾದರೆ, ಮೊದಲು ಇಂಥಿಂಥಾ ಸಂದರ್ಭದಲ್ಲಿ ನಾನು ಆಲೋಚನೆ ಮಾಡಿ ವಿವೇಕವಂತನಾಗಿದ್ದದ್ದಾದರೆ ಒಳ್ಳೇದಿರುತ್ತಿತ್ತು; ನನ್ನ ಸ್ವೇಚ್ಛೆ ಎಂಬ ಕುದುರೆಯನ್ನು ವಿವೇಕವೆಂಬ ಲಗಾಮಿನಿಂದ ಹಿಡಿದು ತಡೆದದ್ದಾದರೆ ಈ ಅವಸ್ಥೆಗೆ ಬರುತ್ತಿದ್ದಿಲ್ಲ ಎಂದು ನಮಗೆ ತೋರುವದು. ಅಯ್ಯೋ, ನಾನು ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮಾಡದೆ ಕೆಟ್ಟೆ; ಇಂಥಿಂಥಾ ವೇಳೆಯಲ್ಲಿ ಅನುಭವವಿಲ್ಲದೆ ವ್ಯಾಪಾರಕ್ಕೆ ಕೈ ಹಾಕಿ ಕೆಟ್ಟೆ; ಇಂಥಿಂಥಾ ಮನುಷ್ಯರ ಒಡನಾಟ ಮಾಡಿ ಅವರು ಮಿತ್ರರೆಂದೆಣಿಸಿದೆ; ಅವರು ಮಿತ್ರರಲ್ಲಾ, ವಿಷ ಬೆರಸಿದ ಹಾಲಿನ ಗಡಿಗೆಯಂಥವರು; ಆ ಹಾಲನ್ನು ಕುಡಿದು ನನ್ನ ಹಾವಳಿಗೆ ಕಾರಣ ಮಾಡಿ ಕೊಂಡೆ; ಇಂಥಿಂಥಾ ಪಾಪಾಚರಣೆಯಲ್ಲಿ ಮುಣುಗಿ ಈಗ ಫಲ ತಿನ್ನುತ್ತೇನೆ ಎಂದು ಮುಪ್ಪಿನ ಕಾಲದಲ್ಲಿ ಅನೇಕರೊಳಗೆ ಯೋಚನೆಗಳು ಬರುವವು. ಒಮ್ಮೆ ತಪ್ಪು ಮಾಡಿ ಸಂಕಟದೊಳಗೆ ಬಿದ್ದವರ ಅನೇಕ ದೃಷ್ಟಾಂತಗಳು ದಿನನಿತ್ಯವೂ ನಮ್ಮ ತಿಳುವಿಕೆಗೆ ಬರುತ್ತವೆ; ಅಂಥವರನ್ನು ನೋಡುವಾಗ ನಮ್ಮಲ್ಲಿ ಅಯ್ಯೋ ಭಾವವು ಹುಟ್ಟುತ್ತದೆ. ಎಷ್ಟು ಕರುಣೆ ಮಾಡಿದರೂ ಅವರ ಸಂಕಟಗಳನ್ನು ಪರಿಹರಿಸುವದೂ ಮಾಡಿದ ತಪ್ಪುಗಳನ್ನು ನಿವರ್ತಿಸುವದೂ ನಮ್ಮಿಂದಲಾಗದು. ತಾಯಿತಂದೆಗಳ ಅಣ್ಣತಮ್ಮಂದಿರ ಸ್ನೇಹಿತರ ಬುದ್ಧಿಮಾತು ಮನಸ್ಸಿಗೆ ತಾರದೆ, ಬೇಡ ಬೇಡವೆಂದು ಹೇಳುತ್ತಿದ್ದಂತೆ ಕಿವಿಯೊಳಗೆ ಬೆರಳು ಹಾಕಿಕೊಂಡು ಸಂಕಷ್ಟಗಳಲ್ಲಿ ಬಿದ್ದವರ ಮೇಲೆ ಕರುಣೆ ಹುಟ್ಟಿದರೂ ಪ್ರಯೋಜನವೇನು? ಹಟದಿಂದ ಗರ್ವದಿಂದ ನಡೆಯುವವರಿಗೆ ಬುದ್ಧಿ ಮಾತೆಲ್ಲಾ ಕಲ್ಲಿನ ಮೇಲೆ ನೀರೆರದಂತೆ ಅಲ್ಲದೆ ಪ್ರಯೋಜನವಾಗುವದಿಲ್ಲ. "ತಾಗದೆ ಬಾಗದು" ಎಂಬ ಗಾದೆಯಂತೆ ಇಂಥವರು ಪೆಟ್ಟು ತಿಂದು ಅನುಭವವನ್ನು ಕೊಂಡುಕೊಳ್ಳಬೇಕು. ಮೂರ್ಖನ ಬೆನ್ನಿಗೆ ಬೆತ್ತವು, ಜ್ಞಾನಿಯ ತಲೆಗೆ ಕಿರೀಟವು; ಇದು ದೇವರು ಲೋಕದಲ್ಲಿ ನಡಿಸುವ ಕ್ರಮವಾಗಿದೆ.

ಪ್ರಪಂಚದಲ್ಲಿ ನಮಗೆ ಯುದ್ಧವದೆ. ನಮ್ಮ ಇಚ್ಛೆ ಮತ್ತು ದೇವರ ಇಚ್ಛೆ ಇವೆರಡಕ್ಕೆ ಕಾಳಗವದೆ. ನಾವು ನಮ್ಮ ಇಚ್ಛೆಯನ್ನೇ ಮಾಡುವವರಾದರೆ ನಮಗೆ ಮಹಾಹಾನಿ ಸಂಭವಿಸುವದು. ದೇವರ ಸೂತ್ರವನ್ನು ನಾವು ಕಸುಕೊಂಡರೆ ಸನ್ಮಾರ್ಗದಿಂದ ತೊಲಗಿ ಅರಣ್ಯದಲ್ಲಿ ಅಲೆಯುವೆವು ಎಂಬುವದಕ್ಕೆ ಸಂದೇಹವಿಲ್ಲ. ನಮಗೆ ಉಚಿತ

ವೆಂದು ಕಂಡ ದಾರಿಯಲ್ಲಿ ನಡೆದರೆ, ಅದೇ ಮಾರ್ಗದಲ್ಲಿ ದೇವರು ನಮ್ಮನ್ನು ನಡೆಯ ಗೊಡುತ್ತಾನೆ; ಇದೇ ಆತನು ನಮಗೆ ಮಾಡುವ ಶಿಕ್ಷೆ. ಕಡೆಗೆ ಇದರಂತೆ ಕಠಿಣ ಶಿಕ್ಷೆ ಮತ್ತೊಂದು ಇಲ್ಲವೆಂದು ನಮಗೆ ಅನುಭವವಾಗುವದು. ನಾವು ಬಯಸಿದ್ದು ಹೊಂದದೆ ಶಿಕ್ಷೆ ತಿಂದ ಮೇಲೆ ಪಶ್ಚಾತ್ತಾಪ ಪಟ್ಟು ತಿರಿಗಿ ಬರ ಬೇಕೆಂದು ಮನಸ್ಸಾ ಗುವದು. ದೇವರು ಮಾಡಿದ ಶಿಕ್ಷೆಯು ಮೊದಲು ನಮಗೆ ಕಹಿ ಎಂದು ಕಾಣು ತ್ತದೆ. ಅವನಿಗೆ ಮಾರ್ಮಲೆಯುವದಕ್ಕೂ ನೋಡುತ್ತೇವೆ. ಆದರೆ ಆ ಶಿಕ್ಷೆಯಿಂದ ನಮಗೆ ಎಷ್ಟು ಶುಭವಾಯಿತು, ಹ್ಯಾಗೆ ರಕ್ಷಣೆಯಾಯಿತು ಎಂದು ನಮ್ಮ ಮನಸ್ಸಿಗೆ ಅರಿಕೆಯಾದ ಮೇಲೆ, ದೇವರು ಆ ಶಿಕ್ಷೆಯನ್ನು ಕಳುಹಿಸಿದ್ದಕ್ಕೆ ನಾವು ದೇವರನ್ನು ಸ್ತೋತ್ರ ಮಾಡುವೆವು. ಸ್ನೇಹಿತರೇ, ದೇವರು ನಮಗೆ ಶಿಕ್ಷೆ ಮಾಡುವ ವಿಧವು ವಿಲ ಕ್ಷಣವಾದದ್ದೆಂದು ತೋರುತ್ತದೆ, ಖರೆ; ಆದರೆ ಈ ಶಾಲೆಯಲ್ಲಿ ಕಲಿಯುವ ದಿವಸ ಗಳು ಮುಗಿಯುವವು; ನಾವು ಕಲಿತ ಹಾಗೆ ನಮಗೆ ಪ್ರತಿಫಲವೂ ಸಿಕ್ಕುವದು. ದೇ ವರು ನಮಗೆ ಕೋರಡೆ ಹೊಡೆಯುತ್ತಾನೆ; ಇಲ್ಲವೆ ಕುಶಲ ವೈದ್ಯನಂತೆ ಶಸ್ತ್ರಪ್ರಯೋ ಗ ಮಾಡುತ್ತಾನೆ. ಆದರೆ ಕೋರಡೆಯ ಪೆಟ್ಟಿನಿಂದಲಾಗಲಿ ಶಸ್ತ್ರಪ್ರಯೋಗದಿಂದಲಾ ಗಲಿ ಜ್ಞಾನ ಪಡಕೊಂಡವನೇ ದೇವರಿಂದ ಬಹುಮಾನವನ್ನು ಹೊಂದುವನು.

ಯಾರ ಮನಸ್ಸು ಪಲ್ಲಟವಾಗಲಿಲ್ಲವೋ ಅವನಲ್ಲಿ ಅಹಂಕಾರವೂ ದುರಾಗ್ರಹವೂ ಒಂದಾನೊಂದು ರೀತಿಯಿಂದ ವಸ್ತಿಯಾಗಿರುವದರಿಂದ, ಅವನು ಯೇಸು ಕ್ರಿಸ್ತನು ರಕ್ಷಕನೆಂದು ನಂಬದೆ ಹೋಗುತ್ತಾನೆ. ಒಬ್ಬನು ತಾನು ಜ್ಞಾನಿ ಎಂದು ಅಹಂಕರಿಸು ತ್ತಾನೆ; ಆತ್ಮದಲ್ಲಿ ದೀನನಲ್ಲ; ಅವನು ದೇವರಿಂದ ಜ್ಞಾನವನ್ನು ಬೇಡಿ ಹೊಂದ ಬೇ ಕೆಂದು ಇಚ್ಛೆಯಿಸುವದಿಲ್ಲ. ಇನ್ನೊಬ್ಬನಿಗೆ ದೇವರ ನೀತಿ ಬೇಕೆಂದು ಹಸಿವೆ ಬಾಯಾ ರಿಕೆ ಇಲ್ಲ. ಅವನು ನಿತ್ಯಜೀವನದ ಅನ್ನಪಾನವನ್ನು ಪಡಕೊಳ್ಳುವದಕ್ಕೆ ಯತ್ನ ಮಾ ಡುವದಿಲ್ಲ. ಮತ್ತೊಬ್ಬನಿಗೆ ತಾನು ಇರುವ ಸ್ಥಿತಿಯೇ ಉತ್ತಮವೆಂದು ತೋರು ತ್ತದೆ. ತನ್ನ ಪಾಪಮಯವಾದ ದುರವಸ್ಥೆ ಕಂಡು ಬರುವದಿಲ್ಲ. ಬೇರೊಬ್ಬನು ತಾನೇ ಮಹಾ ಪುಣ್ಯವಂತನೆಂದು ಹೆಮ್ಮೆ ಮಾಡುತ್ತಾನೆ. ಆದದರಿಂದ ಯೇಸು ಕ್ರಿಸ್ತ ನ ಪುಣ್ಯದಿಂದ ತಾನು ವಿಮೋಚನೆಯನ್ನೂ ರಕ್ಷಣೆಯನ್ನೂ ಹೊಂದ ಬೇಕೆಂದು ತಿಳಿ ಯುವದಿಲ್ಲ. ಮನುಷ್ಯನ ಗರ್ವವೂ ದುರಹಂಕಾರವೂ ಮುರಿಯ ಬೇಕು, ಅವನ ನಿಜ ಸ್ಥಿತಿ ಇತರರಿಗೂ ದೇವರಿಗೂ ಯಾವ ಪ್ರಕಾರ ಕಾಣುತ್ತದೆಂಬುವದು ಅವನಿ ಗೆನೇ ಮನವರಿಕೆಯಾಗ ಬೇಕು; ಇದು ಆಗದ ಹೊರ್ತು ಅವನು ಸನ್ಮಾರ್ಗಕ್ಕೆ ಬರು ವದಿಲ್ಲ. ದೇವರು ಪಾಪಗಳನ್ನು ಕ್ಷಮೆ ಮಾಡ ಬೇಕೆಂದು ಅವನಲ್ಲಿ ಕಾಂಕ್ಷೆ ಹುಟ್ಟುವ ಮೊದಲು, ಅವನು ಕ್ಷಮೆ ಬೇಕೆಂದು ದೇವರಿಗೆ ಪ್ರಾರ್ಥನೆ ಮಾಡನು. ಮನುಷ್ಯನ ಜ್ಞಾನವು ಕೇವಲ ಮೂರ್ಖತ್ವ, ಮನುಷ್ಯನ ಸಾಮರ್ಥ್ಯವೆಂಬುವದು ನಿರ್ಬಲತ್ವ; ಮನುಷ್ಯನ ಪುಣ್ಯವೂ ನೀತಿಯೂ ದೇವರ ದೃಷ್ಟಿಯಲ್ಲಿ ಕೇವಲ ಹೊಲೆ. ಆದ್ದರಿಂದ ಮನುಷ್ಯನು ತನ್ನ ಅಹಂಕಾರವನ್ನು ಬಿಟ್ಟು ದೇವರು ಏನು ಕಲಿಸುತ್ತಾನೋ ಅದನ್ನು

ಕಲಿಯ ಬೇಕು; ತನ್ನನ್ನು ತಗ್ಗಿಸಿಕೊಳ್ಳ ಬೇಕು; ಮಗುವಿನಂತೆ ದೀನ ಮನಸ್ಸನ್ನು ತಾಳ ಬೇಕು. ನನ್ನ ಶಾಸ್ತ್ರದಲ್ಲಿ ಅನೇಕ ಮಾರ್ಗಗಳವೆ; ಯಾವದರಲ್ಲಿ ನಡೆಯ ಮನಸ್ಸದೆಯೋ ಅದರಲ್ಲಿ ನಡೆಯ ಬಹುದು, ಪರರ ಉಪದೇಶವು ಬೇಡವೆಂದು ದುರಾಗ್ರಹ ಮಾಡ ಬಾರದು. ಶಿಷ್ಯನ ಭಾವದಲ್ಲಿ ದೇವರ ಮಾರ್ಗವನ್ನು ಕಲಿಯುವೆನೆಂಬುವವನಿಗೆ ಅದು ಗೊತ್ತಾಗುವದು. ಮತ್ತು ಈಗ ದೇವರ ಸತ್ಯವಾದ ಮಾರ್ಗವನ್ನೂ ಯೇಸು ಕ್ರಿಸ್ತನಲ್ಲಿ ಪಾಪವಿಮೋಚನೆಯುಂಟೆಂಬ ಸುವಾರ್ತೆಯನ್ನೂ ತಿಳುಕೊಳ್ಳುವದಕ್ಕೆ ದೇವರು ಅನುಕೂಲ ಮಾಡಿರುವಾಗ್ಯೆ ಕಾಲಹರಣ ಮಾಡಿದರೆ ಕಡೆಗೆ ಸುಕಾಲ ಕಳೆದು ಹೋಗಿರುವದು; ಕಣ್ಣೀರಿನಿಂದ ಹುಡುಕಿದರೂ ಸಿಕ್ಕದು. ತಡ ಮಾಡ ಬೇಡಿರಿ; ಒಳ್ಳೇ ಸಮಯವನ್ನು ಸುಪ್ರಯೋಗ ಮಾಡಿ ಸದ್ಗತಿಯನ್ನು ಪಡೆಯುವವರಾಗಿರಿ.

ಮನೋಧೈರ್ಯವು.

ಮನುಷ್ಯನು ಸ್ವತಂತ್ರವನ್ನು ಬಯಸುವವನು. ತನ್ನ ಇಚ್ಛೆಯಂತೆ ಮಾಡ ಬೇಕು, ಮಾತಾಡ ಬೇಕು, ನಡೆಯ ಬೇಕು ಎಂಬುವದೇ ಅವನ ಮುಖ್ಯ ಅಪೇಕ್ಷೆ. ತನ್ನ ಸ್ವತಂತ್ರವನ್ನು ಕಳಕೊಳ್ಳುವದಕ್ಕಿಂತ ಮರಣವೇ ಲೇಸೆಂದನ್ನುವನು. ಅಫ್ರಿಕ ಖಂಡದ ಹಬಶಿ ಜನರನ್ನು ಸಮರ್ಥರಾದ ಇತರ ಜನರು ಹಿಡಿದು ಬಂದರಗಳಿಗೆ ತಂದು ಹಡಗಗಳಲ್ಲಿ ಅಮೇರಿಕಕ್ಕೆ ವೈದು ದನಕರುಗಳಂತೆ ಮಾರುವ ವಾಡಿಕೆ ಇತ್ತು. ಹಬಶಿಗಳನ್ನು ಕೊಂಡುಕೊಂಡ ಜನರು ಅವರನ್ನು ಕೇವಲ ಪಶುಗಳಂತೆ ನಡಿಸಿ, ಶಕ್ತಿ ಮೀರಿ ಕೆಲಸ ಮಾಡಿಸಿ, ಹೊಟ್ಟೆತುಂಬಾ ಕೂಳು ಕೊಡಿಸದೆ, ಕೆಲಸಕ್ಕೆ ಆಲಸ್ಯ ಮಾಡಿದರೆ ಕೊರಡೆ ಹೊಡಿಸಿ, ನಾನಾ ತರದಲ್ಲಿ ಬನ್ನ ಪಡಿಸುತ್ತಿದ್ದರು. ಅಡಿಯಾಳುಗಳಾದವರಿಗೆ ಧನಿಯು ಮಾಡುವ ಉಪಟಳಕ್ಕಾಗಿ ಸರಕಾರದಲ್ಲಿ ಫಿರ್ಯಾದು ಮಾಡುವದಕ್ಕೂ ಸ್ವತಂತ್ರ ಇರಲಿಲ್ಲ. ಇಂಥಾ ಅಡಿಯಾಳುಗಳ ಅವಸ್ಥೆ ಬಹಳ ದೌರ್ಭಾಗ್ಯದ್ದು ಸತ್ತ ಬಾಳುವೆ ಎಂದು ಯಾರು ಒಪ್ಪದಿರುವರು? ಇತ್ತ ಅಮೇರಿಕದವರು ಹಬಶಿ ದಾಸರು ಪಡುವ ತಿಪ್ಪಲನ್ನು ಮನಸ್ಸಿಗೆ ತಂದು ಇತರ ಪ್ರಜೆಗಳಂತೆ ಅವರಿಗೂ ಸ್ವತಂತ್ರವಿರ ಬೇಕೆಂದು ನಿರ್ಣಯಿಸಿ ಬಿಡುಗಡೆ ಮಾಡಿಸಿದ್ದಾರೆ.

ಆದರೆ ಈಗ ಇಂಥಾ ಅಡಿಯಾಳುಗಳು ಇಲ್ಲವೋ? ಕೈ ಕಾಲಿಗೆ ಬೇಡಿಯೋ ಕೋಳವೋ ಹಾಕಿಸಿಕೊಂಡು ಕೊರಡೆ ಪೆಟ್ಟು ತಿನ್ನುವ ಗುಲಾಮರು ಈಗ ಇಲ್ಲ, ಖರೆ; ಆದರೆ ತಮ್ಮ ಇಚ್ಛೆಯ ಪ್ರಕಾರ ನಡೆಯದೆ ನಡೆಯಲಾರದೆ ಇರುವವರು ಸ್ವತಂತ್ರರಲ್ಲ, ದಾಸರ ಲೆಖ್ಖಕ್ಕೆ ಶೇರುತ್ತಾರೆ. ಏನು ಮಾಡುವದು, ಸ್ವಾಮಿ, ನೀವು ಹೇಳುವದು ವಾಸ್ತವ್ಯ; ಆದರೆ ನಮ್ಮ ಜಾತಿಯ ನಿಬಂಧನೆಗೆ ವಿರೋಧವಾಗುತ್ತದೆ; ನಮ್ಮ ಬಂಧುಬಳಗದವರಿಗಾಗಿ ಹಾಗೆ ಮಾಡಲಿಕ್ಕಾಗುವದಿಲ್ಲ ಎಂದನ್ನುವವರು ಹೇರಳ

ರಿದ್ದಾರೆ. ಅವರು ಕೇವಲ ಹೆಡ್ಡರಲ್ಲ, ವಿದ್ಯಾವಂತರಾಗಿರುತ್ತಾರೆ. ಭೂಮಿಯು ಗೋಳಾಕಾರವಾಗಿದೆಂದು ಬುದ್ಧಿಯಿಂದ ಗ್ರಹಿಸಿದರೂ ನೆರೆಯವರಿಗಾಗಿ ಭೂಮಿ ಕಮಲಪತ್ರದಂತೆ ಅದೆ ಎಂದು ಹೇಳ ಬೇಕೆಂದು ಅವರಿಗೆ ತೋರುತ್ತದೆ, ಯಾತಕ್ಕೆ? ಚಂದ್ರನ ಭೂಮಿಯ ಛಾಯೆಯಿಂದ ಗ್ರಹಣವಾಗುವದೆಂದು ತಿಳಿದರೂ ರಾಹು ಕೇತುಗಳು ಗ್ರಹಣಕ್ಕೆ ಕಾರಣವೆಂದೂ ಅದಕ್ಕಾಗಿ ಉಪವಾಸ ಸ್ನಾನಾದಿಗಳನ್ನು ಕೈಕೊಳ್ಳ ಬೇಕೆಂದೂ ಅವರಿಗೆ ತೋರುತ್ತದೆ, ಇದು ಯಾತಕ್ಕೆ? ಪರದೇಶಕ್ಕೆ ಹೋದರೆ ಭ್ರಷ್ಟನಾಗುವದಿಲ್ಲ, ಪಂಚಗವ್ಯದಿಂದ ಪಾಪಕ್ಷಮೆ ಹೃದಯಶುದ್ಧಿ ಆಗಲಾರದೆಂದು ತಿಳಿದರೂ ತಾನೇ ಪೂರ್ವದ ನಿಬಂಧನೆಗಳಿಗೆ ಒಳಪಡುತ್ತಾರೆ, ಇದು ಯಾತಕ್ಕೆ? ಭೂಗೋಳ ಖಗೋಳ ರಸಾಯನ ತರ್ಕ ಲೋಕದ ಪೂರ್ವಾಪರ ಇತಿಹಾಸ ಮೊದಲಾದ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಒಳ್ಳೇ ವ್ಯುತ್ಪನ್ನರಾದವರು ತಮಗೊಪ್ಪುವ ನೀತಿಯನ್ನೂ ಸತ್ಯವನ್ನೂ ಕೈಕೊಳ್ಳುವದಕ್ಕೆ ಧೈರ್ಯ ಪಡುವದಿಲ್ಲ. ಇಂಥವರು ಸ್ವತಂತ್ರರೋ? ಪರತಂತ್ರರೋ? ಇಂಗ್ಲಿಷಿನಲ್ಲಿ ಒಂದು ನೀತಿವಾಕ್ಯವದೆ: ಸತ್ಯತ್ವದ ಪಕ್ಷದಲ್ಲಿ ಕೇವಲ ಇಬ್ಬರು ಮೂವರೂ ಇದ್ದಾರೆ; ಹೆಚ್ಚು ಮಂದಿ ಇಲ್ಲ ಎಂದು ಆ ಪಕ್ಷಕ್ಕೆ ಸೇರಲು ಅಂಜುವವರು ದಾಸರು. ಘನವಾದ ವಾಕ್ಯವಿದು! ಇಂಗ್ಲಿಷಿನಲ್ಲಿ ಇನ್ನೊಂದು ವಾಕ್ಯವೇನಂದರೆ: ಸತ್ಯತ್ವದ ಪಕ್ಷದಲ್ಲಿ ಬೇರೆ ಯಾರೂ ಇಲ್ಲದೆ ನೀನೊಬ್ಬನೇ ನಿಲ್ಲ ಬೇಕಾದರೂ ನಿಲ್ಲು. ನಮ್ಮ ದೇಶದವರಿಗೆ ಇಂಥಾ ಧೈರ್ಯವು ಯಾವಾಗ ಬಂದೀತು? ನೂರಾರು ಮಂದಿ ಇಲ್ಲವೆ ಜಾತಿಯವರೆಲ್ಲರೂ ಒಟ್ಟಾಗಿ ಒಂದಾನೊಂದು ಕಾರ್ಯವನ್ನು ಮಾಡುವ ಪಕ್ಷದಲ್ಲಿ ನಾನೂ ಕೂಡುವೆನು ಎಂದು ಹೇಳುವವರು ಬಹು ಜನರಿದ್ದಾರೆ. ಹೀಗೆ ಹೇಳುವದರಲ್ಲಿ ಯಾತರ ಧೈರ್ಯ! ಸಾವಿರಾರು ಜನರ ಪಕ್ಷಕ್ಕೆ ಸೇರುವವರು ಬಹಳ ಜನರಿರುವರು. ಆದರೆ ಒಂದು ಕಾರ್ಯಕ್ಕೆ ಆರಂಭ ಮಾಡುವವರು ಬೇಕಷ್ಟೇ. ಬೇರೆಯವರು ಆರಂಭ ಮಾಡಿದರೆ ನಾನೂ ಅವರಿಗೆ ಸಹಾಯಕನಾಗುತ್ತೇನೆಂಬುವದರಲ್ಲಿ ಏನು ಧೈರ್ಯ! ಮುಂದೆ ಹೋಗುವವರು ನೊದಲು ಬೇಕು; ಹಿಂದಿನಿಂದ ಬರುವ ಕುರಿಗಳು ಬಹಳ ಸಿಕ್ಕುವವು.

ಒಂದಾನೊಂದು ಗೋಷ್ಟಿಯ ಸತ್ಯತ್ವವು ಮನಸ್ಸಿನಲ್ಲಿ ಖಚಿತವಾದರೂ ಅದಕ್ಕನುಸಾರವಾಗಿ ವರ್ತಿಸುವದಕ್ಕೆ ಅನೇಕರಿಗೆ ಮನೋಧೈರ್ಯವಿರದೆ ಅವರು ತಮ್ಮ ವಿಚಾರಗಳಿಗನುಸಾರವಾಗಿ ಆಚರಣೆ ಮಾಡದೆ ಹೋಗುವದಕ್ಕೆ ಜಾತಿಯವರ ಬಂಧುಬಾಂಧವರ ಭಯ ಮೊದಲಾದದ್ದುಂಟೆಂದು ಮೇಲೆ ಹೇಳಿದ್ದಾಯಿತು. ಇಂಥಾ ಭಯವುಂಟೆಂಬುವದು ನಿಶ್ಚಯವು. ಅಡಚಣೆಗಳ ನಿಮಿತ್ತ ತಿದ್ದುಪಾಟುಗಳನ್ನು ರೂಢಿ ಮಾಡಲೇ ಬಾರದು, ಅವುಗಳ ಗೊಡವೆಗೆ ಸೇರ ಬಾರದೆಂಬುವದೂ ಆಗದ ಮಾತು. ಚಂದ್ರಗ್ರಹಣ ಭೂಛಾಯೆಯಿಂದಾಗುತ್ತದೆಂದರೆ, ಅಜ್ಜ ಮುತ್ತಜ್ಜರಿಗೆ ಭಟ್ಟರಿಗೆ ಸಿಟ್ಟು ಬರುತ್ತದೆಂದು ರಾಹು ಕೇತುಗಳ ನಿಮಿತ್ತ ಆಗುತ್ತದೆಂದು ಸುಳ್ಳು ಹೇಳ ಬೇಕೋ? ಪಂಚಗವ್ಯ ಮೊದಲಾದ ಪ್ರಾಯಶ್ಚಿತ್ತ ಮಾಡದಿದ್ದರೆ ಜಾತಿಯವರು ಸಹಭೋಜನ

ಮಾಡರೆಂದು ಶಕ್ಯತನದಿಂದ ಪ್ರಾಯಶ್ಚಿತ್ತ ತಕ್ಕೊಳ್ಳ ಬೇಕೋ? ಜನರ ಭಯದಿಂದಲೂ ಲಜ್ಜೆಯಿಂದಲೂ ಅಪ್ರಯೋಜಕ ಕೃತ್ಯ ಮಾಡುವವರಲ್ಲಿ ನಿಜವಾದ ಮತವಾಗಲಿ ಮತಾಭಿಮಾನವಾಗಲಿ ಇರಲಾರದು.

ಗತಾನುಗತಿಕೋಲೋಕ: ಎಂಬ ಗಾದೆಯಂತೆ ಒಬ್ಬರು ನಡೆದಂತೆ ನಾನೂ ನಡೆಯ ಬೇಕು; ಹಿರಿಯರಿಂದ ಪರಂಪರೆಯಾಗಿ ಬಂದ ಪದ್ಧತಿಗಳನ್ನು ಕಣ್ಣು ಮುಚ್ಚಿ ಕೈಕೊಳ್ಳ ಬೇಕು; ಹಿತವೋ, ಅಹಿತವೋ, ಒಳ್ಳೇದೋ, ಕೆಟ್ಟದ್ದೋ ಎಂದು ಯಾರು ವಿಚಾರ ಮಾಡುತ್ತಾ ಕೂಂಡ್ರುತ್ತಾರೆ? ಪರಮಾರ್ಥವೆಂದರೇನು? ಈಗ ಲೌಕಿಕವೇ ಬೇಕಾದದ್ದು ಎಂದು ಹೇಳಿ ಮಹದ್ವಿಚಾರವನ್ನು ತೊರೆದು ಅಲ್ಪವಿಚಾರಕ್ಕೆ ಸೇರುತ್ತಾರೆ. ನೀರಿನಲ್ಲಿ ಮಿಂದರೆ ಪಾಪ ಹೋಗುತ್ತದೆನ್ನುವವನು ಪಾಪವೆಂದರೇನು, ಅದರಿಂದ ವಿಮೋಚನೆಯಾಗುವದು ಹ್ಯಾಗೆ ಎಂಬುವದೇನೂ ಅರಿಯನು. ಯೇಸು ಕ್ರಿಸ್ತನೇ ರಕ್ಷಕನೆಂದು ತಿಳಿದರೂ ತಾನು ಆತನ ಶಿಷ್ಯನಾದರೆ ಜಾತಿಭ್ರಷ್ಟನಾದೇನು, ನನ್ನ ಮಕ್ಕಳಿಗೆ ಮದುವೆ ಮಾಡುವದು ಯಾರಿಗೆ ಎಂದು ಶಂಕೆ ಪಡುವವನಿಗೆ ತನ್ನ ರಕ್ಷಣೆ ಹೆಚ್ಚಿನದೋ, ಜಾತಿ ಭಯವೂ ಲೌಕಿಕ ಲಾಭವೂ ಹೆಚ್ಚಿನದೋ?

ಪ್ರತಿಯೊಬ್ಬನಿಗೆ ಐಹಿಕವಾದ ತಾತ್ಕಾಲಿಕ ಲಾಭಕ್ಕಿಂತ ಪಾರಮಾರ್ಥಿಕವಾದ ನಿತ್ಯವಾದ ಲಾಭವು ಹೆಚ್ಚಿನದಾಗಿರ ಬೇಕು. ರುವಿಗಿಂತ ರೂಪಾಯಿಗೆ ಬೆಲೆ ಹೆಚ್ಚು, ರೂಪಾಯಿಗಿಂತ ವರಹಕ್ಕೆ ಬೆಲೆ ಹೆಚ್ಚು. ಹಾಗೆ ಐಹಿಕ ಸುಖಸೌಕಾರ್ಯಕ್ಕಿಂತ ಪಾರಮಾರ್ಥಿಕ ಸುಖವೇ ಹೆಚ್ಚಿನದು. ಆದರೆ ಈ ಸಂಗತಿ ಮನುಷ್ಯರ ಧ್ಯಾನಕ್ಕೆ ಬರುವದಿಲ್ಲ. ಇದೇ ಆಶ್ಚರ್ಯ. ನಿತ್ಯ ಸುಖ ಕೊಡುವ ಮಾರ್ಗವನ್ನು ತಾತ್ಸಾರ ಮಾಡಿ ಅನಿತ್ಯವಾದ ಲಾಭವನ್ನು ಹಿಡುಕೊಳ್ಳುವವನು ಮೂಢನಲ್ಲವೇ. ಪೂರ್ವಕಾಲದಲ್ಲಿ ಹೇರಳ ಭಕ್ತರು ಜೀವಕ್ಕಿಂತಲೂ ಹೆಚ್ಚಾಗಿ ಸತ್ಯವನ್ನು ಪ್ರೀತಿ ಮಾಡಿದರು. ಸತ್ಯಕ್ಕೋಸ್ಕರವಾಗಿ ಹಿಂಸೆಯನ್ನೂ ಪಟ್ಟರು. ಈ ದೇಶದಲ್ಲಿಯೂ ಕ್ರೈಸ್ತಧರ್ಮವು ಪ್ರಸಾರವಾದ ಮೊದಲಿನಲ್ಲಿ ಎಷ್ಟೋ ಮಂದಿ ಮುಸಲ್ಮಾನರೂ ಹಿಂದುಗಳೂ ಧೈರ್ಯದಿಂದ ಮುಂದೆ ಬಂದು ಕ್ರೈಸ್ತರಾಗಲಿಕ್ಕಿದ್ದಾಗ್ಯೆ ಅವರಿಗೆ ಜಾತಿಯವರು ಹಲವು ಪ್ರಕಾರ ತೊಂದರೆಗಳನ್ನು ಕೊಟ್ಟರು. ಆದರೆ ಅವರು ತಾವು ತಿಳಿದ ಸತ್ಯವನ್ನು ಬಿಡದೆ, ಎಲ್ಲಾ ಭಯವನ್ನೂ ಅಪಮಾನವನ್ನೂ ಹಿಂದಕ್ಕೆ ಹಾಕಿ, ಸ್ಥಿರವಾಗಿದ್ದು ರಕ್ಷಣೆ ಹೊಂದಿದರು. ಹೀಗೆ ಎಲ್ಲಾ ವಿಡ್ಡೂರಗಳನ್ನು ಜಯಿಸುವದಕ್ಕೆ ದೇವರು ಅವರ ಧೈರ್ಯವನ್ನೂ ವಿಶ್ವಾಸವನ್ನೂ ಬಲ ಪಡಿಸಿದನು. ಅವರು ದೇವರ ಮಹಿಮೆಗಿಂತ ಮನುಷ್ಯರ ಮಹಿಮೆಯನ್ನು ಹೆಚ್ಚಾಗಿ ಪ್ರೀತಿ ಮಾಡಿದವರಾಗಿರಲಿಲ್ಲ. ದೇವರಿಂದ ಮಾತ್ರ ಮಾನವನ್ನು ಹುಡುಕದೆ ಒಬ್ಬರಿಂದೊಬ್ಬರು ಮಾನವನ್ನು ತಕ್ಕೊಳ್ಳುವವರು ವಿಶ್ವಾಸಿಸಲಾರರು. ಸತ್ಯವನ್ನು ಹಿಡಿದುಕೊಳ್ಳ ಬೇಕು ಎಂದು ಒಂದೇ ಮನಸ್ಸುಳ್ಳವನಿಗೆ ದೇವರು ಸಹಾಯಕನಾಗಿದ್ದಾನೆ.

ಠ ನೇ ತೀ ವೆ ೯.

(೧೮೬೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಹಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಶೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೩೦ ರೂ ಪಾಯಿಗೆ ಎಮ್ಮಿದರೆ . . . . . ೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಎಮ್ಮಿರದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ನಮೂದಿಸಿದ ರೂಪಾಯಿ ೩೦೦ಕ್ಕೆ ಎಮ್ಮಿರದಿದ್ದರೆ	೦ ೩	೦ ೧	೦ ೧
ರೂಪಾಯಿ ೩೦೦ಕ್ಕೆ ಎಮ್ಮಿರಿ ೪೦೦ „	೦ ೪	೦ ೩	೦ ೩
„ ೪೦೦ „ ೬೦೦ „	೦ ೬	೦ ೪	೦ ೩
„ ೬೦೦ „ ೧೦೦೦ „	೦ ೧೦	೦ ೫	೦ ೪
„ ೧೦೦೦ „ ೧೩೦೦ „	೦ ೧೩	೦ ೬	೦ ೪
„ ೧೩೦೦ „ ೧೬೦೦ „	೧ ೦	೦ ೮	೦ ೬
„ ೧೬೦೦ „ ೩೫೦೦ „	೧ ೮	೦ ೧೩	೦ ೮
೩೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೩೫೦೦ಕ್ಕೆ ಯಾ ಅದರ ಅಂಶಕ್ಕೆ.	೧ ೮	೦ ೧೩	೦ ೮
೧೦೦೦೦ ರೂಪಾಯಿ ಮೇಲೆ ೬೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ. . . .	೬ ೦	೧ ೮	೧ ೦
೬೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬ ೦	೩ ೦	೩ ೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ಠಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜನ ಮೇಲೆ) ಭರಾವಣೆಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೬೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಎಮ್ಮಿರದಿದ್ದರೆ	೩ ಆಣೆ
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಎಮ್ಮಿರದಿದ್ದರೆ. .	೪ ಆಣೆ
೫೦ „ „ ೧೦೦ „ „ . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂತಕ್ಕೆ	೮ ಆಣೆ
೧೦೦೦„ „ ಪ್ರತಿ „ ೫೦೦ಕ್ಕೆ ಯಾ ಅದರ ಅಂಶಕ್ಕೆ . .	೩ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬುದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಎಮ್ಮಿರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

ಮುಂದಿನಂತೆ, ಮೊದಲ್ಲಿ ತಿಳಿಸಿದ ಪ್ರತಿಫಲವು ಮಾಡಿದಲ್ಲಿ

ರೂ. ೫೦ಕ್ಕೆ ಮೀರದಿದ್ದರೆ . . . . . ೯ ಆಣೆ

„ ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

„ ೧೦೦ „ „ ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂತಕ್ಕೆ ೧ ರೂಪಾಯಿ

„ ೧೦೦೦ „ „ ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂತಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ತೀವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೆ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೆ ದಸ್ತಾವೇಜು . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಮ್ಮತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಸಾಧನಕ್ಕೆ ಹೇಳಿರುವಷ್ಟೆ ಠಸೆ

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೇ ಠಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರುಷಕ್ಕೆ ಮೀರಿ, ೫ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣವಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣವಾಗಿದ್ದರೆ— ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಆಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಆದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂಶವನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ. . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಎಂಬಿದ ಯಾವ ಸರಕನ್ನಾಗಲಿ ಜೀನಸನ್ನಾಗಲೀ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು). . . . . ೧ ಆಣೆ

48. ಯಾವದೊಂದು ಹೊಸ ನಿರ್ಮಾಣದ ತಪ್ಸೀಲು ಪಟ್ಟಿಯನ್ನು ದಾಖಲು ಮಾಡುವ ಬಗ್ಗೆ, ಯಾ ಸದ್ರಿ ನಿರ್ಮಾಣವನ್ನು ಬೇರೆ ಯಾರಾದರೂ ಮಾಡಿ ಉಪಯೋಗಿಸದಂತೆ, ಅಪ್ಪಣೆಯಾಗ ಬೇಕಾಗಿ ಬರಕೊಳ್ಳುವ ಅರ್ಜಿ ೧೦೦ ರೂಪಾಯಿ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮುಚ್ಚಯವಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಎಂಬಿದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . . × ರೂಪಾಯಿ

d) ಸಮುಚ್ಚಯವಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಎಂಬಿ ೧೦ಕ್ಕೆ ಎಂಬಿದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಮೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಎಂಬಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಸೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಎಂಬಿದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಎಂಬಿದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

57. (Settlement) ಸೆಟ್ಲಿಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ವೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ × ರೂಪಾಯಿಗೆ ಎಂಬಿದಿದ್ದರೆ—ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

60. (Transfer) ಟ್ರಿನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ಸಾದನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ—21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾತಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶೂರೆನ್ಸ (ಬೀಮ ಉತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶೂರೆನ್ಸ ಹಾಸಲು × ರೂಪಾಯಿಗೆ ಎಂಬಿದಿದ್ದರೆ ಅದರಷ್ಟೆ ಹಾಸಲು.

ಇತರ ಸಂಗತಿಯಲ್ಲಿ— × ರೂಪಾಯಿ

ಠಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. ಅ) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕನ್ನು ಮಾರಾಟದ ಸಮ್ಮಂಧವಾಗಿರುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೬. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—ಅ) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ, ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; ಆ) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರಶೀದಿ:—ಅ) ಕ್ರಮವಾಗಿ ಠಸೇ ಮೇಲೆ ಅದಂಥಾ ಯಾವ ದಸ್ತಾವೇಜಿನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಶನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; ಆ) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದಕ್ಕೆ ರಶೀದಿ; ಇ) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ಠೇವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಪಾತರೀ ಬಗ್ಗೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸ್ಸೆಗೆ, ಅಥವಾ ಹಿಸ್ಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಮ್ಮಂಧಿಸುವದಿಲ್ಲ.

೧೬. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವರ್ಗಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡುವ ಬಗ್ಗೆ ರಿಜಿಸ್ತ್ರಾರರಿಗೆ ತೆರ ತಕ್ಕ ಫೀಸಿನ ದರ.

								ರೂ.	ಆ.
ದಸ್ತೈವಜನ	ಮೌಲ್ಯ	೨೫	ರೂಪಾಯಿಗೆ	ಮೀರದಿದ್ದರೆ	.	.	.	೦	೯
"	"	೨೫	"	ಮೀರಿ	೫೦	ರೂಪಾಯಿಗೆ	ಮೀರದಿದ್ದರೆ	೦	೧೨
"	"	೫೦	"	"	೧೦೦	"	"	೧	೦
"	"	೧೦೦	"	"	೨೦೦	"	"	೧	೯
"	"	೨೦೦	"	"	೫೦೦	"	"	೩	೦
"	"	೫೦೦	"	"	೧೦೦೦	"	"	೫	೦
"	"	೧೦೦೦	"	"	೫೦೦೦೦	ರೂಪಾಯಿ	ವರೆಗೆ ಪ್ರತಿ ಹೆಚ್ಚಿಗೆ ೧೦೦೦ ರೂಪಾಯಿಗೆ ಯಾ ಅದರ ಅಂಶಕ್ಕೆ	೧	೦
"	"	೫೦೦೦೦	ರೂಪಾಯಿ	ಮೇಲೆ	ಪ್ರತಿ ೧೦೦	ರೂಪಾಯಿಗೆ	ಯಾ ಅದರ ಅಂಶಕ್ಕೆ	೦	೯

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಅದರ ನೆರೆತೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳು ಜೀನಸು, ಇಂಥಾದ್ದನ್ನು ಟಪ್ಪಾಲಿನ ಮೇಲೆ ರವಾನಿಸ ಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಂಮೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಬಂಡು ತರದ ಬರಹ, ಛಾಪೆ, ಚಿತ್ರ, ನಕ್ಷೆ, ಇಂಥಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಖೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ; ಒಂದು ವೇಳೆ ಅವನು ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದಂತ ಅದು ತಲ್ಪಿದ ಆಫೀಸಿನ ಪೋಸ್ಟ್‌ಮಾಸ್ತರಿಗೆ ಕಂಡರೆ, ಆ ಆಫೀಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರಶೀದಿ ತಿಳ್ಕುವವಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಫಿಕೇಟನ್ನು ಪಡಕೊಳ್ಳ ಬಹುದು. ಹ್ಯಾಗಂದರೆ, ಅದರ ಮೇಲುವಿಳಾಸದ ಯಥಾಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಅವೆರಡನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಿದಲ್ಲಿ, ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆ

ಯನ್ನು ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್‌ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚಿದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಬಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು. ಈ ಮೇರೆಗೆ ಚೀಟು ಹಚ್ಚದೆ ರವಾನಿಸುವಂಥಾದ್ದರ ಮೇಲೆ "ಬೇರಿಂಗ್" (Bearing) ಎಂದು ಬರಿಯ ಬೇಕು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂದಿಲ್ಲ.

ಒಂದು ಟಪ್ಪಾಲ ಕಾರ್ಡು, ಲಿಫಾಪೆ, ಇಲ್ಲವೆ ಪೆಕೆಟು ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲವ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಸ್ತ್ರಿ ಮಾಡಿಸ ಬಹುದು. ಹ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು, ವಿಳಾಸ ಸಹ ಬರೆದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಆಗುವ ಮುಂಚಿ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಅವರು ಅದನ್ನು ರಿಜಸ್ತ್ರಿ ಮಾಡಿ, ಭಾಪಾ ರಶೀದಿ ಕೊಡುವರು. ಮತ್ತು ಸದರಿ ಲಿಫಾಪೆ ಯಾ ಕಾರ್ಡು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಪೆಕೆಟು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡಿದ್ದಲ್ಲಿ ಆ ಪ್ರಕಾರ ತರಿಸಿ ಕೊಡೋಣಾಗುವದು.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟಿಗಳೂ ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದ ಪೆಕೆಟುಗಳೂ ಈ ಟಪ್ಪಾಲಿನ ದ್ವಾರಾ ಹೋಗುವವು.

ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	ಅ. ೦ ಪೈ. ೬
" ೧ " "	೧ ೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂಶಕ್ಕೆ	೧ ೦
ಟಪ್ಪಾಲ ಕಾರ್ಡು ಒಂದಕ್ಕೆ	೦ ೩
ಉತ್ತರ ಸಿಗತಕ್ಕ ಜೋಡು ಕಾರ್ಡಿಗೆ	೦ ೬

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು. ಅದರ ಹಿಂಬದಿಯಲ್ಲಿ ಬರಿಯುವದಾಗಲಿ ಭಾಪಿಸುವದಾಗಲಿ ಮಾತ್ರ ವಲ್ಲದೆ ರಶೀದಿ ಮುಂತಾದ ಚೀಟು ಸಹ ಹಚ್ಚಿ ಬಹುದು. ಜೋಡು ಕಾರ್ಡನ್ನು ಬೇರೆಬೇರೆಯಾಗಿಯೂ ಪ್ರಯೋಗಿಸ ಬಹುದು.

೬ ಪೈ ಕಾರ್ಡು, ೬ ಪೈ ಜೋಡು ಕಾರ್ಡು, ½, ¾, ೧, ೧½, ೨, ೩, ೪, ೪½, ೬, ೯, ೧೨ ಆಣೇ, ೧ ರೂಪಾಯಿ ಚೀಟುಗಳೂ, ½, ¾, ೧, ೨ ಆಣೆ, ಇಲ್ಲವೆ ೪½ ಆಣೆಯ ಚೀಟುಳ್ಳ ಲಖೋಟಿಗಳೂ ದೂರಾಟಕ್ಕೆ ಸಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಯೆ, ಬೇರೆ ಬೇರೆಯವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಬರೆದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಶಿಕ್ಷೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ (Book-Packet and Pattern-Packet) "ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್" ಎಂಬ, ಮತ್ತು (Parcel) "ಪಾರ್ಸೆಲ್" ಎಂಬ ಎರಡು ವಿಧದ ಕಟ್ಟುಗಳು ಈ ಟಪ್ಪಾಲ ದ್ವಾರಾ ರವಾನಿಸಲಾಗುತ್ತದೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್	ಅ. ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦ ೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂಶಕ್ಕೆ	೦ ೬

ಒಂದು ಪೆಕೆಟು ೨ ಫೂಟ್ ಉದ್ದ ೧ ಫೂಟ್ ಆಗಲ ಅಥವಾ ದಪ್ಪಕ್ಕೆ ಮೀರ ಬಾರದು. ಬುಕ್‌ಪೆಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಅದರೆ ಪೆಟರ್ನ್‌ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್	ಅ. ಪೈ.
ಭಾರದಲ್ಲಿ ೨೦ ತೊಲೆಗೆ ಮೀರದಿದ್ದರೆ	೪ ೦
" ೪೦ " "	೮ ೦
ಹೆಚ್ಚಿಗೆ ಪ್ರತಿ ೪೦ " ಯಾ ಅದರಂಶಕ್ಕೆ	೪ ೦

ಇದರ ಟಪ್ಪಾಲಹಾಸಲು ರೊಕ್ಕವಾಗಿ ತೆರ ಬೇಕು. ಪಾರ್ಸೆಲು ಭಾರದಲ್ಲಿ ೩೫ ಶೇರು (೨೦೦೦ ತೊಲೆ) ಗಳಿಗೆ ಮೀರ ಬಾರದು; ಮತ್ತು ಅದರ ಗಾತ್ರ ಆಕಾರ, ಕಟ್ಟಿದ ರೀತಿ, ಇವುಗಳ ಜೆತೆಯಿಂದ ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ (ಇಂಥಾದ್ದಕ್ಕೆ ಸಮ್ಮಂಧವಾದ ಕೈಬರಹವಿದ್ದರೆ, ಅದರ ಸಮೇತ) ಬರದು ತಿಳಿಸುವ ಯಾ ಲೇಖನಸ್ವಛಾಪದ್ವಾಗಿರದೆ, ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು, ಭರಾವಣಿಚೀಟು, ಸಾಮಾನುಪಟ್ಟಿ, ಲೆಕ್ಕುದ ಪಟ್ಟಿ ಎಂಬೀ ತರದ ಕಾಗದಗಳು; ಯಾವದೊಂದು ವರ್ತಮಾನ ಪತ್ರದಲ್ಲಿ (ಇಲ್ಲವೆ ಪುಸ್ತಕವಾಗಿ) ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ರವಾನಿಸಲ್ಪಡುವ ಕೈಬರಹದ ಕಾಗದಗಳು—ಇಂಥಾದ್ದೆಲ್ಲ "ಬುಕ್‌ಪೆಕೆಟಿಗೆ" ಶೇರುತ್ತವೆ. ಅದಲ್ಲದೆ ಮನಃಪೂರ್ವಕವಾಗಿ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, ಅಂಥಾದ್ದು "ಪೆಟರ್ನ್‌ಪೆಕೆಟಿಗೆ" ಶೇರುತ್ತದೆ. (2) ಪೆಕೆಟು ಉಭಯ ಕಡೆಗಳಲ್ಲಿಯೂ ಮುಲ್ಲಾ ಬಿಟ್ಟು, ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ, ಕಟ್ಟಿ ತರ ಬೇಕು. (3) ಈ ಉಭಯ ತರದ ಪೆಕೆಟುಗಳಿಗೂ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚಿ ಬೇಕು; ಹಚ್ಚದೆ ರವಾನಿಸಿದರೆ, ಆ ಪೆಕೆಟು ಹೊಂದುವವನು ಆ ದಸ್ತೂರಿಯ ದುಡಾರೆ, ಇಲ್ಲವೆ ಹಚ್ಚಿದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಡಾರೆ ಹಾಸಲು ರೊಕ್ಕುವಾಗಿ ತೆರ ಬೇಕು. (4) ಪೆಕೆಟು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ಸಿಗುವದಿಲ್ಲ; ಅದರೆ ಅದನ್ನು ರಿಜಸ್ತ್ರಿ ಮಾಡಿಸಿದ್ದಾದರೆ, ರಶೀದಿ ಕೊಡೋಣಾಗುತ್ತದೆ.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲ ಚೀಟಲ್ಲದೆ, ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಪ್ರಕಾರ ಮುಂಗಡವಾಗಿ ತೆರುವ ಹಾಸಲಿನ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪತ್ರಿಕೆಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿ ಇರುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲಿಗೆ ಎಮಾರದಿದ್ದರೆ	೧೦ ತೊಲಿಗೆ	ಪ್ರತಿ ಹೆಚ್ಚಿಗೆ ೧೦ ತೊಲಿಗೆ ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

"ಪಾರ್ಸೆಲು":—(1) ಇದನ್ನು ಪೂರಾ ಬಂದು ಮಾಡಿ ಕಟ್ಟಿ ತರ ಬೇಕು. (2) (ನಿಷೇಧಿಸಲ್ಪಟ್ಟ ಸಾಮಾನುಗಳ ಎನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (3) ಆದರೆ, ಇದರಲ್ಲಿ ಒಂದಕ್ಕಿಂತ ಹೆಚ್ಚಿಗೆ ಲೇಖನಪತ್ರದ ಸ್ವಛಾವದ್ದೇನಾದರೂ ಹಾಕ ಬಾರದು. (4) ಇದನ್ನು ಪ್ರತ್ಯೇಕ ರಿಜಸ್ತ್ರಿ ಮಾಡುವದು ಅವಶ್ಯವಿಲ್ಲ; ಯಾಕಂದರೆ ಇದನ್ನು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ಸಿಗುತ್ತದೆ†; ಮತ್ತು ಅದು ತಲ್ಪಿದ್ದಕ್ಕೆ ಪಾರ್ಸೆಲು ಹೊಂದಿದವನಿಂದ ರಶೀದಿ ಸಹ ಪಡಕೊಳ್ಳೋಣಾಗುತ್ತದೆ. (5) ಇದಕ್ಕೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕಷ್ಟೆ; ಆದರೆ ದಸ್ತೂರಿ ಮುಂದಾಗಿ ಸಲ್ಲಿಸಿದರೂ, ನಿರಖಿಗೆ ಕಡಿಮೆಯಾದರೆ, ಅದನ್ನು ಮಂಜೂರು ಮಾಡೋಣಾಗಲಿಕ್ಕಿಲ್ಲ.—ಅದಲ್ಲದೆ ಪಾರ್ಸೆಲು ಹೊಂದಿದವನಿಂದ ರಶೀದಿ ತರಿಸಿ ಕೊಡಿಸ ಬೇಕಾದರೆ, ೧ಆಣೆ ದಸ್ತೂರಿ ಕೊಡ ಬೇಕು.

(Value Payable Article) "ವೇಲ್ಯ್ಯೂ ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವತಿಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್‌ಎಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದೂಪ ಪಡಿಸಿರುವ ಮೌಲ್ಯವನ್ನು ಆ ಲಿಫಾಪೆ ಯಾ ಕಟ್ಟು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪಾರ್ಸೆಲುಗಳಾಗಲೀ ಪೆಕೆಟುಗಳಾಗಲೀ ಲಖೋಟೆಗಳಾಗಲೀ ಮನಿ ಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿಮೆಯಾಗಲೀ, ಸಾವಿರ ರೂಪಾಯಿಗೆ ಎಮಾರಿ ಆಗಲೀ ಇರ ಬಾರದು, ಮತ್ತು ಅದರಲ್ಲಿ ಒಂದು ಆಣೆಯ ಅಂಶವೂ ಇರ ಬಾರದು. ಹೀಗೆ ರವಾನಿಸುವವನು ಟಪ್ಪಾಲ ಆಫಿಸಿನ ಮಾಫಿಯಾಗಿ ತಿಳ್ಕುವ ಒಂದು ಛಾಪಾಕಾಗದದ ಮೇಲೆ ಅದರ ಮೌಲ್ಯವನ್ನು ಕುರಿತು ಬರದು ಅದರ ಸಂಗಡ ಕೊಡ ಬೇಕು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ರಿಜಸ್ತ್ರಿ ಲಿಫಾಪೆ ಅದರ ಠಿಕಾಣಿಗೆ ಬಂದು ಮುಟ್ಟುತ್ತಲೇ ಅದು ಹೊಂದ ತಕ್ಕವನಿಗೆ ಜ್ಞಾನವನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಅತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ರವಾನಿಸಿ, ಅದನ್ನು ಪಡಕೊಳ್ಳ ಬಹುದು.

---

* ಅಂದರೆ ೩೧ ದಿವಸಗಳಿಗೆ ಎಮಾರದ ಕಾಲಾವಧಿಯಾಗಿ ಪ್ರಕಟವಾಗುವ ವರ್ತಮಾನಪತ್ರಗಳು.

† ಅಂದರೆ ಪಾರ್ಸೆಲು ಟಪ್ಪಾಲಿಗೆ ಹಾಕುವಾಗ ಅದರ ಸಂಗಡ ಛಾಪಾರಶೀದಿಯನ್ನು ಭರಾಯಿಸಿ ಕೊಡ ಬೇಕು. ಇದಕ್ಕೆ ದಸ್ಕತು ಹಾಕಿ ವಾಪಸು ಕೊಡೋಣಾಗುತ್ತದೆ. ಇಂಥಾ ರಶೀದಿ ಫಾರ್ಮುಗಳಾಗಲೀ ಬುಕ್ಕುಗಳಾಗಲೀ ಟಪ್ಪಾಲಕಟ್ಟೆಯಲ್ಲಿ ಜೊರೆಯುತ್ತವೆ.

ಆದರೆ ರಿಜಿಸ್ತ್ರಿ ಆಗದಿರುವ ಪೆಕೆಟನ್ನು ಟಪ್ಪಾಲ ಪೇದೆಯು ಅದರ ವಿಳಾಸವಿರುವವನಿಗೆ ಮುಟ್ಟಿಸಿ, ಅದರ ನಿರಖು ಮೌಲ್ಯವನ್ನು ಅವನಿಂದ ಈಸಿಕೊಳ್ಳುವನು. ಇದನ್ನೂ ಇನ್ಶೂರ್ ಮಾಡಲು ಬಹುದು.

೨. **ಪರೀಕ್ಷೆಯಲ್ಲಿ ಕೇಳುವ ವಿಷಯಗಳು.**—ಲೌಕಿಕ ಪರೀಕ್ಷೆಯಲ್ಲಿ ನಮ್ಮ ಜ್ಞಾನವೆಷ್ಟು ವ್ಯುತ್ಪತ್ತಿ ಎಷ್ಟು ಎಂತ ನೋಡುತ್ತಾರೆ. ಆ ಪರೀಕ್ಷೆಯಲ್ಲಿ ಹಾಗಲ್ಲ; ನೀನು ಧನಿಕನೋ ಕುಲೀನನೋ ವಿದ್ವಾಂಸನೋ ಎಂದು ದೇವರು ನಮ್ಮನ್ನು ವಿಚಾರಿಸನು. ನೀನು ಒಳ್ಳೇಯವನೋ ಎಂತಲೇ ವಿಚಾರಿಸುವನು. ಮನುಷ್ಯನ ಕೃತ್ಯಗಳು ಮಾತುಗಳು ಆಲೋಚನೆಗಳು ಎಂಥವುಗಳು ಎಂದು ವಿಚಾರಿಸುವನು. ಮನುಷ್ಯರು ಮಾತಾಡುವ ಒಂದೊಂದು ಮಾತಿಗಾಗಿ ನ್ಯಾಯತೀರ್ವಿಕೆಯ ದಿನದಲ್ಲಿ ಲೆಖ್ಖ ಒಪ್ಪಿಸುವರು. ನಾವು ಬಾಲಾಪ್ಯದಿಂದ ಮಾಡಿದ್ದೆಲ್ಲ ಲೆಖ್ಖಕ್ಕೆ ಬರುವದು.

೩. **ಪರೀಕ್ಷೆಯ ಕ್ರಮಗಳು.**—ಸರಕಾರಿ ಪರೀಕ್ಷೆಗಳಲ್ಲಿ ಆಯಾ ಕ್ರಮಗಳನ್ನು ಮಾಡಿ ಇಡುತ್ತಾರೆ. ಎರಡು ಕ್ರಮಗಳನ್ನು ಮಾತ್ರ ಪ್ರಸ್ತಾಪಿಸುವಾ. ಪರೀಕ್ಷೆಯಾಗುವಾಗ್ಯೆ ವಿದ್ಯಾರ್ಥಿಗಳು ಉಪಾಧ್ಯಾಯರನ್ನೂ ಇತರರನ್ನೂ ಕೇಳಿ ತಿಳುಕೊಳ್ಳಲು ಅಪ್ಪಣೆ ಇಲ್ಲ. ಇದು ಒಂದು ಕ್ರಮ. ಪರೀಕ್ಷೆಯ ಕೋಣೆಗೆ ಬರುವ ಮೊದಲು ವಿದ್ಯಾರ್ಥಿಗಳು ಯಾರನ್ನಾದರೂ ಕೇಳಿ ತಿಳಿಯ ಬಹುದು. ಒಳಗೆ ಬಂದ ಮೇಲೆ ಕೇಳಿ ತಿಳಿಯುವ ಸಮಯವು ಮುಗಿದದೆ. ಹಾಗೆ ಆ ಭಾರಿ ಪರೀಕ್ಷೆಗೆ ನಾವು ಹೋಗುವ ಮೊದಲೇ ನಾವು ಬೇಕಾದದ್ದೆಲ್ಲಾ ಕೇಳಿ ತಿಳಿದು ಸಂಗ್ರಹವಾಗಿಟ್ಟುಕೊಳ್ಳ ಬೇಕು. ಪರೀಕ್ಷೆಯ ಕಾಲದಲ್ಲಿ ಇನ್ನೊಮ್ಮೆ ಅಂಥಾ ಸಂದರ್ಭವು ನಮಗೆ ಒದಗದು. ಇನ್ನೊಂದು ಕ್ರಮವೆಂದರೆ ಪರೀಕ್ಷೆಯಲ್ಲಿ ಒಬ್ಬರು ಬರದದ್ದನ್ನು ನೋಡಿ ಬರೆಯಲಾಗದು; ತಾನೇ ಪ್ರಯತ್ನ ಮಾಡಬೇಕು. ಹಾಗೆಯೇ ಆ ದೊಡ್ಡ ಪರೀಕ್ಷೆಯ ದಿವಸದಲ್ಲಿ ನಮ್ಮ ಅಪ್ತಮಿತ್ರರಿಂದಲೋ ಇತರರಿಂದಲೋ ನಮಗೆ ಯಾವದೊಂದು ಸಹಾಯ ಸಿಕ್ಕದು; ಬೇರೆಯವರ ಒಳ್ಳೇತನವನ್ನು ನಮ್ಮದು ಎಂದು ತಂದು ತೋರಿಸ ಕೂಡದು. ಒಬ್ಬೊಬ್ಬನು ತನ್ನ ತನ್ನ ಕೃತ್ಯದಿಂದಲೇ ತೀರ್ಪನ್ನು ಹೊಂದುವನು.

೪. **ಪರೀಕ್ಷೆಯ ಫಲ.**—ಸರಕಾರಿ ವಿದ್ಯಾಶಾಲೆಗಳ ಪರೀಕ್ಷೆಯಲ್ಲಿ ತೇರುಗಡೆ ಪಟ್ಟು ಆಯಾ ಬಿರುದು ಸಂಪಾದಿಸ ಬೇಕೆಂದು ಎಷ್ಟು ವಿದ್ಯಾರ್ಥಿಗಳು ಹಾರೈಸುತ್ತಾರೆ! ಆ ಬಿರುದು ಪಡೆದು ಬರುವ ಲಾಭವೇನು? ಅದರಿಂದ ಕ್ಷೇಮವೂ ಆರೋಗ್ಯವೂ ಬಾರದು; ದೀರ್ಘಾಯುಷ್ಯ ಶಿಕ್ಕದು; ಅನೇಕ ಬಿರುದು ದುಡಿದವನು ರೋಗಿಯಾಗಿರ ಬಹುದು, ನಿರ್ಭಾಗ್ಯನಾಗಿರ ಬಹುದು, ಬಿರುದು ದುಡಿಯದವರು ಕ್ಷೇಮವಂತರಾಗಿ ಸುಖಸ್ಥರಾಗಿರ ಬಹುದಲ್ಲ. ಆದರೆ ಪರೀಕ್ಷೆಯಲ್ಲಿ ಬಿರುದು ಸಿಕ್ಕುವದಕ್ಕೆ ಬದಲಾಗಿ ತೇರುಗಡೆ ಪಟ್ಟ ವಿದ್ಯಾರ್ಥಿಗೆ ಒಂದು ಲಕ್ಷ ರೂಪಾಯಿ ಸಿಕ್ಕುತ್ತದೆ, ತೇರುಗಡೆ ಪಡದವನಿಗೆ ಟಾಪು ಫಿತುವೆಯಾಗುತ್ತದೆ ಎಂಬುವ ಕ್ರಮವಿದ್ದರೆ ಪರೀಕ್ಷೆಗೆ ಹೋದ ವಿದ್ಯಾರ್ಥಿಗಳು ತೇರುಗಡೆ ಪಟ್ಟವರ ಹೆಸರು ಬರೆದಿರುವ ಪಟ್ಟಿಯನ್ನು ಎಷ್ಟು ಆತುರದಿಂದ ನೋಡುವರು, ತನಗೆ ಲಕ್ಷ ರೂಪಾಯಿ ಇನಾಮೋ ಅಂದಮಾನ ದ್ವೀಪಗಳಿಗೆ ಹೋಗ ಬೇಕೆಂಬ ಟಾಪು ಫಿತುವೆಯೋ ಎಂದು ತಿಳಿಯುವದಕ್ಕೆ ಉತ್ಸುಕ ಪಡುವನು.

ಹಾಗಾದರೆ ಆ ದೊಡ್ಡ ಪರೀಕ್ಷೆಯ ಫಲವನ್ನು ಕುರಿತು ಏನು ಹೇಳುವಾ! ಅದರಲ್ಲಿ ತೇರುಗಡೆ ಪಟ್ಟವರಿಗೆ ಲಕ್ಷ ರೂಪಾಯಿ ಅಲ್ಲಾ, ಅದು ಸಿಕ್ಕಿದರೂ ಮರಣಕಾಲದಲ್ಲಿ ಬಿಟ್ಟು ನಡೆಯ ಬೇಕಲ್ಲಾ, ಅದು ಇದ್ದಾಗ್ಯೂ ನಿಜ ಭಾಗ್ಯವೂ ಸುಖವೂ ಬಾರದು, ಆದರೆ ನಿತ್ಯ ಜೀವವು, ಅಂದರೆ ದೇವರ ರಾಜ್ಯದಲ್ಲಿ ನಿತ್ಯಕ್ಕೆ ಸುಖವನ್ನನುಭವಿಸುವ ಸದ್ಗತಿ ಸಿಕ್ಕುವದು. ಅದರಲ್ಲಿ ತೇರುಗಡೆ ಪಡೆದವರ ಗತಿ ಏನು? ಯೇಸು ಕ್ರಿಸ್ತ ಸ್ವಾಮಿಯವರು ಹೇಳಿದ್ದು: ಆಗ ಅರಸನು ಎಡಪಾರ್ಶ್ವದಲ್ಲಿರುವವರಿಗೆ ಹೇಳುವನು—ಶಪಿತರೇ ನನ್ನ ಬಳಿಯಿಂದ ಹೋಗಿರಿ, ಸೈತಾನನಿಗೂ ಅವನ ದೂತರಿಗೂ ನಿಯತವಾದ ನಿತ್ಯ ಬೆಂಕಿಗೆ ನಡೆಯಿರಿ.

ಆ ಭಾರಿ ಪರೀಕ್ಷೆಯಲ್ಲಿ ಸೇರುವವರಿಗೆಲ್ಲಾ ಸಿಕ್ಕುವ ಫಲಗಳು ಇವೆರಡೇ: ನಿತ್ಯ ಜೀವ ನಿತ್ಯ ದಂಡನೆ, ಅನಂತ ಭಾಗ್ಯವು ಅನಂತ ದುಃಖವು. ಆ ಪರೀಕ್ಷೆಯಲ್ಲಿ ನಾವೆಲ್ಲರೂ ಸೇರ ಬೇಕು, ಪರೀಕ್ಷೆಯ ದಿನವನ್ನು ದೇವರು ನೇಮಿಸಿದ್ದಾನೆ, ಆ ದಿನವು ಇಂದೋ ನಾಳೆಯೋ ಬರ ಬಹುದು. ದೇವರೇ ಪರೀಕ್ಷಾಕರ್ತನಾಗಿ ನಾವು ಮಾಡಿದ್ದು ನುಡಿದದ್ದು ಯೋಚಿಸಿದ್ದು ಯಾವತ್ತು ನಮ್ಮನ್ನು ಕೇಳಿ ಪರೀಕ್ಷೆ ಮಾಡುವನು. ಆತನ ಸನ್ನಿಧಾನದಲ್ಲಿ ಏನಾದರೂ ಮರೆ ಮಾಡಲಾರೆವು, ಪರೀಕ್ಷೆಗೆ ಬರಲೊಲ್ಲೆನೆಂದು ಹೇಳಲಾರೆವು. ಅಂಥಾ ಭಯಂಕರ ದಿವಸವಾಗಿರುವದು.

೫. **ಹೀಗಿರುವದರಿಂದ ಆ ಭಾರಿ ಪರೀಕ್ಷೆಯಲ್ಲಿ ತೇರುಗಡೆ ಪಡುವದು ಹ್ಯಾಗೆ ಎಂದು ನಾವು ಆಲೋಚಿಸ ಬೇಕಲ್ಲ.**—ಸರಕಾರಿ ಪರೀಕ್ಷೆಗಳಲ್ಲಿ ತೇರುಗಡೆ ಪಡ ಬೇಕಾದರೆ ನೇಮಕವಾದ ಪಾಠಗಳನ್ನು ಕಲಿಯ ಬೇಕು, ಪುಸ್ತಕಗಳನ್ನು ಚನ್ನಾಗಿ ಓದಿ ಅರ್ಥವನ್ನು ನೆನವರಿಕೆ ಮಾಡಬೇಕು. ಬೇರೆ ಮಾರ್ಗವಿಲ್ಲಾ; ಆ ಭಾರಿ ಪರೀಕ್ಷೆಯ ದಿನದಲ್ಲಿ ಪರಿಶುದ್ಧನೂ ನೀತಿವಂತನೂ ಆಗಿರುವ ದೇವರು ನಮ್ಮನ್ನು ಪರೀಕ್ಷೆ ಮಾಡುವಾಗ ಏನು ಕಾಣುವನು? ನಮ್ಮ ಮನೋವಾಕ್ಕಾಯಗಳಿಂದ ಆದದ್ದೆಲ್ಲಾ ನಮ್ಮ ಕೃತ್ಯಗಳು ನುಡಿಗಳು ಯೋಚನೆಗಳು ಯಾವತ್ತು ಪಾಪವೆಂದು ಕಾಣುವನಲ್ಲವೇ. ನಮ್ಮ ಮನಃಸ್ಸಾಕ್ಷಿಯೂ ನಮ್ಮನ್ನು ಪಾಪಿಷ್ಠರೆಂದು ಖಂಡಿಸುವದಿಲ್ಲವೋ? ಹೃದಂತರಂಗದಲ್ಲಿರುವ ದುರಾಲೋಚನೆಗಳು ದೇವರ ಮುಂದೆ ಪ್ರಕಟ

ವಲ್ಲವೋ? ನಾವು ಪಾಪಿಗಳಾಗಿರುವದರಿಂದ ದೇವರ ಪರೀಕ್ಷೆಯಲ್ಲಿ ತೇರುಗಡೆ ಪಡ ಲಾರೆವು. ಪರೀಕ್ಷೆಯಲ್ಲಿ ಸೋತವರಿಗೆ ಸಿಕ್ಕುವ ಗತಿಯೇ ನಮಗೂ ಸಿಕ್ಕುವದು. ಆದರೆ ದೇವರು ದಯಾಳು; ನಮಗೆ ದಂಡಣೆ ಮಾಡಬೇಕು ಎಂದಲ್ಲಾ ನಮಗೆ ಸದ್ಗತಿಯನ್ನು ಕೊಡ ಬೇಕೆಂದು ಚಿತ್ತವುಳ್ಳವನು; ನಾವು ಆತನ ಪರೀಕ್ಷೆಯ ದಿನದಲ್ಲಿ ಒಳ್ಳೇ ತೇರುಗಡೆ ಪಟ್ಟು ತನ್ನ ಮಹಿಮೆಯ ರಾಜ್ಯದಲ್ಲಿ ನಿತ್ಯ ಜೀವವನ್ನು ಪಡೆಯುವ ಹಾಗೆ ಮಾರ್ಗವನ್ನು ಮಾಡಿದ್ದಾನೆ. ಆತನು ತನ್ನ ಕುಮಾರನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು. ಪಾಪಿಗಳಾದ ಮನುಷ್ಯರು ಪಾಪಗಳಿಂದ ವಿಮೋ ಚನೆ ಹೊಂದಿ ನೀತಿವಂತರಾಗಿ ಪರಿಶುದ್ಧರಾಗಿ ಆ ಮಹಾ ಪರೀಕ್ಷೆಯಲ್ಲಿ ತೇರುಗಡೆ ಪಡುವ ಹಾಗೆ ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದನು. ಆತನು ಪರಿಶುದ್ಧ ಮನುಷ್ಯನಾಗಿ ದೇವರ ಚಿತ್ತವನ್ನು ತ್ರಿಕರಣಗಳಿಂದ ಕೈಕೊಂಡು ಸರ್ವೇ ಮನುಷ್ಯರ ಪಾಪವನ್ನು ತನ್ನ ಮೇಲೆ ವಹಿಸಿಕೊಂಡು ಮರಣ ಪಟ್ಟು ಪುನರುತ್ಥಾನವಾದನು. ಯೇಸು ಕ್ರಿಸ್ತನು ಪಾಪಿಗಳನ್ನು ರಕ್ಷಿಸುವದಕ್ಕೆ ಈ ಲೋಕಕ್ಕೆ ಬಂದನೆಂದೂ ಪಾಪಿ ಗಳಲ್ಲಿ ಶ್ರೇಷ್ಠನಾದ ತನ್ನನ್ನು ಸಹಾ ಆತನು ರಕ್ಷಿಸುತ್ತಾನೆಂದೂ ಯಾರು ನಂಬಿ ಆತ ನಿಗೆ ಶರಣಾಗತನಾಗುತ್ತಾನೋ ಅವನೇ ಪಾಪಗಳಿಂದ ವಿಮುಕ್ತನಾಗುತ್ತಾನೆ. ಆ ಪರೀಕ್ಷೆಯ ದಿನದಲ್ಲಿ ತಾನು ಪುಣ್ಯಾತ್ಮನು ಕೃತಕೃತ್ಯನಾಗಿದ್ದೇನೆ ಎಂದು ದೇವರ ಮುಂದೆ ಯಾವನೂ ಹೇಳಲಾರನು. ತಾನು ಇಂಥಿಂಥವನಿಗಿಂತ ಒಳ್ಳೆಯವನೆಂದು ಹೇಳಲೂ ಕೂಡದು; ಯಾಕಂದರೆ ದೇವರ ಚಿತ್ತವನ್ನು ಮನವಾರೆ ಕೈಕೊಂಡಿಯೋ ಎಂಬುವದೇ ಮುಖ್ಯ ಪ್ರಶ್ನೆ. ನಾನು ಪೂರ್ಣವಾಗಿ ಕೈಕೊಂಡಿದ್ದೇನೆಂದು ಧೈರ್ಯ ವಾಗಿ ಹೇಳ ಬಲ್ಲವನು ಯಾವನೂ ಇಲ್ಲ. ಅದಲ್ಲದೆ ತನ್ನ ಪಾಪಗಳಿಗೆ ತಾನೇ ವಿಮೋಚನೆ ಮಾಡಿಕೊಳ್ಳಲು ಶಕ್ತನು ಯಾವನೂ ಇಲ್ಲ. ಆದದರಿಂದ ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡು, ಆಗ ನೀನು ರಕ್ಷಣೆ ಹೊಂದುತ್ತಿ ಎಂಬುವದಾಗಿ ದೇವರು ಕರೆದು ಹೇಳುವ ಸಾಮವಾಕ್ಯವನ್ನು ಕೇಳಿ ಯೇಸು ಕ್ರಿಸ್ತನ ಮುಖಾಂತರ ನಮ್ಮನ್ನು ದೇವರ ಕರುಣೆಗೆ ಒಪ್ಪಿಸಿ ನನ್ನನ್ನು ರಕ್ಷಿಸು ತ್ರಾಹಿ ಎಂದು ನಂಬುವದೇ ನಮ್ಮ ಧರ್ಮವು. ಆ ಮಹಾ ಪರೀಕ್ಷೆಯಲ್ಲಿ ತೇರುಗಡೆ ಪಟ್ಟು ನಿತ್ಯ ಭಾಗ್ಯಕ್ಕೆ ಬಾಧ್ಯಸ್ಥರಾಗ ಬೇಕಾದರೆ ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಶುದ್ಧ ಹೃದಯದಿಂದಲೂ ಜೀವನದಿಂದಲೂ ಆತನನ್ನು ಪ್ರೀತಿ ಮಾಡುವದೂ ಸೇವಿಸುವದೂ ಇದೊಂದೇ ಮಾರ್ಗವಾಗಿದೆ.

ಘನ. ಕ್ರಿಸ್ತಿಯನ್ ಶ್ವಾರ್ಟ್ಜ ಅಯ್ಯನವರು.

ಪಂಚಾಂಗದ ಬುಡದಲ್ಲಿ ಒಂದು ಚಿತ್ರವೂ ಅದರ ಕೆಳಗೆ ಹೆಸರೂ ಬರೆದದೆ. ಈ ಮನುಷ್ಯನು ಯಾವಾತನು ಎಂದು ವಾಚಕರಿಗೆ ಸಂಕ್ಷೇಪವಾಗಿ ತಿಳಿಸುವೆವು. ಅವನು ಸರಕಾರದಲ್ಲಿ ದೊಡ್ಡ ದೊಡ್ಡ ಸ್ಥಾನಮಾನಗಳನ್ನು ಪಡೆದು ಕೀರ್ತಿಗೊಂಡ ವನಲ್ಲದಿದ್ದಾಗ್ಯೂ, ದೇವರ ರಾಜ್ಯದಲ್ಲಿ ದೇವರ ಸೇವೆ ಮಾಡಿ ನಿರಂತರವಾದ ಯಶ ಸ್ಸನ್ನು ಹೊಂದಿದವನು. ಶ್ವಾರ್ಟ್ಜ ಅಯ್ಯನು ೧೭೫೦ನೇ ಇಸವಿಯಲ್ಲಿ, ಅಂದರೆ ನೂರ

ನಾಲ್ವತ್ತೈರಡು ವರ್ಷಗಳ ಹಿಂದೆ ದೇವರ ಸೇವಕನಾಗಿ ವಿಲಾಯತಿಯಿಂದ ಈ ದೇಶಕ್ಕೆ ಬಂದು ಮುಖ್ಯವಾಗಿ ತಮಿಳ ದೇಶದಲ್ಲಿ ದೇವರ ರಕ್ಷಣೆಯ ಮಾರ್ಗವನ್ನು ಉಪದೇಶ ಮಾಡುವ ಘನವಾದ ಕೆಲಸದಲ್ಲಿದ್ದನು. ಆ ಕಾಲದಲ್ಲಿ ತಂಜಾವೂರು ದೇಶೀಯ ರಾಜ್ಯನ ಶೀಮೆಯಾಗಿತ್ತು; ಅದರ ಅರಸನಾದ ತುಲಸಿ ರಾಜನಿಗೂ ಈತನಿಗೂ ಪರಿಚಿತಿಯಾಗಿ ರಾಜನು ಆತನಲ್ಲಿ ಹೆಚ್ಚು ಪ್ರೀತಿಯನ್ನೂ ಭರವಸವನ್ನೂ ಇಟ್ಟು ಆತನನ್ನು ಆಗಾಗ್ಯೆ ಅರಮನೆಗೆ ಬರ ಹೇಳಿ ಕ್ರೈಸ್ತಧರ್ಮದ ಉಪದೇಶವನ್ನು ಕೇಳುತ್ತಿದ್ದನು. ಕ್ರೈಸ್ತಧರ್ಮವೇ ಸತ್ಯವಾದದ್ದೆಂದು ಅರಸನಿಗೆ ಪೂರ್ಣ ಮಂದಟ್ಟವಾದರೂ ಪ್ರಕಟವಾಗಿ ಸತ್ಯತ್ವದ ಪಕ್ಷದಲ್ಲಿ ನಿಲ್ಲುವದಕ್ಕೆ ಅವನಿಗೆ ಧೈರ್ಯವಿರಲಿಲ್ಲಾ. ತುಲಸಿ ರಾಜನು ಮರಣಕಾಲದಲ್ಲಿ ದತ್ತಪುತ್ರನಾದ ಶರಭೋಜಿಯನ್ನು ಶ್ವಾರ್ಜ ಪಾದರಿಗೆ ಕೈವರ್ತಿಸಿ ಕೊಟ್ಟು ಇವನಿಗೆ ವಿದ್ಯಾಬುದ್ಧಿ ಕಲಿಸ ಬೇಕೆಂದು ಆತನನ್ನು ಬೇಡಿಕೊಂಡನು. ಶರಭೋಜಿ ರಾಜನು ಪಟ್ಟಕ್ಕೆ ಬಂದ ಮೇಲೆ ಶ್ವಾರ್ಜ ಪಾದರಿಯನ್ನು ಪಿತೃಭಕ್ತಿಯಿಂದ ಬಹುಮಾನಿಸುತ್ತಾ ಆತನು ಮರಣ ಪಟ್ಟ ಮೇಲೆ ಆತನ ಸಮಾಧಿಯ ಮೇಲೆ ಶಾಸನವನ್ನು ಇಟ್ಟು ಆತನ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿಸಿದನು. ಅದು ಈ ವರೆಗೂ ಅದೆ. ಮೈಸೂರಿನ ಹೈದರಾಲಿಯೂ ಅವನ ಮಗ ಟೀಪುಸುಲ್ತಾನನೂ ಸಹಾ ಶ್ವಾರ್ಜ ಪಾದರಿಯನ್ನು ಬಹುಮಾನ ಪಡಿಸುತ್ತಿದ್ದನು; ಒಮ್ಮೆ ಮದ್ರಾಸಿನಿಂದ ಇಂಗ್ಲಿಷ ಸರಕಾರದವರು ಹೈದರಾಲಿಯ ಸಂಗಡ ಕವ್ವುಲುಕರಾರು ಮಾಡುವ ಬಗ್ಯೆ ಶ್ವಾರ್ಜ ಪಾದರಿಯನ್ನು ಮೈಸೂರಿಗೆ ಕಳುಹಿಸಿದಾಗ್ಯೆ ಹೈದರಾಲಿ ಸಾಭಿಮಾನದಿಂದ ಶ್ವಾರ್ಜ ಪಾದರಿಯನ್ನು ಬರ ಮಾಡಿಕೊಂಡು ಆತನ ಮಾತಿನ ಮೇಲೆ ಇಂಗ್ಲಿಷ ಸರಕಾರದವರ ಸಂಗಡ ಕವ್ವುಲು ಮಾಡುವದಕ್ಕೆ ಒಪ್ಪಿದನು. ಆತನಲ್ಲಿದ್ದ ನಿಜವಾದ ದೇವರ ಭಕ್ತಿಯೂ ಯಥಾರ್ಥವಾದ ಹೃದಯವೂ ಧನಲೋಭವಿಲ್ಲದ ನಡತೆಯೂ ಸ್ವಾರ್ಥವನ್ನು ಮರೆತ ಪರೋಪಕಾರಿತ್ವವೂ ಸರ್ವರಿಗೂ ದೃಶ್ಯವಾಗಿ ಪ್ರಕಾಶಿಸುತ್ತಿದ್ದವು. ಅದರಿಂದಲೇ ಅವನು ಇಷ್ಟು ಬಹುಮಾನವನ್ನು ಪಡೆದನು. ಶ್ವಾರ್ಜನು ಈ ದೇಶದಲ್ಲಿ ಐವತ್ತು ವರ್ಷಗಳು ಇದ್ದು ಪರಲೋಕಕ್ಕೆ ತೆರಳಿದನು. ಅವನು ಆ ದೇಶದ ಜನರಿಗೆ ಮಾಡಿದ ಉಪದೇಶವೇನು? ತಂದೆಯ ಮನೆಯಲ್ಲಿದ್ದ ಸುಖವನ್ನೂ ಭಾಗ್ಯವನ್ನೂ ಬಿಟ್ಟು ದೂರ ದೇಶಕ್ಕೆ ಹೋಗಿ ಇದ್ದದ್ದೆಲ್ಲಾ ಕಳಕೊಂಡು ಹೊಟ್ಟೆಗಿಲ್ಲದೆ ಬಳಲುವ ರಾಜಕುಮಾರನಂತೆ ಸರ್ವೇ ಮನುಷ್ಯರು ದೇವರನ್ನು ಬಿಟ್ಟು ಪಾಪದಲ್ಲಿಯೂ ಅಗಭೋಗಗಳಲ್ಲಿಯೂ ರಮಿಸುತ್ತಾ ನಿತ್ಯ ಮರಣಕ್ಕೂ ನರಕಕ್ಕೂ ಅರ್ಹರಾಗಿ ಕೆಟ್ಟು ಹೋಗಿದ್ದಾರೆ. ಪುಣ್ಯವನ್ನೂ ಪುಣ್ಯದ ಫಲವನ್ನೂ ಬಯಸುತ್ತಾರೆ; ಲೋಕದಲ್ಲಿ ಅದು ಸಿಕ್ಕುವದಿಲ್ಲ. ದೂರ ದೇಶದಲ್ಲಿ ಅಲೆಯುವ ಮಗನು ತಿರಿಗಿ ಮನೆಗೆ ಬರ ಬೇಕೆಂದು ತಂದೆ ಹಾರೈಸುವಂತೆ ದೇವರು ಎಲ್ಲಾ ಮನುಷ್ಯರು ರಕ್ಷಣೆ ಪಡೆದು ನಿತ್ಯ ಸುಖಕ್ಕೆ ಯೋಗ್ಯರಾಗ ಬೇಕೆಂದು ಚಿತ್ತೈಸಿ ರಕ್ಷಣೆ ಮಾಡುವ ಬಗ್ಯೆ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದ್ದಾನೆ. ಆತನಲ್ಲಿ ವಿಶ್ವಾಸವಿಡುವವರಿಗೆ ನಿತ್ಯ ಜೀವವದೆ; ಅವರೇ ದೇವರ ಮಕ್ಕಳಾಗುವ ಅಧಿಕಾರವನ್ನು ಪಡೆದಿದ್ದಾರೆ. ವಾಚಕನೇ, ನೀನು ಯೇಸು ಕ್ರಿಸ್ತನನ್ನು ಬಲ್ಲೆಯಾ?

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ್-ಎಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪ್ಟೆಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಭಾಗ್ಯವಂತನು ಯಾರು?

ಭಾಗ್ಯವಂತನು ಯಾರು ಎಂದು ಕೇಳಿದರೆ ಉತ್ತರವೇನು? ಹೇರಳ ಧನವಿದ್ದು ಯಾವ ವಿಷಯದಲ್ಲಿಯೂ ಕೊರತೆ ಪಡದವನೇ ಭಾಗ್ಯವಂತನೆಂದೆನ್ನಿಸಿಕೊಳ್ಳುತ್ತಾನೆ. ಆದರೆ ಬಹಳ ಹಣವುಳ್ಳವನಿಗೆ ಸಹಾ ಅಯಾ ಕೊರತೆಗಳವೆ; ಅಂಥವನು ಒಂದು ವೇಳೆ ಮಕ್ಕಳ ಭಾಗ್ಯವಿಲ್ಲದವನು, ಇಲ್ಲವೆ ವಿದ್ಯಾಧನವಿಲ್ಲದವನು, ಇಲ್ಲವೆ ಶರೀರದ ಕ್ಷೇಮವೆಂಬ ಭಾಗ್ಯವಿಲ್ಲದವನು, ಹೀಗೆ ಲೋಕದಲ್ಲಿ ಸಂಪೂರ್ಣವಾದ ಭಾಗ್ಯವು ಇಲ್ಲ. ಒಂದು ವೇಳೆ ತಕ್ಕ ಮಟ್ಟಿಗಾದರೂ ಭಾಗ್ಯವಂತನೆಂದೆನ್ನಿಸಿಕೊಳ್ಳುವವನಿಗಾದರೂ ಆ ಭಾಗ್ಯವನ್ನು ಅನುಭವಿಸಿ ಸುಖ ಪಡುವದಕ್ಕೆ ಆಯುಷ್ಯವೆಲ್ಲಿಯದೆ? ಸುಖಾನುಭವ ಮಾಡುವಾಗಲೇ ಮೃತ್ಯುವು ತನ್ನನ್ನು ತೋರಿಸಿಕೊಂಡರೆ ಈ ಭಾಗ್ಯವೆಲ್ಲಾ ಬೇಡವೆಂದು ತೋರುವದು. ತಾನು ಇದನ್ನೆಲ್ಲಾ ಇಲ್ಲಿಯೇ ಬಿಟ್ಟು ಹೋಗ ಬೇಕೆಂದು ನೆನಸುವಾಗ ಬಹಳ ಶೋಕವಾಗುವದು. ಹಾಗಾದರೆ ಸತ್ಯವಾದ ಶಾಶ್ವತವಾದ ಭಾಗ್ಯವು ತಾನು ಇಹ ಬಿಟ್ಟು ಹೋಗುವ ಕಾಲದಲ್ಲಿಯೂ ತಕ್ಕೊಂಡು ಹೋಗ ತಕ್ಕ ಭಾಗ್ಯವು ಯಾವದೆಂದು ತಿಳಿದು ಅದನ್ನು ಸಂಪಾದಿಸುವದು ಅಗತ್ಯದ ಮಾತು. ಇಂಥಾ ಭಾಗ್ಯವು ಯಾವದೆಂದು ಯೇಸು ಕ್ರಿಸ್ತಸ್ವಾಮಿಯವರು ನಮಗೆ ಬೋಧಿಸಿದ್ದಾರೆ. ಹ್ಯಾಗಂದರೆ: –

೧. ಆತ್ಮದಲ್ಲಿ ಬಡವರು ಭಾಗ್ಯವಂತರು, ಪರಲೋಕರಾಜ್ಯವು ಅವರದು.— ಪರಲೋಕರಾಜ್ಯವೆಂದರೆ ದೇವರ ರಾಜ್ಯವು, ದೇವರು ಅರಸನಾಗಿ ಆಳುವಂಥಾ ದೇವರ ಚಿತ್ತವನ್ನೇ ಪ್ರಜೆಗಳು ಕೈಕೊಳ್ಳುವಂಥಾ ರಾಜ್ಯವು. ಮಹಾ ದೇವರು ನನ್ನ ಅರಸನು, ನಾನು ಆತನ ಪ್ರಜೆ, ಆತನ ಚಿತ್ತವನ್ನು ನಾನು ಮಾಡ ಬೇಕು ಎಂದು ನಮ್ಮಲ್ಲಿ ತುಂಬಾ ಅಪೇಕ್ಷೆ ಇರ ಬೇಕು; ಈಗ ಮನುಷ್ಯರು ದೇವರ ಚಿತ್ತವನ್ನು ಮಾಡುವದಿಲ್ಲ, ತಮ್ಮ ದುಷ್ಟ ಚಿತ್ತವನ್ನೇ ಮಾಡುತ್ತಾರೆ, ಪಿಶಾಚನ ಚಿತ್ತವನ್ನು ಮಾಡುತ್ತಾರೆ, ಪಿಶಾಚನ ಪ್ರಜೆಗಳಾಗಿದ್ದಾರೆ. ಕಡೆಗೆ ಅಂಥವರಿಗೆ ಪಿಶಾಚನಿಗೆ ನೇಮಕವಾದ ನರಕದಲ್ಲೇ ಪಾಲು ಶಿಕ್ಕುವದು. ಆ ಯಾತನಾವಸ್ಥೆಯನ್ನು ತಿಳಿದು ಭಯಪಟ್ಟು ದೇವರ ರಾಜ್ಯದಲ್ಲಿ ಶೇರಿ ದೇವರ ಪ್ರಜೆಯಾಗುವದಕ್ಕೆ ನಿರ್ಣಯ ಮಾಡ ಬಾರದೋ? ದೇವರ ರಾಜ್ಯದಲ್ಲಿ ಶೇರ ಬೇಕಾದರೆ ಆತ್ಮದಲ್ಲಿ ದೀನನಾಗ ಬೇಕು. ಹಾಗಂದರೆ ತಾನು ದೊಡ್ಡವನು ಕುಲವಂತನು ಜ್ಞಾನವಂತನು ಪುಣ್ಯ ಮಾಡ ಸಮರ್ಥನು ಎಂಬುವ ಸ್ವಾಭಿಮಾನವನ್ನು ಪೂರ್ಣವಾಗಿ ತೊರೆಯ ಬೇಕು. ದೇವರ ಮುಂದೆ ತನ್ನನ್ನು ತಗ್ಗಿಸಿಕೊಳ್ಳ ಬೇಕು. ತಾನು ಯಾವ ಕೆಲಸಕ್ಕೂ ಬಾರದವನು, ನರಕದಲ್ಲಿ ದೊಬ್ಬಿಸಿಕೊಳ್ಳುವದಕ್ಕೆ ತಕ್ಕವನು, ತನ್ನಲ್ಲಿ ಒಳ್ಳೇತನವೂ ಪುಣ್ಯವೂ ಏನೂ ಇಲ್ಲವೆಂದು ತನ್ನ ನಿಜ ಸ್ಥಿತಿಯನ್ನೂ ಬಡತನವನ್ನೂ ಅರಿತು ದೇವರ ದಯೆಯನ್ನು ಪಡೆಯಲಿಕ್ಕೆ ಅಪೇಕ್ಷಿಸ ಬೇಕು. ಹೀಗೆ ತನ್ನನ್ನು ತಗ್ಗಿಸಿಕೊಂಡವನೇ ದೇವರ ರಾಜ್ಯವನ್ನು ಶೇರಲಿಕ್ಕೆ ಯೋಗ್ಯನು.

೨. ದುಃಖ ಪಡುವವರು ಭಾಗ್ಯವಂತರು, ಅವರು ಶಾಂತಿ ಹೊಂದುವರು.— ಯಾವದಕ್ಕಾಗಿ ದುಃಖ ಪಡ ಬೇಕು? ಹರೇಯದಲ್ಲಿ ಪಟಿಂಗತನದಿಂದ ರೋಗಗ ಳನ್ನು ಮಾಡಿಕೊಂಡು ದುಃಖ ಪಡುವವರಿದ್ದಾರೆ, ನಾನಾ ಕಾರಣಗಳಿಂದ ಆಸ್ತಿ ಪಾಸ್ತಿ ಯಾವತ್ತು ಕಳಕೊಂಡು ದುಃಖ ಪಡುವವರಿದ್ದಾರೆ; ತಂದೆ ತಾಯಿಗಳನ್ನು ಹೆಂಡರು ಮಕ್ಕಳನ್ನು ಬಂಧುಬಳಗದವರನ್ನು ಕಳಕೊಂಡರೆ ದುಃಖ ಪಡುತ್ತಾರೆ. ಇದು ಲೌಕಿಕ ದುಃಖವು. ಆದರೆ ತಾನು ಮಾಡಿದ ಪಾಪಗಳನ್ನು ನೆನಸಿ, ತನ್ನನ್ನು ಪ್ರೀತಿ ಮಾಡುವ ತಂದೆಯಾದ ದೇವರನ್ನು ಮರೆತೆ, ಅವನ ಅಪ್ಪಣೆಗಳನ್ನು ಮೀರಿದೆ ದೇವರಿಗೆ ವಿರೋಧಿಯಾದೆನೆಂದು ಮರುಗಿ ದೇವರ ಮುಂದೆ ತನ್ನ ದುಃಖವನ್ನು ಹೇಳಿ ಕೊಳ್ಳುವದೇ ಪಾರಮಾರ್ಥ ದುಃಖವು. ಈ ರೀತಿಯಾಗಿ ದುಃಖ ಪಡುವವರಿಗೆ ದೇವರು ಸಮಾಧಾನವನ್ನು ಕೊಡುತ್ತಾನೆ. ಪಾಪಕ್ಕಾಗಿ ದುಃಖ ಪಡುವವರಿಗೆ ದೇವರು ಯೇಸು ಕ್ರಿಸ್ತನ ಮಧ್ಯಸ್ಥಿಕೆಯಿಂದ ಪಾಪಗಳನ್ನು ಕ್ಷಮಿಸುತ್ತಾನೆ. ದೇವರು ಯೇಸು ಕ್ರಿಸ್ತನಲ್ಲಿದ್ದು ಮನುಷ್ಯರನ್ನು ತನಗೆ ಅನ್ಯೋನ್ಯ ಮಾಡ ಬೇಕೆಂತಲೂ ಅವರ ಪಾಪಗಳನ್ನು ಅವರ ಲೆಖ್ಖಕ್ಕೆ ಎಣಿಸದೆ ಮಾಪು ಮಾಡ ಬೇಕೆಂತಲೂ ಚಿತ್ತ ಯಿಸಿದ್ದಾನೆ. ಇದು ಸಮಾಧಾನ ಕೊಡುವ ಸುವಾರ್ತೆಯಲ್ಲವೋ?

೩. ಶಾಂತರು ಭಾಗ್ಯವಂತರು, ಅವರು ಭೂಮಿಯನ್ನು ಬಾಧ್ಯವಾಗಿ ಹೊಂ ದುವರು.— ದೇವರಿಂದ ಪಾಪಗಳ ಕ್ಷಮೆಯನ್ನು ಹೊಂದಿದ ಮನುಷ್ಯರ ನಡವ ಳತೆ ಹ್ಯಾಗಿರ ಬೇಕು? ಅವರು ಅನ್ಯಾಯ ಮಾಡಿದವರಿಗೆ ಪ್ರತಿ ಅನ್ಯಾಯ ಮಾಡು ವದಿಲ್ಲ, ಬೈದವರಿಗೆ ಬೈಯುವದಿಲ್ಲ, ತಮಗೆ ಕೇಡು ಮಾಡಿದವರಿಗೆ ಒಳ್ಳೇದು ಮಾ ಡುತ್ತಾರೆ, ನಿಷ್ಠುರ ಮಾತು ಆಡುವದಿಲ್ಲ, ಯಾವನೊಬ್ಬನೊಂದಿಗೆ ಜಗಳಕ್ಕೆ ಹೋಗು ವದಿಲ್ಲ. ದೀರ್ಘಕೋಪಿಗಳೂ ಮುಂಗೋಪಿಗಳೂ ಆಗಿರುವದಿಲ್ಲ. ಇಂಥಾ ಒಳ್ಳೇ ನಡತೆಗಾಗಿ ಅವರಿಗೆ ಪ್ರತಿಫಲವದೆ. ಅವರು ಭೂಮಿಯನ್ನು ಭಾಧ್ಯವಾಗಿ ಹೊಂ ದುವರು. ಅಂದರೆ ಅವರು ಮಹಾರಾಜರಾಗುವರು ಎಂಬುವರ್ಥವಲ್ಲ; ಅವರು ಯಾವಲ್ಲಿಗೆ ಹೋದರೂ ಅಲ್ಲಿಯೇ ಅಜಾತಶತ್ರುಗಳಾಗಿರುವರು; ಎಲ್ಲರೂ ಅವರಿಗೆ ಬಂಧುಗಳಾಗುವರು. ಅತೃಣೇ ಪತಿತೋ ವಹ್ನಿಃ ಸ್ವಯಮೇವೋಪಶಾಮ್ಯತಿ ಎಂಬ ವಾಕ್ಯದಂತೆ ಪರರಿಂದ ಬರುವ ಬೆಂಕಿಯಂತಿರುವ ಯಾವ ತರದ ಮಾತಾದರೂ ಅವ ರ ಹೃದಯದಲ್ಲಿ ಬಿದ್ದರೆ ಅಲ್ಲಿ ಹುಲ್ಲಿಗೆ ಸಮವಾದ ದುರ್ಗುಣಗಳಿಲ್ಲದ್ದರಿಂದ ಉರಿ ಯದೆ ಸ್ವತೇವ ತಣ್ಣಗಾಗುತ್ತದೆ. ಇಂಥಾ ಶಾಂತರು ಭೂಮಿಯ ಒಡೆಯರು.

೪. ನೀತಿಯು ಬೇಕೆಂದು ಹಸಿವೆ ದಾಹ ಪಡುವವರು ಭಾಗ್ಯವಂತರು, ಅವರು ತೃಪ್ತಿ ಪಡುವರು.— ಹಸುದಾಹಗಳು ಸರ್ವ ಪ್ರಾಣಿಗಳಿಗೂ ಅವೆ; ಅವುಗ ಳನ್ನು ತೃಪ್ತಿ ಪಡಿಸುವ ವಸ್ತುಗಳನ್ನು ದೇವರು ಯಥೇಷ್ಟವಾಗಿ ಉಂಟು ಮಾಡಿ ದ್ದಾನೆ. ನಮ್ಮ ಶರೀರಕ್ಕೆ ಅನ್ನಪಾನಗಳು ಬೇಕಾಗುವ ಹಾಗೆ ನಮ್ಮ ಆತ್ಮಕ್ಕೂ ಬೇಕು. ಆತ್ಮಕ್ಕೆ ಬೇಕಾಗುವ ಅನ್ನಪಾನವು ಯಾವದು? ದೇವರ ನೀತಿಯೂ ದೇವರ ಪುಣ್ಯವೂ. ಇದು ಬೇಕೆಂದು ನಮ್ಮೊಳಗೆ ಹಸಿವೆದಾಹವಾಗ ಬೇಕು. ದೇವರ ದೃಷ್ಟಿಯಲ್ಲಿ ಸಲ್ಲುವ ನೀತಿಯನ್ನು ತಾನು ಯಾವ ಪ್ರಕಾರದ ಕೃತ್ಯದಿಂದಲಾದರೂ ದುಡಿಯಲಾ ರೆನೆಂದು ತಿಳಿದು ದಯಾಳು ದೇವರ ಶರಣಾಗತನಾಗ ಬೇಕು; ನಿನ್ನ ನೀತಿಯನ್ನೂ

ಪುಣ್ಯವನ್ನೂ ನನಗೆ ದಯೆಪಾಲಿಸೆಂದು ಬೇಡ ಬೇಕು. ಮನಮುಟ್ಟಿ ಬೇಡುವವನಿಗೆ ದೇವರು ಕೊಡುತ್ತಾನೆ. ದೇವರ ನೀತಿಯನ್ನು ಪಡೆದವನು ಆತ್ಮದ ಹಶಿವೆ ಬಾಯಾರಿಕೆಗಳನ್ನು ತೃಪ್ತಿ ಪಡಿಸಿಕೊಂಡಿದ್ದಾನೆ. ನಮ್ಮ ಉದ್ಧಾರಕನಾದ ಯೇಸು ಕ್ರಿಸ್ತನೇ ನಮ್ಮ ನೀತಿ. ಆತನನ್ನು ವಿಶ್ವಾಸದಿಂದ ಶರಣುಹೊಕ್ಕವನೇ ನಿತ್ಯ ತೃಪ್ತನಾಗಿದ್ದಾನೆ.

೫. ಶುದ್ಧ ಹೃದಯ ಉಳ್ಳವರು ಭಾಗ್ಯವಂತರು, ಅವರು ದೇವರನ್ನು ನೋಡುವರು.—ಅಶುದ್ಧ ಹೃದಯವು ಯಾವದು? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಪೂರಿತವಾಗಿರುವ ಹೃದಯವು; ಲೌಕಿಕ ಪ್ರೀತಿ, ಪಾಪದ ಪ್ರೀತಿ, ಬದುಕಿನ ಹೆಮ್ಮೆ ತುಂಬಿರುವ ಹೃದಯವು. ಇಂಥಾ ಹೃದಯವುಳ್ಳವನೇ ಕುರುಡನು. ಅವನು ಯೇಸು ಕ್ರಿಸ್ತನ ಸುವಾರ್ತೆಯ ಮಹಿಮೆಯನ್ನು ನೋಡಲಾರನು. ದೇವರ ಪ್ರತಿಕಾಂತಿಯಾಗಿರುವ ಯೇಸು ಕ್ರಿಸ್ತನ ಮಹಿಮೆಯುಳ್ಳ ಸುವಾರ್ತೆಯ ಕಾಂತಿ ಅವನಿಗೆ ಹೊಳೆಯುವದಿಲ್ಲಾ; ಈ ಲೋಕದ ಪ್ರಭುವಾಗಿರುವ ಪಿಶಾಚನು ಅವನ ಬುದ್ಧಿಯನ್ನು ಕುರುಡು ಮಾಡಿದ್ದಾನೆ. ಆದದರಿಂದ ಅವನು ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳುವಾಗ ಗ್ರಹಿಸುವದಿಲ್ಲ, ವಿರೋಧ ಮಾಡುತ್ತಾನೆ, ಕುಚೇಷ್ಟೆ ಮಾಡುತ್ತಾನೆ. ದೃಷ್ಟಿ ಮಂದವಾದವರು ವಸ್ತುಗಳ ನಿಜ ಸ್ವರೂಪವನ್ನು ಕಾಣಲಾರರು. ಹಾಗಾದರೆ ಏನು ಮಾಡ ತಕ್ಕದ್ದು? ಹೃದಯದಲ್ಲಿರುವ ಸರ್ವ ಪ್ರಕಾರದ ಕೊಳಕು ಹೊಲಸು ಅಶುದ್ಧವು ಪರಿಹಾರವಾಗುವದು ಹ್ಯಾಗೆ? ತನ್ನ ಹೃದಯವನ್ನು ಒಬ್ಬನು ಶುದ್ಧ ಮಾಡಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಾನಾದರೆ ತನ್ನ ಬಲವು ಸಾಲದೆಂದು ತಿಳಿಯುವನು. ಪಾಪವು ಹೆಚ್ಚು ಬಲವುಳ್ಳದ್ದು. ಆದದರಿಂದ ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ಉಂಟು ಮಾಡು ಎಂದು ದೇವರನ್ನು ಬೇಡಿಕೊಳ್ಳುವದೇ ಅಗತ್ಯವಾಗಿದೆ. ಮನುಷ್ಯನು ಅಶುದ್ಧನಾಗಿ ಪರಿಶುದ್ಧನಾದ ದೇವರ ಮುಂದೆ ಬಂದು ಬೇಡುವದಕ್ಕೆ ಅಧಿಕಾರವಿಲ್ಲದವನಾದರೂ ಯೇಸು ಕ್ರಿಸ್ತನು ಮನುಷ್ಯರ ಪಾಪಪರಿಹಾರಾರ್ಥವಾಗಿ ಹೊಣೆಯಾಗಿ ನಿಂತು ನ್ಯಾಯದ ಪ್ರಕಾರ ಪಾಪದ ದಂಡಣೆಯಾಗಿರುವ ಮರಣವನ್ನು ಅನುಭವಿಸಿದ್ದರಿಂದ ನಾವು ದೇವರ ಮುಂದೆ ಬಂದು ಬೇಡಬಹುದು; ನಾವು ಬೇಡಿದ್ದನ್ನು ದೇವರು ಕೊಡುತ್ತಾನೆ. ದೇವರಿಂದ ಶುದ್ಧ ಹೃದಯವನ್ನು ಬೇಡಿ ದೇವರ ಸಹಾಯದಿಂದ ಶುದ್ಧ ಹೃದಯವನ್ನು ಕಾಪಾಡಿಕೊಳ್ಳುವವನೇ ದೇವರನ್ನು ನೋಡುವನು; ಅಂದರೆ ಈ ದೇಹದಲ್ಲಿರುವ ವರೆಗೆ ಚರ್ಮಗತ ದೃಷ್ಟಿಯಿಂದ ದೇವರನ್ನು ನೋಡಲಾರನು ಖರೆ, ಆದರೆ ಅವನು ದೇವರ ಸಂಪರ್ಕದಲ್ಲಿಯೂ ದಯೆಯಲ್ಲಿಯೂ ನೆಲೆಗೊಂಡು ದೇವರನ್ನು ತಂದೆಯೇ ಎಂದು ಕರೆಯುತ್ತಾನೆ. ಇಲ್ಲಿ ವಿಶ್ವಾಸದೃಷ್ಟಿಯಿಂದ ದೇವರನ್ನು ನೋಡುವವನಾಗಿ ಅಲ್ಲಿ ಮುಖಾಮುಖಿಯಾಗಿ ದೇವರನ್ನು ನೋಡಿ ಹೊಗಳುವ ಪರಮಾನಂದವನ್ನು ಅನುಭವಿಸುವನು.

೬. ಕರುಣೆಯುಳ್ಳವರು ಭಾಗ್ಯವಂತರು, ಅವರು ಕರುಣೆ ಹೊಂದುವರು.—ದೇವರು ನಮ್ಮ ಮೇಲೆ ಎಷ್ಟು ಕರುಣೆಯುಳ್ಳವನಾಗಿದ್ದಾನೆ, ನಮ್ಮನ್ನು ಪೋಷಣೆ ಮಾಡುತ್ತಾ ಬರುವದಲ್ಲದೆ ನಾವು ಪ್ರತಿನಿತ್ಯದಲ್ಲಿ ಮಾಡುವ ನಾನಾ ತರದ ಅಪಕೃತ್ಯಗಳನ್ನು ಮನಸ್ಸಿಗೆ ತಾರದೆ ದಂಡಣೆ ಮಾಡದೆ ಮಾಪು ಮಾಡುತ್ತಾನೆ, ಮಾಪು ಮಾಡಿದ್ದಾನೆ. ನಮಗೆ ಯಾವ ಯಾವ ಕಂಟಕಗಳೂ ಮುತ್ತ ಬಹುದು, ಆದರೆ

ದೇವರು ನಮ್ಮ ಯೋಗ್ಯತೆ ಇಲ್ಲದೆ ಕೇವಲ ಕರುಣೆಯಿಂದ ಅಪಾಯಗಳನ್ನು ನಿವಾರಿಸಿ ಪಾರಗಾಣಿಸುತ್ತಾನೆ, ರಕ್ಷಣೆ ಮಾಡುತ್ತಾನೆ. ಇದನ್ನು ಚನ್ನಾಗಿ ಮನಸ್ಸಿಗೆ ತಂದು ದೇವರು ನಮಗೆ ಕರುಣೆ ತೋರಿಸಿದಂತೆ ನಾವೂ ನಮ್ಮಂಥಾ ಮನುಷ್ಯರನ್ನು ಕರುಣೆ ಮಾಡ ಬೇಕು. ಅವರನ್ನು ಆಪತ್ಕಾಲದಲ್ಲಿ ಆರೈಕೆ ಮಾಡ ಬೇಕು, ಬಡವರಿಗೆ ದಾನಧರ್ಮ ಮಾಡ ಬೇಕು, ರೋಗಿಗಳಿಗೆ ಔಷಧೋಪಚಾರ ಮಾಡ ಬೇಕು. ನಮಗೆ ಅಹಿತವಾದದ್ದು ಯಾವನಾದರೂ ಮಾಡಿದರೆ ಸೈರಿಸಿ ಅವನಿಗೆ ಒಳ್ಳೇದು ಮಾಡ ಬೇಕು; ನಮಗೆ ಒಬ್ಬರು ಮಾಡಿದ ಶತಾಪರಾಧಗಳನ್ನಾದರೂ ಮಾಪು ಮಾಡ ಬೇಕು; ಆವಾಗ್ಯೆ ದೇವರು ನಮಗೆ ಇನ್ನೂ ಹೆಚ್ಚಾಗಿ ಕರುಣೆ ಮಾಡುವನು. ನಾವು ಕರುಣೆ ಇಲ್ಲದವರಾದರೆ ದೇವರ ಕರುಣೆಯನ್ನು ಕಳಕೊಳ್ಳುವೆವು.

೭. **ಸಮಾಧಾನ ಮಾಡುವವರು ಭಾಗ್ಯವಂತರು, ಅವರು ದೇವರ ಮಕ್ಕಳೆಂದು ಕರೆಸಿಕೊಳ್ಳುವರು.**— ಪಾಪಮಯವಾದ ಈ ಲೋಕದಲ್ಲಿ ಸಮಾಧಾನವು ಬಹಳ ತುಟ್ಟಿಯಾಗಿದೆ; ಸಾಮಾನ್ಯಜನರಲ್ಲಿಯೂ ಶ್ರೀಮಂತರಲ್ಲಿಯೂ ಅರಸುಗಳಲ್ಲಿಯೂ ಒಂದಾನೊಂದು ಕಾರಣದಿಂದ ಜಗಳಗಳೂ ಬಂಡಣಗಳೂ ಯುದ್ಧಗಳೂ ಉಂಟಾಗುತ್ತವೆ. ಭಕ್ತರು ಇಂಥಾದ್ದು ನೋಡಿ ಸುಮ್ಮನಿರ ಬಾರದು. ಸಮಾಧಾನ ಮಾಡುವದಕ್ಕೆ ನೋಡ ಬೇಕು. ದೇವರು ಸಮಾಧಾನದ ಪ್ರಭುವು; ಯೇಸು ಕ್ರಿಸ್ತ ಸ್ವಾಮಿಯವರು ಲೋಕದೊಳಗೂ ಮನುಷ್ಯರ ಹೃದಯದೊಳಗೂ ಸಮಾಧಾನವನ್ನು ಕೊಡುವದಕ್ಕಾಗಿ ಅವತರಿಸಿದವರು. ಅವರಿಂದ ಪಾಪಗಳ ಪರಿಹಾರವನ್ನು ಪಡೆದು ಶುದ್ಧ ಹೃದಯವನ್ನು ದೇವರ ಕೃಪೆಯಿಂದ ಕಾಪಾಡಿಕೊಳ್ಳುವವನಲ್ಲಿ ನಿಜವಾದ ಸಮಾಧಾನವದೆ. ಅವನು ತನ್ನೊಳಗೆ ಸಮಾಧಾನ ಉಂಟಾದವನಾಗಿ ಪರರಲ್ಲಿಯೂ ಸಮಾಧಾನವನ್ನು ಕಾಪಾಡುವನು; ತಾನು ಒಬ್ಬರ ಸಂಗಡ ವಾಗ್ವಾದಕ್ಕೆ ಹೋಗದೆ ಸಮಾಧಾನದಿಂದ ನ್ಯಾಯವನ್ನು ಮಾಡಿಸಿಕೊಂಡು ಇತರರೂ ತನ್ನಂತೆ ಮಾಡುವಂತೆ ಪ್ರಯತ್ನ ಮಾಡುವನು. ಇದೇ ದೇವರ ಮಕ್ಕಳ ಗುಣ; ಈ ಗುಣಗಳುಳ್ಳವನೇ ದೇವರ ಮಗನು. ಇದಕ್ಕೂ ಮಿಗಿಲಾದ ಭಾಗ್ಯವು ಯಾವದು?

೮. **ನೀತಿಗಾಗಿ ಹಿಂಸೆ ಪಡುವವರು ಭಾಗ್ಯವಂತರು, ಪರಲೋಕರಾಜ್ಯವು ಅವರದಾಗಿದೆ.**— ದೇವರ ಮಕ್ಕಳಾಗಿ ಒಳ್ಳೇ ನಡತೆಯಲ್ಲಿರುವವರಿಗೆ ಈ ಲೋಕದಲ್ಲಿ ಕೆಟ್ಟ ಮನುಷ್ಯರಿಂದ ನಾನಾ ಉಪದ್ರಗಳು ಬರುತ್ತವೆ. ಕೆಟ್ಟವರು ಒಳ್ಳೆಯವರನ್ನು ಹಗೆ ಮಾಡುವದು ಸಹಜವಷ್ಟೇ. ಅದಲ್ಲದೆ ಒಬ್ಬನು ಕತ್ತಲೆಯ ರಾಜ್ಯವನ್ನು ಬಿಟ್ಟು ಬೆಳಕಿನ ರಾಜ್ಯಕ್ಕೆ ಬರುವದಕ್ಕೆ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಆತನ ಶಿಷ್ಯನಾಗುವದಕ್ಕೆ ಮನಸ್ಸು ಮಾಡಿದರೆ ಬಂಧುಬಾಂಧವರೂ ಜಾತಿಯವರೂ ನೆರೆಹೊರೆಯವರೂ ಅವನನ್ನು ದೂರ ಮಾಡಿ ನಾನಾ ಉಪಟಳ ಕೊಡುವರು. ಅನೇಕರು ಇದಕ್ಕೆ ಅಂಜಿ ಸತ್ಯವನ್ನು ಮನವರಿತಾಗ್ಯೂ ಪ್ರಕಟವಾಗಿ ಸ್ವೀಕರಿಸದೆ ಹೋಗುವರು. ಯಾವ ಪ್ರಕಾರದಲ್ಲಿ ಹಿಂಸೆ ಬಂದರೂ ದೇವರ ಮೇಲೆ ದೃಷ್ಟಿ ಇಟ್ಟು ಸಮಾಧಾನವನ್ನು ಕಳಕೊಳ್ಳದೆ ಸ್ಥೈರ್ಯವನ್ನು ಬಿಡದೆ ಸೈರಿಸುವವನೇ ದೇವರ ರಾಜ್ಯದ ಬಾಧ್ಯಸ್ಥನು. ದೇವರ ಹೆಸರಿನಲ್ಲಿ ಅವನು ಭಂಗಬವಣೆಯಲ್ಲಿ ಬಿದ್ದು ಮಿತ್ರರನ್ನು ಬಂಧುಬಾಂಧವರನ್ನು ಆಗಲಿ ಒಂದು ವೇಳೆಯಲ್ಲಿ ಸರ್ವಸ್ವವನ್ನು ಕಳಕೊಂಡಾಗ್ಯೂ

ಅವನು ದೇವರ ಮತ್ತು ತನ್ನ ರಕ್ಷಕನಾದ ಯೇಸು ಕ್ರಿಸ್ತನ ಸ್ನೇಹವನ್ನು ಘಳಿಸಿಕೊಂಡದ್ದರಿಂದ ಲೌಕಿಕ ಭಾಗ್ಯವನ್ನೆಲ್ಲಾ ತೃಣೀಕರಿಸಿ ಪರಲೋಕದಲ್ಲಿ ದ್ರವ್ಯವುಳ್ಳವನಾಗಿ ಸಂತೋಷವಾಗಿರುತ್ತಾನೆ. ಲೋಕದವರು ಮಾಡುವ ಉಪದ್ರವದಿಂದ ದೇವರ ಭಕ್ತರು ಮನಗುಂದದೆ ಹೆಚ್ಚೆಚ್ಚಾಗಿ ದೇವರ ಸಮೀಪಕ್ಕೆ ಬಂದು ಧೈರ್ಯ ತಕ್ಕೊಳ್ಳುತ್ತಾರೆ.

ನಾವು ಈ ವರೆಗೆ ಪ್ರಸ್ತಾಪಿಸುತ್ತಾ ಬಂದ ಭಾಗ್ಯವೇ ನಿಜವಾದ ಭಾಗ್ಯವು. ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳಿ ಮನನ ಮಾಡಿ ನಂಬಿ ಪ್ರತಿ ಒಬ್ಬನು ಈ ಭಾಗ್ಯವನ್ನು ಪಡೆಯ ಬಹುದು. ಈ ದೇಶದ ಒಬ್ಬ ಸನ್ಯಾಸಿ ಕೌಪೀನವಂತಃ ಖಲು ಭಾಗ್ಯವಂತಃ ಎಂದು ಹೇಳಿದನು. ಹಾಗಂದರೆ ಸರ್ವಸ್ವವನ್ನು ತೊರೆದು ಭಿಕ್ಷಾಟನೆಯಿಂದ ಜೀವನ ಮಾಡುವ ಕೌಪೀನ ಮಾತ್ರವೇ ಉಳ್ಳ ಪರಿವ್ರಾಜಕನೇ ಭಾಗ್ಯವಂತನು. ನಾವು ಯಥಾರ್ಥವಾಗಿ ಆಲೋಚಿಸಿದರೆ ಅವನು ಭಾಗ್ಯವಂತನಲ್ಲಾ. ಭಾಗ್ಯವು ಶಿಕ್ಕದ ಠಾವಿನಲ್ಲಿ ಅರಸುತ್ತಾನೆ; ಅದು ಅವನಿಗೆ ಶಿಕ್ಕದು. ಸರ್ವಪ್ರಕಾರದ ಭಾಗ್ಯಕ್ಕೆ ಮೂಲವಾಗಿರುವ ದಯಾಳು ದೇವರು ನಮ್ಮನ್ನು ಭಾಗ್ಯವಂತರನ್ನಾಗ ಮಾಡ ಬೇಕೆಂದು ಚಿತ್ತಯಿಸಿ ಕುಮಾರನಾಗಿರುವ ಯೇಸು ಕ್ರಿಸ್ತಸ್ವಾಮಿಯವರನ್ನು ಈ ಲೋಕಕ್ಕೆ ಕಳುಹಿಸಿದ್ದಾರೆ. ಅವರು ಮಾಡಿದ ಮೊದಲನೇ ಉಪದೇಶದಿಂದ ಮೇಲೆ ವಿವರಿಸಿದ ಭಾಗ್ಯದ ಲಕ್ಷಣಗಳನ್ನು ಎತ್ತಿ ಪ್ರಸ್ತಾಪಿಸಿದೆವು. ವಾಚಕನೇ, ಆ ಲೋಕಕ್ಕೆ ಸಲ್ಲುವ ಭಾಗ್ಯವನ್ನು ಘಳಿಸಬೇಕೆಂದು ಮನಸ್ಸು ಮಾಡುತ್ತಿಯಾ? ಯೇಸು ಕ್ರಿಸ್ತಸ್ವಾಮಿಯವರು ಮಾಡಿದ ಉಪದೇಶವನ್ನು ಮನಃಪೂರ್ವಕವಾಗಿ ಕೇಳಿ ಅವರಲ್ಲಿ ವಿಶ್ವಾಸವಿಡು. ನೀನು ಇಲ್ಲಿ ಬಡವನಾಗಿದ್ದರೂ ಅವರ ಕೇವಲ ದಯೆಯಿಂದ ಆ ಲೋಕದಲ್ಲಿ ಭಕ್ತ ಸಮುದಾಯದೊಡನೆ ಭಾಗ್ಯಸಂಪನ್ನನಾಗಿರುವಿ. ತಥಾಸ್ತು.

ಹಿಂದುಸ್ಥಾನದ ಜನಸಂಖ್ಯೆ.

ಸರಕಾರದವರು ಮಾಡಿಸಿದ ಖಾನೇಶುಮಾರಿ ಲೆಖ್ಖದ ಪ್ರಕಾರ ಹಿಂದುಸ್ಥಾನದಲ್ಲಿ ೨೮,೮೦,೦೦,೦೦೦ ಜನರಿದ್ದಾರೆಂದು ತಿಳಿದು ಬರುತ್ತದೆ. ಈ ಒಟ್ಟನಲ್ಲಿ ೨೨,೧೦,೦೦,೦೦೦ ಬ್ರಿಟಿಶ್ ಇಂಡಿಯ ಅಂದರೆ ಇಂಗ್ಲಿಷ ಸರಕಾರಕ್ಕೆ ಅಧೀನವಾದ ಪ್ರದೇಶಕ್ಕೂ ೬,೭೦,೦೦,೦೦೦ ದೇಶೀಯ ರಾಜರ ಸಂಸ್ಥಾನಗಳಿಗೂ ಶೇರುತ್ತಾರೆ. ಆಯಾ ಮತಗಳ ಪ್ರಕಾರ ವಿಭಾಗಿಸಿದರೆ, ಹಿಂದುಗಳು ೨೦,೭೬,೫೪೪,೪೦೭, ಮುಸಲ್ಮಾನರು ೫,೭೩,೬೫೫,೨೦೪, ಕ್ರಿಸ್ತೀಯರು ೨೨,೪೪೪,೯೯೧, ಜೈನರು ೧೪೪,೧೬,೧೦೯, ಸಿಕ್ಕರು ೧೯,೦೭,೪೬೬, ಬೌದ್ಧರು ೭೧,೦೧,೦೫೭, ಪಾರಸಿಗಳು ೮೯,೪೪೭, ಯೆಹೂದರು ೧೭,೧೪೦, ಪಶುಪೂಜಕರು ೧೫,೦೨,೦೪೫, ನಾಸ್ತಿಕರು ೨೪೯, ಬ್ರಹ್ಮಸಮಾಜಿಗಳು ೫,೪೦೧, ಆರ್ಯಸಮಾಜಿಗಳು ೫೯,೪೪೮. ಈ ಲೆಖ್ಖ ನೋಡಿದರೆ ೧೪೪೧-೧೪೯೧ನೆ ವರೆಗೆ ಹತ್ತು ವರ್ಷಗಳಲ್ಲಿ ೨,೪೦,೦೦,೦೦೦ ವರ್ಧನೆಯಾಯಿತೆಂದು ತಿಳಿದು ಬರುತ್ತದೆ.

ಠ ಸೇ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ: ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಜಾಯಿಸ ತಕ್ಕ ಪತ್ರ, ಇದರಲ್ಲಿ ಚೆಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂ ಪಾಯಿಗೆ ಮಿಂಬಿದರೆ . . . . . ೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಂಬರದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ನಮೂದಿಸಿದ ರೂಪಾಯಿ ೩೦೦ಕ್ಕೆ ಮಿಂಬರದಿದ್ದರೆ	೦ ೩	೦ ೧	೦ ೧
ರೂಪಾಯಿ ೩೦೦ಕ್ಕೆ ಮಿಂಬಿ ೪೦೦ „	೦ ೪	೦ ೩	೦ ೩
„ ೪೦೦ „ ೬೦೦ „	೦ ೬	೦ ೪	೦ ೩
„ ೬೦೦ „ ೧೦೦೦ „	೦ ೧೦	೦ ೫	೦ ೪
„ ೧೦೦೦ „ ೧೩೦೦ „	೦ ೧೩	೦ ೬	೦ ೪
„ ೧೩೦೦ „ ೧೬೦೦ „	೧ ೦	೦ ೮	೦ ೬
„ ೧೬೦೦ „ ೩೫೦೦ „	೧ ೮	೦ ೧೩	೦ ೮
೩೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೩೫೦೦ಕ್ಕೆ ಯಾ ಅದರ ಅಂಶಕ್ಕೆ.	೧ ೮	೦ ೧೩	೦ ೮
೧೦೦೦೦ ರೂಪಾಯಿ ಮೇಲೆ ೫೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೩೦೦೦ಕ್ಕೆ ಯಾ ಅದರ ಅಂಶಕ್ಕೆ. . . ೫	೦	೧ ೮	೧ ೦
೫೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ ೬	೦	೩ ೦	೨ ೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ತಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಮಿಂಬರದಿದ್ದರೆ ೨ ಆಣೆ
೧೦ ರೂಪಾಯಿಗೆ ಮಿಂಬಿ ೫೦ ರೂಪಾಯಿಗೆ ಮಿಂಬರದಿದ್ದರೆ. . ೪ ಆಣೆ
೫೦ „ „ ೧೦೦ „ „ . . ೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ ೮ ಆಣೆ
೧೦೦೦„ „ ಪ್ರತಿ „೫೦ಕ್ಕೆ ಯಾ ಅದರ ಅಂಶಕ್ಕೆ . . ೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಮಿಂಬರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ
b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತ ಪಟ್ಟು—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. 36. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ . . . . . ೯ ಆಣೆ

" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ತೀವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೇ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . ೫ ರೂಪಾಯಿ

35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—ಅಂಥಾ ಸೊತ್ತಿನ ಹೆಚ್ಚಾದ ಕಿಮ್ಮತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಸಾಧನಕ್ಕೆ ಹೇಳಿರುವಷ್ಟೆ ಠಸೆ

37. ಪಾಲುಪಟ್ಟೆ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೇ ಠಸೆ.

39. ಸೇನೆಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರುಷಕ್ಕೆ ಮೀರಿ, ೩ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇಂಥಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು) ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ಸಮೂಹಿಸಿದ ಸೊತ್ತನ್ನು ಯಾ ಅದರ ಅಂಶವನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ. . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಏಾರಿದ ಯಾವ ಸರಕನ್ನಾಗಲಿ ಜೀನಸನ್ನಾಗಲೀ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು). . . . . ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮಾರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . . × ರೂಪಾಯಿ

d) ಸಮುಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮಾರಿ ೧೦ಕ್ಕೆ ಮಾರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಪೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಮಾರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಮಾರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖಿಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು):—

a) ಬಾಧ್ಯತೆಯ ಪೊಬಲಗು ೧೦೦೦ ರೂಪಾಯಿಗೆ ಮಾರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

57. (Settlement) ಸೆಟ್ಲಿಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ಮೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ × ರೂಪಾಯಿಗೆ ಮಾರದಿದ್ದರೆ—ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

60. (Transfer) ಟ್ರಿನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ಸಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ—21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾತಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶೂರೆನ್ಸ (ಬೀಮ ಉತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶೂರೆನ್ಸ ಹಾಸಲು × ರೂಪಾಯಿಗೆ ಮಾರದಿದ್ದರೆ ಅದರಷ್ಟೆ ಹಾಸಲು

ಇತರ ಸಂಗತಿಯಲ್ಲಿ— × ರೂಪಾಯಿ

ತಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. *a*) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕನ್ನು ಮಾರಾಟದ ಸಮ್ಮಂಧವಾಗಿರುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೩. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—*b*) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ, ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಒಟ್ಟಾರೆ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; *c*) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರತೀದಿ:—*a*) ಕ್ರಮವಾಗಿ ತಸೇ ಮೇಲೆ ಆದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಶನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರತೀದಿ; *b*) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದಕ್ಕೆ ರತೀದಿ; *h*) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ತೀವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಖಾತರೀ ಬಗ್ಗೆ ಕೊಡುವ ರತೀದಿ. ವರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸ್ಸೆಗೆ, ಅಥವಾ ಹಿಸ್ಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ತೀವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರತೀದಿಗೆ ಸಮ್ಮಂಧಿಸುವದಿಲ್ಲ.

೧೬. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡುವ ಬಗ್ಗೆ ರಿಜಿಸ್ತ್ರಾರರಿಗೆ ತೆರ ತಕ್ಕ ಫೀಸಿನ ದರ.

									ರೂ.	ಆ.
ದಸ್ತೈವಜನ	ಮೌಲ್ಯ	೨೫	ರೂಪಾಯಿಗೆ	ಮೀರದಿದ್ದರೆ	.	.	.	.	೦	೮
"	"	೨೫	"	ಮೀರಿ	೫೦	ರೂಪಾಯಿಗೆ	ಮೀರದಿದ್ದರೆ		೦	೧೨
"	"	೫೦	"	"	೧೦೦	"	"		೧	೦
"	"	೧೦೦	"	"	೩೦೦	"	"		೧	೮
"	"	೩೦೦	"	"	೬೦೦	"	"		೨	೦
"	"	೬೦೦	"	"	೧೦೦೦	"	"		೩	೦
"	"	೧೦೦೦	"	"	೫೦೦೦೦	ರೂಪಾಯಿ	ವರೆಗೆ	ಪ್ರತಿ ಹೆಚ್ಚಿಗೆ ೧೦೦೦ ರೂಪಾಯಿಗೆ ಯಾ ಅದರ ಅಂತಕ್ಕೆ	೧	೦
"	"	೫೦೦೦೦	ರೂಪಾಯಿ	ಮೇಲೆ	ಪ್ರತಿ ೧೦೦	ರೂಪಾಯಿಗೆ	ಯಾ	ಅದರ ಅಂತಕ್ಕೆ	೦	೮

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಅದೆನ್ ಬರ್ಮ ಮುಂತಾದ ಅದರ ನೆರೆತೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳು ಜೀನಸು, ಇಂಥಾದ್ದನ್ನು ಟಪ್ಪಾಲಿನ ಮೇಲೆ ರವಾನಿಸ ಬಾರದು; ವರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಂದೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಬಂಡು ತರದ ಬರಹ, ಛಾಪೆ, ಚಿತ್ರ, ನಕ್ಷೆ, ಇಂಥಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಖೋಟಿ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ; ಒಂದು ವೇಳೆ ಅವನು ಅದನ್ನು ತೆರಬಾಗ್ಯೆ' ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಆಫೀಸಿನ ಪೋಸ್ಟ್‌ಮಾಸ್ತರಿಗೆ ಕಂಡರೆ, ಆ ಆಫೀಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಟಪ್ಪಾಲಿಗೆ ಹಾಕಿದ ಯಾವ ಲಿಫಾವೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರತೀದಿ ತಿಳ್ಕುವದಿಲ್ಲ ವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಫಿಕೇಟನ್ನು ಪಡಕೊಳ್ಳ ಬಹುದು. ಹ್ಯಾಗಂದರೆ, ಅದರ ಮೇಲುವಿಳಾಸದ ಯಥಾಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಅವೆರಡನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಿದಲ್ಲಿ, ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆ

ಯನ್ನು ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್‌ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚಿದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು. ಈ ಮೇರೆಗೆ ಚೀಟು ಹಚ್ಚಿದೆ ರವಾನಿಸುವಂಥಾದ್ದರ ಮೇಲೆ "ಬೇರಿಂಗ್" (Bearing) ಎಂದು ಬರಿಯ ಬೇಕು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂದಿಲ್ಲ.

ಒಂದು ಟಪ್ಪಾಲ ಕಾರ್ಡು, ಲಿಫಾಪೆ, ಇಲ್ಲವೆ ಪೆಕೆಟು ಎಂಬ ಯಿಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲವ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಸ್ತ್ರಿ ಮಾಡಿಸ ಬಹುದು. ಪ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು, ವಿಳಾಸ ಸಹ ಬರೆದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಆಗುವ ಮುಂಚೆ ಟಪ್ಪಾಲುಕಛೇರಿಯಲ್ಲಿ ಒಪ್ಪಿಸ ಬೇಕು; ಆವರು ಅದನ್ನು ರಿಜಸ್ತ್ರಿ ಮಾಡಿ, ಭಾಪಾ ರಶೀದಿ ಕೊಡುವರು. ಮತ್ತು ಸದರಿ ಲಿಫಾಪೆ ಯಾ ಕಾರ್ಡು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಪೆಕೆಟು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡಿದ್ದಲ್ಲಿ ಆ ಪ್ರಕಾರ ತರಿಸಿ ಕೊಡೋಣವಾಗುವದು.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದ ಪೆಕೆಟುಗಳೂ ಈ ಟಪ್ಪಾಲಿನ ದ್ವಾರಾ ಹೋಗುವವು.

ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	ಅ. ೦ ಪೈ. ೬
" ೧ " " ೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂತಕ್ಕೆ	೧ ೦
ಟಪ್ಪಾಲ ಕಾರ್ಡು ಒಂದಕ್ಕೆ	೦ ೩
ಉತ್ತರ ಸಿಗತಕ್ಕ ಜೋಡು ಕಾರ್ಡಿಗೆ	೦ ೬

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು. ಅದರ ಹಿಂಬದಿಯಲ್ಲಿ ಬರಿಯುವದಾಗಲಿ ಭಾಪಿಸುವದಾಗಲಿ ಮಾತ್ರ ವಲ್ಲದೆ ರಶೀದಿ ಮುಂತಾದ ಚೀಟು ಸಹ ಹಚ್ಚಿ ಬಹುದು. ಜೋಡು ಕಾರ್ಡನ್ನು ಬೇರೆಬೇರೆಯಾಗಿಯೂ ಪ್ರಯೋಗಿಸ ಬಹುದು.

೩ ಪೈ ಕಾರ್ಡು, ೬ ಪೈ ಜೋಡು ಕಾರ್ಡು, ½, ¼, ೧, ೧½, ೨, ೨½, ೩, ೪, ೫, ೧೦ ಆಣೇ, ೧ ರೂಪಾಯಿ ಚೀಟುಗಳೂ, ½, ¼, ೧, ೨ ಆಣೆ, ಇಲ್ಲವೆ ½ ಆಣೆಯ ಚೀಟುಳ್ಳ ಲಖೋಟೆಗಳೂ ಮಾರಾಟಕ್ಕೆ ಸಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಯೆ, ಬೇರೆ ಬೇರೆಯವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಬರೆದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಶಿಕ್ಷೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ (Book-Packet and Pattern-Packet) "ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್" ಎಂಬ, ಮತ್ತು (Parcel) "ಪಾರ್ಸೆಲ್" ಎಂಬ ಎರಡು ವಿಧದ ಕಟ್ಟುಗಳು ಈ ಟಪ್ಪಾಲ ದ್ವಾರಾ ರವಾನಿಸಲಾಗುತ್ತದೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್

	ಅ.	ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂತಕ್ಕೆ	೦	೬

ಒಂದು ಪೆಕೆಟು ೨ ಫೂಟ್ ಉದ್ದ ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮೀರ ಬಾರದು. ಬುಕ್‌ಪೆಕೆಟನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್‌ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್

	ಅ.	ಪೈ.
ಭಾರದಲ್ಲಿ ೨೦ ತೊಲೆಗೆ ಮೀರದಿದ್ದರೆ	೪	೦
" ೪೦ " "	೮	೦
ಹೆಚ್ಚಿಗೆ ಪ್ರತಿ ೪೦ " ಯಾ ಅದರಂತಕ್ಕೆ	೪	೦

ಇದರ ಟಪ್ಪಾಲಹಾಸಲು ರೊಕ್ಕವಾಗಿ ತೆರ ಬೇಕು. ಪಾರ್ಸೆಲು ಭಾರದಲ್ಲಿ ೩೫ ಶೇರು (೨೦೦೦ ತೊಲೆ) ಗಳಿಗೆ ಮೀರ ಬಾರದು; ಮತ್ತು ಅದರ ಗಾತ್ರ ಆಕಾರ, ಕಟ್ಟಿದ ರೀತಿ, ಇವುಗಳ ದೆಶೆಯಿಂದ ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ (ಇಂಥಾದ್ದಕ್ಕೆ ಸಮ್ಮಂಧವಾದ ಕೈಬರಹವಿದ್ದರೆ, ಅದರ ಸಮೇತ), ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ, ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು, ಇಲ್ಲವೆ ಇತರ ಬರಹ, ಭರಾವಣಿಚೀಟು, ಸಾಮಾನಪಟ್ಟಿ, ಲೆಖ್ಖದ ಪಟ್ಟಿ ಎಂಬೀ ತರದ ಕಾಗದಗಳು; ಯಾವದೊಂದು ವರ್ತಮಾನ ಪತ್ರದಲ್ಲಿ (ಇಲ್ಲವೆ ಪುಸ್ತಕವಾಗಿ) ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ರವಾನಿಸಲ್ಪಡುವ ಕೈಬರಹದ ಕಾಗದಗಳು— ಇಂಥಾದ್ದೆಲ್ಲ "ಬುಕ್‌ಪೆಕೆಟಿಗೆ" ಸೇರುತ್ತವೆ. ಅದಲ್ಲದೆ ಮನಃಪೂರ್ವಕವಾಗಿ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, ಅಂಥಾದ್ದು "ಪೆಟರ್ನ್‌ಪೆಕೆಟಿಗೆ" ಸೇರುತ್ತದೆ. (2) ಪೆಕೆಟು ಉಭಯ ಕಡೆಗಳಲ್ಲಿಯೂ ಖುಲ್ಲಾ ಬಿಟ್ಟು, ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ, ಕಟ್ಟ ತರ ಬೇಕು. (3) ಈ ಉಭಯ ತರದ ಪೆಕೆಟುಗಳಿಗೂ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ, ಆ ಪೆಕೆಟು ಹೊಂದುವವನು ಆ ದಸ್ತೂರಿಯ ದುದಾರೆ, ಇಲ್ಲವೆ ಹಚ್ಚದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುದಾರೆ ಹಾಸಲು ರೊಕ್ಕವಾಗಿ ತೆರ ಬೇಕು. (4) ಪೆಕೆಟು ಟಪ್ಪಾಲಿಗೆ ಹಾಕದ್ದಕ್ಕೆ ರತೀದಿ ಸಿಗುವದಿಲ್ಲ; ಆದರೆ ಅದನ್ನು ರಿಜಸ್ತ್ರಿ ಮಾಡಿಸಿದ್ದಾದರೆ, ರತೀದಿ ಕೊಡೋಣಾಗುತ್ತದೆ.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲ ಚೀಟಲ್ಲದೆ, ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಪ್ರಕಾರ ಮುಂಗಡವಾಗಿ ತೆರುವ ಹಾಸಲಿನ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪತ್ರಿಕೆಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿ ಇರುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲಿಗೆ	೧೦ ತೊಲಿಗೆ ಏರಾದಿದ್ದರೆ	ಪ್ರತಿ ಹೆಚ್ಚಿಗೆ ೧೦ ತೊಲಿಗೆ ಯಾ ಅದರ ಅಂಶಕ್ಕೆ
೩ ಪೈ	೪ ಪೈ	೪ ಪೈ

"ಪಾರ್ಸೆಲು":—(1) ಇದನ್ನು ಪೂರಾ ಬಂದು ಮಾಡಿ ಕಟ್ಟ ತರ ಬೇಕು. (2) (ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (3) ಆದರೆ, ಇದರಲ್ಲಿ ಒಂದಕ್ಕಿಂತ ಹೆಚ್ಚಿಗೆ ಲೇಖನಪತ್ರದ ಸ್ವಭಾವದ್ದೇನಾದರೂ ಹಾಕ ಬಾರದು. (4) ಇದನ್ನು ಪ್ರತ್ಯೇಕ ರಿಜಸ್ತ್ರಿ ಮಾಡುವದು ಅವಶ್ಯ ವಿಲ್ಲ; ಯಾಕಂದರೆ ಇದನ್ನು ಟಪ್ಪಾಲಿಗೆ ಹಾಕದ್ದಕ್ಕೆ ರತೀದಿ ಸಿಗುತ್ತದೆ†; ಮತ್ತು ಅದು ತಲ್ಪಿದ್ದಕ್ಕೆ ಪಾರ್ಸೆಲು ಹೊಂದಿದವನಿಂದ ರತೀದಿ ಸಹ ಪಡಕೊಳ್ಳೋಣಾಗುತ್ತದೆ. (5) ಇದಕ್ಕೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕಷ್ಟೆ; ಆದರೆ ದಸ್ತೂರಿ ಮುಂದಾಗಿ ಸಲ್ಲಿಸಿದರೂ, ನಿರಖಿಗೆ ಕಡಿಮೆಯಾದರೆ, ಅದನ್ನು ಮುಂಜೂರು ಮಾಡೋಣಾಗಲಿಕ್ಕಿಲ್ಲ.—ಅದಲ್ಲದೆ ಪಾರ್ಸೆಲು ಹೊಂದಿದವನಿಂದ ರತೀದಿ ತರಿಸಿಕೊಡಿಸ ಬೇಕಾದರೆ, ೧ಆಣೆ ದಸ್ತೂರಿ ಕೊಡ ಬೇಕು.

(Value Payable Article) "ವೇಲ್ಯು ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವಶಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್ ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದಾಪ ಪಡಿಸಿರುವ ಮೌಲ್ಯವನ್ನು ಆ ಲಿಫಾಪೆ ಯಾ ಕಟ್ಟು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪಾರ್ಸೆಲುಗಳಾಗಲೀ ಪೆಕೆಟುಗಳಾಗಲೀ ಲಖೋಟಿಗಳಾಗಲೀ ಮನಿ ಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿಮೆಯಾಗಲೀ, ಸಾವಿರ ರೂಪಾಯಿಗೆ ಏರಿ ಆಗಲೀ ಇರ ಬಾರದು; ಮತ್ತು ಅದರಲ್ಲಿ ಆಣೆಯ ಅಂತವಿರ ಬಾರದು. ಹೀಗೆ ರವಾನಿಸುವವನು ಟಪ್ಪಾಲ ಆಫಿಸಿನ ಮಾಫಿಯಾಗಿ ತಿಳ್ಕುವ ಒಂದು ಛಾಪಾಕಾಗದದ ಮೇಲೆ ಅದರ ಮೌಲ್ಯವನ್ನು ಕುರಿತು ಬರದು ಅದರ ಸಂಗಡ ಕೊಡ ಬೇಕು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ರಿಜಸ್ತ್ರಿ ಲಿಫಾಪೆ ಅದರ ಠಿಕಾಣಿಗೆ ಬಂದು ಮುಟ್ಟುತ್ತಲೇ ಅದು ಹೊಂದ ತಕ್ಕವನಿಗೆ ಅದನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಅತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ರವಾನಿಸಿ, ಅದನ್ನು ಪಡಕೊಳ್ಳ ಬಹುದು.

---

* ಅಂದರೆ ೬೧ ದಿವಸಗಳಿಗೆ ಏರಾದ ಕಾಲಾವಧಿಯಾಗಿ ಪ್ರಕಟವಾಗುವ ವರ್ತಮಾನಪತ್ರಗಳು.

† ಅಂದರೆ ಪಾರ್ಸೆಲು ಟಪ್ಪಾಲಿಗೆ ಹಾಕುವಾಗ ಅದರ ಸಂಗಡ ಛಾಪಾರಶೀದಿಯನ್ನು ಭರಾಯಿಸಿ ಕೊಡ ಬೇಕು. ಇದಕ್ಕೆ ದಸ್ಕತು ಹಾಕಿ ವಾಪಸು ಕೊಡೋಣಾಗುತ್ತದೆ. ಇಂಥಾ ರತೀದಿ ಫಾರ್ಮುಗಳಾಗಲೀ ಬುಕ್ಕುಗಳಾಗಲೀ ಟಪ್ಪಾಲಕಟ್ಟೆಯಲ್ಲಿ ದೊರೆಯುತ್ತವೆ.

ಅದರೆ ರಿಜಿಸ್ತ್ರಿ ಆಗದಿರುವ ಪೆಕೆಟನ್ನು ಟಪ್ಪಾಲ ಪೇದೆಯು ಅದರ ವಿಳಾಸವಿರುವವನಿಗೆ ಮುಟ್ಟಿಸಿ, ಅದರ ನಿರಖು ಮೌಲ್ಯವನ್ನು ಅವನಿಂದ ಈಸಿಕೊಳ್ಳುವನು. ಇದನ್ನೂ ಇನ್ಶೂರ್ ಮಾಡಲು ಬಹುದು.

(Insurance) "ಇನ್ಶೂರೆನ್ಸ್". ರಿಜಿಸ್ತ್ರಿ ಆಗುವ ಲಿಫಾಪೆಗಳಾಗಲಿ ಪಾರ್ಸೆಲುಗಳಾಗಲಿ ವೆಲ್ಯುಪೇಯ ಬ್ಲ್ ಕಟ್ಟುಗಳಾಗಲಿ ಭದ್ರತೆಯಿಂದ ತಲ್ಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಯನ್ನು ವಹಿಸಿ ಕೊಳ್ಳುತ್ತಾರೆ. ಇವುಗಳ ಮೌಲ್ಯವನ್ನು ಕುರಿತು ಮಿತವಿರುವದಿಲ್ಲ. ಈ ಪ್ರಕಾರ ರವಾನಿಸುವ ಲಖೋಟೆಯು ಘಟ್ಟಿ ತರದ ಶಾಗದದ್ದಾಗಿದ್ದು, ಭದ್ರವಾಗಿ ಬಂದು ಮಾಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಹಾಕಿ ತರ ಬೇಕು; ಅದೇ ಪ್ರಕಾರ ಕಟ್ಟು ಸಹ ಅದರ ಹೊಲಿಗೆಯಲ್ಲಿ ಮೂರು ಮೂರು ಇಂಚು ಗಳಿಗೆ ಮೊಹರು ಹಾಕಿದ್ದಾಗಿರ ಬೇಕು. ಮತ್ತು ಅದರ ಮೇಲ್ಗಡೆಯಲ್ಲಿ ಮೇಲ್ ವಿಳಾಸವನ್ನೂ, ಅಕ್ಷರದಿಂ ದಲೂ ಅಂಕೆಯಿಂದಲೂ ಅದರ ವಾಜಬಿ ಮೌಲ್ಯವನ್ನೂ ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಶೂರೆನ್ಸ್ ಮಾಡ ತಕ್ಕ ಲಖೋಟೆಯಾಗಲೀ ಪಾರ್ಸೆಲಾಗಲೀ ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮಲಫೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲಕಟ್ಟೆಯಿಂದ ಮಾಫಿಯಾಗಿ ತಿಕ್ಕುವ ಭಾಷಾಕಾಗ ದದಲ್ಲಿ) ವಾಗ್ರೂಪ ಬರದು ತರ ಬೇಕು. ಸುಳ್ಳು ವಾಗ್ರೂಪ ಪಡಿಸುವವನು ಶಿಕ್ಷೆಗೆ ಗುರಿಯಾಗುವನು.

೧೦೦೦ ರೂಪಾಯಿ ಮೌಲ್ಯದೊಳಗಿನ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಅದರೆ ೧೦೦೦ ರೂಪಾಯಿಗೆ ಮಿಗಿಲಾದ ಮೌಲ್ಯವುಳ್ಳ ಕಟ್ಟು ಟಪ್ಪಾಲ ಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯ ವಸೂಲು ಮಾಡಿ ಕೊಡಿಸುವ ಬಗ್ಗೆ ವಟ್ಟಿ:

	ಆ.
ಕಟ್ಟಿನ ಮೌಲ್ಯ ೧೦ ರೂಪಾಯಿಗೆ ಮಿಗದಿದ್ದರೆ	೨
" ೨೫ " "	೪
ಹೆಚ್ಚಿಗೆ ಪ್ರತಿ ೨೫ " ಯಾ ಅದರ ಅಂಶಕ್ಕೆ	೪

ಕಟ್ಟು ರವಾನಿಸಿದವನಿಗೆ ತರಿಸಿಕೊಡ ತಕ್ಕ ಹಣ ದಿಂದ ಈ ದರದಲ್ಲಿ ವಟ್ಟಿ ವಜಾ ಮಾಡಲಾದೀತು. ಅದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇ ಡವೆಂದು ವಾಪಸು ಮಾಡಿದರೆ, ಅದನ್ನು ರವಾನಿಸಿದ ವನೇ ಅದರ ಟಪ್ಪಾಲ ಹಾಸಲು ಸಹ ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾ ಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟಿ:

	ಆ.
ಸೊತ್ತಿನ ಕ್ರಯ ರೂ. ೫೦ಕ್ಕೆ ಮಿಗದಿದ್ದರೆ	೨
" " ೧೦೦ "	೪
ಹೆಚ್ಚಿಗೆ ಪ್ರತಿ " ೧೦೦ ಯಾ ಅದರ ಅಂಶಕ್ಕೆ	೪

ಲಿಫಾಪೆಗಳಿಗೆ ಈ ವಟ್ಟಿದ ಮೌಲ್ಯದ ಚೀಟು ಹಚ್ಚುವದು; ಕಟ್ಟುಗಳಿಗೆ ಅದರ ಮೌಲ್ಯವನ್ನು ನಗದಾಗಿ ಕೊಡುವದು.

(Telegraph) ತಂತಿಟಪ್ಪಾಲು.

ತಂತಿಟಪ್ಪಾಲಿನ ದ್ವಾರಾ ವರ್ತಮಾನವನ್ನು ಕಳುಹಿಸುವದಕ್ಕೆ ಮುಖ್ಯ ಮೂರು ವಿಧದ ದರ ಉಂಟು:

	ಮೊದಲನೆ ೯ ಶಬ್ದಗಳಿಗೆ ಯಾ ೬ ಅಂಕೆಗಳುಳ್ಳ ಸಂಖ್ಯೆಗೆ	ಹೆಚ್ಚಿಗೆ ಒಂ ದೊಂದು ಶಬ್ದಕ್ಕೆ
(Deferred Message) "ಅವಕಾಶ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ತಂತಿಟಪ್ಪಾಲಿನವರ ಸಂದರ್ಭದಲ್ಲಿ ರವಾನಿಸಿ, ಮರುದಿನ ಬೆಳಿಗ್ಗೆ ಅದರ ವಿಳಾಸಕ್ಕೆ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೦ ಆ. ೯	ರೂ. ೦ ಆ. ೧
(Ordinary Message) "ಸಾಧಾರಣ ವರದಿ" ಅಂದರೆ ಆಫೀಸಿನ ಕೆಲಸದ ಹೊತ್ತಿನಲ್ಲಿ ಒಪ್ಪಿಸಲ್ಪಟ್ಟು, ಚಾಲತಿ ಕ್ರಮದಲ್ಲಿ ರವಾನಿಸಿ ಮುಟ್ಟಿಸುವಂಥಾದ್ದಾಗಿದ್ದರೆ	ರೂ. ೧ ಆ. ೦	ರೂ. ೦ ಆ. ೨
(Urgent Message) "ಜರೂರು ವರದಿ" ಅಂದರೆ ಯಾವ ಹೊತ್ತಿನಲ್ಲಿ ಆಗಲೀ ಕೊಡಲ್ಪಟ್ಟು, ಕೂಡಲೇ ರವಾನಿಸಿ ಸಾಧಾರಣ ವರದಿಗಿಂತ ಮುಂದಾಗಿ ಮುಟ್ಟಿಸ ತಕ್ಕದ್ದಾಗಿದ್ದರೆ . .	ರೂ. ೨ ಆ. ೦	ರೂ. ೦ ಆ. ೪

ವರದಿ ಹೊರಡುವ ಮತ್ತು ತಲಪುವ ರಾಜೆಗಳ ಹೆಸರುಗಳು, ವರದಿ ರವಾನಿಸುವವನ ಮತ್ತು ಹೊಂ ದುವವನ ಹೆಸರುಗಳು, ವಿಳಾಸಗಳು ಲೆಖ್ಖಕ್ಕೆ ಹಿಡಿಯುವದಿಲ್ಲ.

"ಛಾಪಖಾನೇ ವರದಿಗಳು" (ಅಂದರೆ ವರ್ತಮಾನಪತ್ರಗಳಿಗೆ ಬರಿಯಲ್ಪಡುವ ವರದಿಗಳು) ರವಾನಿ ಸುವದಕ್ಕೆ ಮೇಲಿನ ದರದಲ್ಲಿ ಅದರ ೪ ಪಾಲು ಶಬ್ದಗಳನ್ನು ರವಾನಿಸ ಬಹುದು.

ತಂತಿಟಪ್ಪಾಲಿಲ್ಲದ ಊರಿನಿಂದ ಹೋಗ ತಕ್ಕ ವರದಿಯನ್ನು ಅಲ್ಲಿಯ ಟಪ್ಪಾಲಕಟ್ಟೆಗೆ ಮುಟ್ಟಿಸಿ ದಲ್ಲಿ ಅದನ್ನು ಸಮೀಪದ ತಂತಿಟಪ್ಪಾಲ್ ಆಫೀಸಿಗೆ ರಿಜಿಸ್ತ್ರಿ ಮಾಡಿ ರವಾನಿಸುವರು. ಅದಕ್ಕಾಗಿ ಟಪ್ಪಾಲ್‌ದಸ್ತೂರಿ ಯಾ ರಿಜಿಸ್ತ್ರಿಫೀಸು ಕೊಡುವ ಅವಶ್ಯವಿಲ್ಲ.

(Money Order) "ಮನಿ ಆರ್ಡರ್" ಎಂಬ ಹುಂಡೀಚೀಟು.

ಹಿಂದುಸ್ಥಾನದಲ್ಲಿ ಒಂದು ಟಪ್ಪಾಲುಕಟ್ಟೆಯಿಂದ ಇನ್ನೊಂದಕ್ಕೆ ೬೦೦ ರೂಪಾಯಿಗೆ ಎಷ್ಟಾದಷ್ಟು ಹಣಕ್ಕೆ ಹುಂಡಿ ಕೊಡಬಹುದು. ಇಂಥಾ ಹುಂಡಿಯನ್ನು ಒಳಟಪ್ಪಾಲಿನಿಂದಾಗಲೀ ತಂತಿಟಪ್ಪಾಲಿನಿಂದಾಗಲೀ ರವಾನಿಸಬಹುದು. ವಟ್ಟದ ವಿವರ:

ಟಪ್ಪಾಲ ದ್ವಾರಾ:

ರೂ. ೧೦ಕ್ಕೆ ಮೀರದಿದ್ದರೆ . . ೨ ಆಣೆ
" " " ಮೀರಿ ರೂ. ೨೫ಕ್ಕೆ ಮೀರದಿದ್ದರೆ ೪ "
" ೨೫ " " ಪ್ರತಿ ರೂ. ೨೫ಕ್ಕೆ ಯಾ ಅದರ ಅಂಶಕ್ಕೆ ೪ "
ಅದರೆ ೪ ಅಂಶ ೧೦ ರೂಪಾಯಿಗೆ ಮೀರದಿದ್ದರೆ, ಅದಕ್ಕಾಗಿ ೨ ಆಣೆ ಮಾತ್ರ.

ತಂತೀ ಟಪ್ಪಾಲ ದ್ವಾರಾ ರವಾನಿಸುವದಕ್ಕೆ							ರೂ.	ಆ.
ರೂ. ೧೦ಕ್ಕೆ	ಮೀರದಿದ್ದರೆ,						೧	೦
" ೧೦ "	ಮೀರಿ,	ರೂ. ೨೫ಕ್ಕೆ	ಮೀರದಿದ್ದರೆ,				೧	೪
" ೨೫ "	"	"	೫೦	"	"		೧	೮
" ೫೦ "	"	"	೬೫	"	"		೧	೧೨
" ೬೫ "	"	"	೧೦೦	"	"		೨	೦
" ೧೦೦ "	"	"	೧೩೫	"	"		೨	೪
" ೧೩೫ "	"	"	೧೫೦	"	"		೨	೮
" ೧೫೦ "	"	"	೨೦೦	"	"		೩	೦
" ೨೦೦ "	"	"	೨೫೦	"	"		೩	೮
" ೨೫೦ "	"	"	೩೦೦	"	"		೪	೦
" ೩೦೦ "	"	"	೩೫೦	"	"		೪	೮
" ೩೫೦ "	"	"	೪೦೦	"	"		೫	೦
" ೪೦೦ "	"	"	೪೫೦	"	"		೫	೮
" ೪೫೦ "	"	"	೫೦೦	"	"		೬	೦
" ೫೦೦ "	"	"	೫೫೦	"	"		೬	೮
" ೫೫೦ "	"	"	೬೦೦	"	"		೭	೦

ಹುಂಡೀ ದ್ವಾರಾ ಹಣ ಯಾರು ಯಾರಿಗೆ ಮುಟ್ಟಿಸ ಬೇಕೋ, ಅವರಿಬ್ಬರ ಹೆಸರು, ವಿಳಾಸ, ಹಣದ ಸಂಖ್ಯೆ ಮುಂತಾದ್ದನ್ನು, ಟಪ್ಪಾಲಕಟ್ಟೆಯಿಂದ ಈ ಉದ್ದಿಶ್ಯ ಸಿಕ್ಕುವ ಛಾಪಾಕಾಗದದಲ್ಲಿ ಬರದು, ಅದರಲ್ಲಿ ಬಿಟ್ಟಿರುವ ಖಾಲಿ ಜಾಗದಲ್ಲಿ (ಹಣ ಪಡಕೊಳ್ಳುವವನಿಗೆ ತಿಳಿಸ ತಕ್ಕ) ಅವಶ್ಯದ ಬೇರೆ ಸಂಗತಿಗಳೇನಾದರೂ ಬರದು, ಹಣ, ವಟ್ಟ ಸಮೇತಾ ಟಪ್ಪಾಲಕಟ್ಟೆಗೆ ರವಾನಿಸಿದ್ದಾದರೆ, ಅದಕ್ಕಾಗಿ ಅವರು ರಶೀದಿ ಕೊಟ್ಟು, ಅವರೇ ಹುಂಡೀಚೀಟನ್ನು ತೀದಾ ರವಾನಿಸಿ, ಹಣವನ್ನು ಹೊಂದ ತಕ್ಕವನಿಗೆ ಮುಟ್ಟಿಸುವರು; ತಲ್ಪಿದ ಕೂಡಲೇ ಅದರಲ್ಲಿ ಅಗತ್ಯವಿರುವ ದಸ್ಕತುಗಳನ್ನು ತಾರೀಕು ಸಮೇತಾ ಮಶಿಯಿಂದ ಬರದು, ರಶೀದಿ ಕೊಟ್ಟು, ಹಣ ಪಡಕೊಳ್ಳುವದು. ಹಣ ಹೊಂದ ತಕ್ಕವನು ಬರಹ ಬಾರದವನಾಗಿದ್ದರೆ, ಅದಕ್ಕೆ ಅವನ ಗುರುತು ಮತ್ತು ಬರಹ ತಿಳಿದವನೊಬ್ಬನ ಸಾಕ್ಷಿ ಸಹ ಹಾಕಿಸಿ ಕೊಡ ಬೇಕು.

(Post Office Savings Bank) ಟಪ್ಪಾಲಕಟ್ಟೆಯಲ್ಲಿ ಹಣ ಠೇವಣಾತಿ ಇಡೋಣ.

ಈ ಬೇಂಕಿನಲ್ಲಿ ಯಾವ ಪುರುಷನಾಗಲೀ ಸ್ತ್ರೀಯಾಗಲೀ ಮಗುವಿಗೋಸ್ಕರವಾಗಲೀ ಹಣವನ್ನು ಠೇವಣಾತಿಯಾಗಿ ಇಡ ಬಹುದು. ನಾಲ್ಕು ಆಣೆಗಿಂತ ಕಡಿಮೆಯಾಗಲಿ ನಾಲ್ಕು ಆಣೆಯ ಅಂಶವಾಗಲಿ ತೆಗದು ಕೊಳ್ಳುವದಿಲ್ಲ; ಮತ್ತು ಒಂದು ವರ್ಷದೊಳಗೆ ಒಟ್ಟು ಕೂಡಿ ಇನ್ನೂರು ರೂಪಾಯಿಗಿಂತ ಜಾಸ್ತಿ ಮೊಬಲಗನ್ನು ಠೇವಣಾತಿಯಾಗಿ ಇಡ ಕೂಡದು. ಇದಕ್ಕಾಗಿ ಒಂದು ಛಾಪಾಪುಸ್ತಕ ಕ್ರಯವಿಲ್ಲದೆ ಕೊಡುತ್ತಾರೆ. ಅದರಲ್ಲಿ ಆಗಾಗ್ಯೆ ಠೇವಣಾತಿ ಇಟ್ಟ, ಇಲ್ಲವೆ ವಾಪಸು ಪಡಕೊಂಡ ಹಣಗಳ ಲೆಖ್ಖ ಬರೆದು ಕೊಡುತ್ತಾರೆ. ಈ ಉದ್ದಿಶ್ಯ ಪ್ರತಿ ಸಾರಿ ಆ ಪುಸ್ತಕವನ್ನು ಟಪ್ಪಾಲ ಆಫಿಸಿಗೆ ಹಾಜರು ಮಾಡಬೇಕು. ಪುಸ್ತಕ ಕಳದು ಹೋದರೆ, ಒಂದು ರೂಪಾಯಿ ಕೊಟ್ಟು ಹೊಸ ಪುಸ್ತಕ ಪಡಕೊಳ್ಳಬಹುದು.

ಈ ಪ್ರಕಾರ ಠೇವಣಾತಿ ಮಾಡಿದವನು ತನ್ನ ಹಣದಿಂದ ವಾರದಲ್ಲಿ ಒಂದಾವರ್ತಿ ವಾಪಸು ಪಡಕೊಳ್ಳ ಬಹುದು. ಅದರೆ ತನ್ನ ಪೂರಾ ಲೇವ್ಹಾದೇವಿ ತೀರಿಸುವಾಗ ಅಲ್ಲದೆ, ಒಬ್ಬನು ಒಂದು ಸಾರಿಗೆ ನಾಲ್ಕು ಆಣೆಗಿಂತ ಕಡಿಮೆಯಾಗಲೀ ಅದರ ಅಂಶ ಕೂಡಿದ ಯಾವ ಮೊಬಲಗಾಗಲೀ ವಾಪಸು ಪಡಕೊಳ್ಳ ಕೂಡದು.

ಈ ವಿಷಯದಲ್ಲಿ ಇನ್ನೊಂದು ಹುಕುಂ ಕೊಡುವ ವರೆಗೆ, ಪೂರಾ ಐದ್ನೂರು ರೂಪಾಯಿಯ ಮೊಬಲಗಿನ ಮೇಲೆ ತಿಂಗಳು ಒಂದಕ್ಕೆ ಮೂರು ಪೈ ಮೇರೆಗೆ (ಅಂದರೆ ವರ್ಷಕ್ಕೆ ಠೇಕಡಾ ೬ ರೂಪಾಯಿ ೧೩ ಆಣೆ ಮೇರೆಗೆ) ಬಡ್ಡಿ ಕೊಡೋಣಾಗುವದು; ಮತ್ತು ವರ್ಷಂಪ್ರತಿ ಬಡ್ಡಿಯನ್ನು ಅಸಲಿಗೆ ಕೂಡಿಸೋಣಾಗುವದು.

Officials of South Canara District
ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

Civil ಸಿವಿಲ್.

1. District Court ಡಿಸ್ಟ್ರಿಕ್ಟ್ ಕೋರ್ಟ್.

W. J. Tate Esq. ಎ. ಜೆ. ಟೇಟ್ ಥೊರೆಗಳು—ಡಿಸ್ಟ್ರಿಕ್ಟ್ ವ ಶೆಶ್ಯನ್ ಜಡ್ಜರು (ಬೇರೆ ಕೆಲಸದ ಮೇಲೆ).

W. C. Holmes Esq. ಎ. ಶಿ. ಹೋಮ್ಸ್ ಥೊರೆಗಳು—ಆಕ್ಟಿಂಗ್ ಜಡ್ಜರು.

ಮಿಸ್ತರ್ ಜು. ಸ. ಸಾಲ್ಡಾಞ್ಞರು—ತಿರಸ್ತೇದಾರ್.

ಪ. ರಾಮರಾವರು—ಹೆಡ್‌ಕ್ಲರ್ಕ್.

ಜೆ. ಬಿ. ಫೆರ್ನಂದೆಸ್—ಟ್ರನ್ಸ್‌ಲೇಟರ್.

ಅ. ಕ. ಸಲ್ಡಾಞ್ಞ—ರಿಕಾರ್ಡ್‌ಕೀವರ್.

ಉ. ನರಶಿಂಗರಾವ್—2ನೇ ಕ್ಲರ್ಕ್.

ಬ. ಮಂಗೇಶರಾವ್—ಸಂಟ್ರಲ್ ನಾಜರ್.

ಎ. ಪಿ. ಲೋಬೊ—ಕಾಪಿಸ್ಟರ ಸೆ.ಸುಪರಿಂಟಿಂಡೆಂಟ್.

2. Sub. Judge's Court ಸಬ್ ಜಡ್ಜರ ಕೋರ್ಟ್.

M. R. Ry. S. Subbaiyar Avargal ಮ. ರಾ. ರಾ. ಸ. ಸುಬ್ಬಯ್ಯರ್ ಅವರ್‌ಗಳ್—ಸಬೋರ್ಡಿನೇಟ್ ಜಡ್ಜರು.

ಮಿಸ್ತರ್ ಎ. ಬಿ. ಗೊನ್ಸಾಲ್ವೆಸ್—ತಿರಸ್ತೇದಾರ್.

ಕೊ. ಶಾಮರಾವ್—ಹೆಡ್‌ಕ್ಲರ್ಕ್.

Pleaders ಡಿಸ್ಟ್ರಿಕ್ಟ್ ಕೋರ್ಟ್ ವಕೀಲರು.

ಅ. ಸುಬ್ಬರಾವ್, ಬಿ. ಎ., ಬಿ. ಎಲ್. | ಮದ್ರಾಸ ಹೈ
ಉ. ಕೃಷ್ಣಭಟ್ಟ " " " | ಕೋರ್ಟ್
ಕಾ. ಪ. ರಾಮರಾವ್ " " " | ವಕೀಲರು.

ಗ. ಕೃಷ್ಣರಾವ್ ಬಿ. ಎ., ಎಲ್.ಎಲ್. ಬಿ., ಬೊಂಬೈ "

ಮ. ತೇ. ರಾಮರಾವ್—ಗವರ್ನಮೆಂಟ ವಕೀಲ್.

ರಾವ್‌ಬಹದೂರ್ ನ. ಶಿವರಾವ್.

ಕಾ. ಧಾ. ರಾಮರಾವ್.	ಲೊ. ಲೋಬೊ.
ಪ. ಪರಮೇಶ್ವರಯ್ಯ.	ಮು. ಶಿವರಾವ್.
ಹ. ಕೃಷ್ಣರಾವ್.	ನ. ಮಂಜುನಾಥಯ್ಯ.
ಮ. ರಾಮಚಂದ್ರಯ್ಯ.	ಎಫ್. ಬಿ. ಮಸ್ಕರೇಞ.
ಮ. ಸುಬ್ಬರಾವ್.	ವಾ. ನರ್ಸಪ್ಪಯ್ಯ.
ತ. ಭವಾನಿರಾವ್.	ಪ. ಗ. ಸುಬ್ರಾವ್.
ಸು. ರಾಮರಾವ್.	ಮ. ರಂಗಭಂಡಾರಿ.
ಸಾ. ಫೆ. ಬ್ರಿತೊ.	ಚ. ಆನಂದರಾವ್.

3. Munsifs ಮುನಸಿಫರು.

ಮ. ಮುಂಡಪ್ಪ ಬಂಗೇರರು, ಬಿ. ಎ., ಬಿ. ಎಲ್.—ಮಂಗಳೂರ ಮುನಸಿಫ್ (3ನೇ ದರ್ಜೆ).

ಹ. ನರಶಿಂಗರಾವ್—ಹೆಡ್‌ಕ್ಲರ್ಕ್.

ಉ. ಬಾಬುರಾಯರು, ಬಿ. ಎಲ್.—ಉಡಪಿ ಮುನಸಿಫ್ (2ನೇ ದರ್ಜೆ).

ಹ. ರಾಮಪ್ಪ—ಹೆಡ್‌ಕ್ಲರ್ಕ್.

ಕು. ಕೃಷ್ಣರಾಯರು, ಬಿ. ಎ.—ಪುತ್ತೂರ ಮುನಸಿಫ್ (1ನೇ ದರ್ಜೆ).

ಅ. ವೆಂಕಟರಮಣಯ್ಯ—ಹೆಡ್‌ಕ್ಲರ್ಕ್.

ಮಿಸ್ತರ್ ಜೆ. ಲೋಬೊರವರು—ಕಾಸರಗೋಡ ಮುನಸಿಫ್ (1ನೇ ದರ್ಜೆ).

ಪು. ರಂಗಪ್ಪ—ಹೆಡ್‌ಕ್ಲರ್ಕ್.

ಮಿಸ್ತರ್ ಇ. ಪಿ. ಫೆರ್ನಂದೆಸರು—ಕುಂದಾಪುರ ಮುನಸಿಫ್ (2ನೇ ದರ್ಜೆ).

ಜೆ. ಮ. ಸಲ್ಡಾಞ್ಞ, ಬಿ. ಎ. ಹೆಡ್‌ಕ್ಲರ್ಕ್.

ಸು. ರಘುನಾಥಯ್ಯನವರು, ಬಿ. ಎ., ಬಿ. ಎಲ್.—ಕಾರ್ಕಳ ಮುನಸಿಫ್ (3ನೇ ದರ್ಜೆ).

ಕಾ. ವಾಸುದೇವಭಟ್ಟ—ಹೆಡ್‌ಕ್ಲರ್ಕ್.

Registration Department ರಿಜಿಸ್ಟ್ರೀ ಇಲಾಖೆ.

F. F. Lemerle Esq. ಫ. ಫ. ಲಿಮರ್ಲೆ ಸಾಹೇಬರು—ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಜೆ. ಕೊಯಿಲೊ—ಹೆಡ್‌ಕ್ಲರ್ಕ್.

Sub. Registrars ಸಬ್‌ರಿಜಿಸ್ಟ್ರಾರರು.

ಕ. ರಾಮರಾವ್—	1ನೇ ಗ್ರೇಡ್,	ಉಡಪಿ.
ಗೊ. ವೆಂಕಟರಾವ್, ಬಿ. ಎ.—	2ನೇ "	ಕಾಸ್ರಗೋಡ.
ಕಾ. ನಾರಾಯಣರಾವ್—	2ನೇ "	ಕುಂದಾಪುರ.
ಪಿ. ರಾಮಕೃಷ್ಣಯ್ಯ, ಬಿ.ಎ.—	3ನೇ "	ಬ್ರಹ್ಮಾವರ.
ಪ. ಕೃಷ್ಣರಾವ್—	4ನೇ "	ಎಟ್ಟು.
ಮ. ಮುಕುಂದರಾವ್, ಬಿ.ಎ.—	4ನೇ "	ಹೊಸದುರ್ಗ.
ಗೊಡ್‌ಫ್ರಿ ರೋಬರ್ಟ್ಸ್—	6ನೇ "	ಮುಲ್ಕಿ.
ಬಿ. ಸದಾಶಿವರಾವ್—	" "	ಕಾರ್ಕಳ.
ಮ. ಲಕ್ಷ್ಮಣರಾವ್—	5ನೇ "	ಮಂಜೇಶ್ವರ.
— ವಾಸ್—	7ನೇ "	ಮೂಡಬಿದ್ರೆ.
ಮ. ನಾರಾಯಣರಾವ್, ಬಿ.ಎ.	" "	ಪುತ್ತೂರು.
ಕೆ. ವೆಂಕಟರಾವ್, ಬಿ. ಎ.—	6ನೇ "	ಬೈಂದೂರು.
ಮು. ಬಾಬುರಾವ್—	7ನೇ "	ಬಂಟವಾಳ.
ಬಿ. ಮಂಜಪ್ಪ ಭಂಡಾರಿ—	" "	ಬೆಳತಂಗಡಿ.

Revenue and Magisterial ರೆವೆನ್ಯು ಮತ್ತು ಮೆಜಿಸ್ಟ್ರೇಟ್.

1. Huzur Office ಹಜೂರು.

S. H. Wynne Esq. ಸಿ. ಹೆ. ವಿನ್ ಥೊರೆಗಳು—ಕಲೆಕ್ಟರ್ ವ ಡಿಸ್ಟ್ರಿಕ್ಟ ಮೆಜಸ್ಟ್ರೇಟರು (ಬೇರೆ ಕೆಲಸದ ಮೇಲೆ).

V. A. Brodie Esq. ವಿ. ಎ. ಬ್ರೋಡಿ ಥೊರೆಗಳು—ಆಕ್ಟಿಂಗ್ ಕಲೆಕ್ಟರ್.

ಮ. ರಾ. ರಾ. ಅ. ವಾಸುದೇವಪ್ಪಯವರು—ತಿರಸ್ತೇದಾರ್.

ಜೊ. ಲು. ಫೆರ್ನಂದೆಸರು—ಹೆಡ್‌ಕ್ಲರ್ಕ್.

ಉ. ರಘುನಾಥಯ್ಯನವರು—ಟ್ರನ್ಸ್‌ಲೇಟರ್.

ಮು. ವೆಂಕಟರಾಯರು—ದೇಶಭಾಷಾ ಹೆಡ್‌ಕ್ಲರ್ಕ್.
—ಮೆಜಸ್ಟ್ರೇಟ್ "
ಯುಸುಫ್‌ಖಾನರು—ಇಂಗ್ಲಿಷ ರಿಕಾರ್ಡ್‌ಕೀಪರ್.
—ದೇಶಭಾಷಾ "

2. Hd. Asst. Collector ಹೆಡ್ ಅ. ಕಲೆಕ್ಟರ್.

A. M. Slight Esq. ಎ. ಎಮ್. ಸ್ಲಾಯಿಟ್ ಥೊರೆಗಳು—ಅಕ್ಟಿಂಗ್ ಹೆ. ಅ. ಕಲ್ಲೆಕ್ಟರರು.
ಕ. ಸ. ಮು. ಅಬ್ರೆವೊ—ಹೆಡ್‌ಕ್ಲರ್ಕ್.

R. A. Graham Esq. ರೊ. ಅ. ಗ್ರೆಹಾಮ್ ಥೊರೆಗಳು—ಅಶಿಸ್ಟಾಂಟ ಕಲೆಕ್ಟರ ವ 3ನೇ ಕ್ಲಾಸ ಮೆಜಸ್ಟ್ರೇಟ.

3. Deputy Collectors ಡಿಪ್ಯುಟಿ ಕಲೆಕ್ಟರರು.

P. F. Fernandes Esq. ಪಿ. ಫ. ಫೆರ್ನಾಂಡೆಸರವರು—ಖಜಾನಾ ಡಿಪ್ಯುಟಿ ಕಲೆಕ್ಟರ್.
ಮತ್ತುಭಂಡಾರಿಗಳು-ಇಂಗ್ಲಿಷ ಹೆಡ್ ಎಕೌಂಟಾಂಟ್.
ಇ. ಸಿ. ರುಜಾರಿಯೊ—ಟ್ರೆಜರರ್ (ಖಜಾನಚ).

M. R. Ry. K. Rama Rao Avargal ಮು. ರಾ. ರಾ. ಕ. ರಾಮರಾವ್ ಅವರ್ಗಳ್—ಡಿಪ್ಯುಟಿ ಕಲೆಕ್ಟರ್ ವ 1ನೇ ಕ್ಲಾಸ ಮೆಜಸ್ಟ್ರೇಟ್.
ಸಿ. ರಾಮರಾವ್—ಹೆಡ್‌ಕ್ಲರ್ಕ್.

M. R. Ry. K. Ganapaya Avargal ಮು. ರಾ. ರಾ. ಕು. ಗಣಪಯ್ಯ ಅವರ್ಗಳ್—ಹೆಡ್‌ಕ್ವಾರ್ಟರ್ ಡಿಪ್ಯುಟಿ ಕಲೆಕ್ಟರ್ ವ 1ನೇ ಕ್ಲಾಸ್ ಮೆಜಸ್ಟ್ರೇಟ್.
ಮು. ಪಾಂಡುರಂಗ್ರಾವ್—ಹೆಡ್ ಕ್ಲರ್ಕ್.

4. Tahsildars etc. ತಹಶೀಲ್‌ದಾರರು ಇ:

ಮಿಸ್ತರ್ ನಿ. ಬ್ರಿತೊರವರು—ಮಂಗಳೂರು ತಾಲೂಕು ತಹಶೀಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.
ತೊ. ಸದಾತಿವರಾಯರು—ಹೆ. ಎಕ್ಕೌಂಟಾಂಟ್.
" ಮು. ಲಿ. ತಿಕೇರನವರು—ಕಾಸರಗೋಡ ತಾ. ಅ. ತಹಶೀಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.
ಮಿಸ್ತರ್ ಥಿ. ರೋಬರ್ಟ್ಸ್—ಹೆ. ಎಕ್ಕೌಂಟಾಂಟ್.
" ಜೊ. ಲು. ಸಲ್ದಾಞ್ಞರು—ಉಡಪಿ ತಾಲೂಕು ಅ. ತಹಶೀಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.
ಮಹಮ್ಮದಖಾನರು—ಹೆ. ಎಕ್ಕೌಂಟಾಂಟ್.
ರ. ರಾಮರಾಯರು—ಪುತ್ತೂರು ತಾಲೂಕು ತಹಶೀಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.
ಕಾ. ಲೊ. ಮಸ್ಕರೆಞರು—ಹೆ. ಎಕ್ಕೌಂಟಾಂಟ್.
ವೊ. ರಾಮರಾಯರು—ಕುಂದಾಪುರ ತಾಲೂಕು ಅ. ತಹಶೀಲ್‌ದಾರ್ ವ 2ನೇ ಕ್ಲಾಸ ಮೆಜಸ್ಟ್ರೇಟ್.
ಫ್ರಾ. ಸಿಂತೊ—ಹೆ. ಎಕ್ಕೌಂಟಾಂಟ್.

ಡಿಪ್ಯುಟಿ ತಹಶೀಲ್ದಾರರು ಮತ್ತು ೨ನೇ ಕ್ಲಾಸ ಮೆಜಿಸ್ಟ್ರೇಟರು.

ಬೊ. ತಿವಯ್ಯನವರು—ಮಂಗಳೂರ ತಹರ.
ಪಿ. ಸಿ. ಕಾಸ್ತಿಲೀನೊರವರು—ಸದರ್ ಬಂಟವಾಳ.
ಮಿಸ್ತರ್ ನೋರ್ಟರ್ಟ ಫೆರ್ನಾಂದೆಸ್—ಸದರ್ ನಿಲೇಶ್ವರ.
ಓ. ರಾಮರಾಯರು—ಸದರ್ ಬೆಳತಂಗಡಿ.
ಹೆರಬರ್ಟ್ ಕೊರಗಪ್ಪರು—ಸದರ್ ಕಾರ್ಕಳ.

ಸ್ಟೇಶನೆರಿ ಮೆಜಿಸ್ಟ್ರೇಟರು.

ಬೊ. ಬಾಬುರಾವರು—ಮಂಗಳೂರು.
ಮು. ದೇವರಾವರು, ಬಿ. ಎ., ಬಿ. ಎಲ್.
—ಕಾಸರಗೋಡು.
ವಿ. ಮು. ಪೆರ್ನಂಬೆಜರು, ಬಿ. ಎ., ಬಿ. ಎಲ್.
—ಪುತ್ತೂರು.
ಎ. ದೇವಪ್ಪಪೂಂಜರು, ಬಿ. ಎ., ಬಿ. ಎಲ್.
—ಉಡಿಪಿ.
ವೊ. ರಾಮರಾವರು—ಕುಂದಾಪುರ.

5. Bench Magistrates ಬೆಂಚ್ ಮೆಜಿಸ್ಟ್ರೇಟರು.

ಮಂಗಳೂರ ಶಹರ:

ಮಂಗ್ಳೂರ ಶಹರ ಸಬ್‌ಮೆಜಸ್ಟ್ರೇಟರು-ಪ್ರೆಸಿಡೆಂಟ್.
ಮಹಾರಾಜಶ್ರಿ ನೆಲ್ಲಿಕಾಯಿ ಗುಂಡುರಾಯರು.
" ಚಿಲ್ಮಿ ಅಮಿರುದ್ದೀನ್ ಸಾಹೇಬರು.
" ಡಬ್ಬಿ ಮಹಮ್ಮದ ಅಲಿ ಸಾಹೇಬರು.
" ಕೊ. ನಾರಣಶೆಟ್ರು.
" ಸ. ಫ. ಬ್ರಿತೊರವರು.

ಉಡಪಿ ಶಹರ:

ಉಡಪಿ ಸ್ಟೇಶನೆರಿ ಡಿ. ಮೆಜಸ್ಟ್ರೇಟರು—ಪ್ರೆಸಿಡೆಂಟ್.
ಹಾಜಿ ಕಾಸಿಮ ಸಾಹೇಬರು.
ಮಿಸ್ತರ್ ಫಿಲಿಪ್ ಫೆರ್ನಾಂಡೆಸರು.
ಮಹಾರಾಜಶ್ರೀ ಕೃಷ್ಣಪಡಿಯಾರರು.
" ಯಲ್ಲಪ್ಪ ಹೆಗ್ಗಡೆರು.
" ಕಾ. ಶ್ರೀನಿವಾಸರಾಯರು.

Police Department
ಪೊಲೀಸ್ ಇಲಾಖೆ.

Col. W. H. Hoskins ಕರ್ನೆಲ್ ಎ. ಹೆ. ಹೊಸಕಿನ್ಸ ಥೊರೆಗಳು—ಪೊಲೀಸ್ ಸುಪರಿಂಟೆಂಡೆಂಟರು.
ಮಿಸ್ತರ್ ಡಿ. ರಸ್ಕಿಞ್ಞರು—ಹೆಡ್‌ಕ್ವಾರ್ಟರ್ ಇನ್‌ಸ್ಪೆಕ್ಟರ್, 1ನೇ ಕ್ಲಾಸ್.
ಕೆ. ನಾರಾಯಣರಾವ್, ಬಿ.ಎ. ಬಿ.ಎಲ್—4ನೇ ಕ್ಲಾಸ.
ಎಡ್ವಾರ್ಡ್ ಈಟನ್—ರಿಜರ್ವ್ ಮತ್ತು ಸ್ಟೋರ್ ಇನ್‌ಸ್ಪೆಕ್ಟರ್, 4ನೇ ಕ್ಲಾಸ್.

ಡಿವಿಜನಲ್ ಇನ್‌ಸ್ಪೆಕ್ಟರರು.

ಕೆ. ರಾಮರಾವ್—ಮಂಗಳೂರ ಶಹರ, 3ನೇ ಕ್ಲಾಸ್.
ಜೆ. ಮು. ಹ್ಯಾಸ—ಮಂಗಳೂರ ತಾಲೂಕು 4ನೇ ,,
ಪೆ. ಬ. ಕೃಷ್ಣಯ್ಯ ಹೆಗಡೆ—ಕಾಸರಗೋಡ ಡಿವಿಜನ್, 4ನೇ ಕ್ಲಾಸ್. [ಕ್ಲಾಸ್.
ಜಿ. ರಮಣಯ್ಯ—ಉಪ್ಪಿನಂಗಡಿ ಡಿವಿಜನ್, 4ನೇ
ಮಕ್ಷಿಮ್ ಬ್ರಿತೊ—ಪುತ್ತೂರ ಡಿವಿಜನ್, 4ನೇ ಕ್ಲಾಸ್.
ನ. ರಾಮಪ್ಪ—ಬಂಟವಾಳ ಡಿವಿಜನ್, 4ನೇ ,,
ಬಿ. ಶ್ರೀನಿವಾಸ—ಉಡಪಿ ಡಿವಿಜನ್, 2ನೇ ,,
ಪಿ. ಪಾಸಪ್ಪಾ—(ಬನ್ನಿ) ಕುಂದಾಪುರ ಡಿವಿಜನ್, 4ನೇ ಕ್ಲಾಸ.

Salt and Abkary Department
ನಮ್ಮಕ ವ ಅಬಕಾರಿ ಇಲಾಖೆ.

E. A. Barren Esq. ಇ. ಎ. ಬೆರನ್ ಥೊರೆಗಳು —ಇನ್‌ಸ್ಪೆಕ್ಟರ್, ಮಂಗಳೂರ ಸರ್ಕಲ್.

ಕೆ. ಎ. ರಾಮಸಾಮಿ ಅಯ್ಯರ್—ಅಸಿಸ್ಟಾಂಟ್ ಇ. ತೊ. ನರಸಿಂಗರಾವ್—ಹೆಡ್‌ಕ್ಲರ್ಕ್.

A. S. Kearns Esq. ಎ. ಸ. ಕೇರ್‌ನ್ಸ್ ಥೊರೆಗಳು —ಇನ್‌ಸ್ಪೆಕ್ಟರ್, ಕುಂದಾಪುರ ಸರ್ಕಲ್.

ಮಿಸ್ತರ್ ಜೆ. ಥ. ಡಿ, ರುಜಾರಿಯೊ—ಅಸಿಸ್ಟಾಂಟ ಇ. ಬ. ರಾಮರಾವ್—ಹೆಡ್‌ಕ್ಲರ್ಕ್.

Preventive Sub-Inspectors
ಪ್ರಿವೆಂಟಿವ್ ಸಬ್ ಇನ್‌ಸ್ಪೆಕ್ಟರರು.

ಮಂಗಳೂರು ಸರ್ಕಲ್.

ಕ. ರಾಮರಾವ್—ಮುಲ್ಕಿ ರೇಂಜ್.
ನ. ಕೊರಗಪ್ಪಾ—ಮಂಗಳೂರು.
ಕ. ಭ. ಮಂಜುನಾಥಯ್ಯ—ಬಿಳ್ತಂಗಡಿ.
ಜೆ. ಎ. ಫೆರ್ನಾಂಡೆಸ್—ಮಂಗಳೂರು ಭಟ್ಟಿ.
ಮು. ದೇವಸಗಾಯಮ್—ಬಂಟವಾಳ.
ಜೆ. ಅನಂತಯ್ಯ—ಬಜಪೆ.
ತಿ. ಲ. ಶೆ. ತಿಕೇರಾ—ಮಂಜೇಶ್ವರ.
ಬಿ. ರಾಮಯ್ಯ—ಉಳ್ಳಾಲ.
ಮು. ಶೇಷಾಚಲಮ್—ಮೂಡಬಿದ್ರಿ.
ಬಿ. ತಿಮ್ಮಪ್ಪಮುಲ್ಲಿ—ವೇಣೂರು.
ಲ. ಸ. ರೇಗೊ—ಪುತ್ತೂರು.
ಸ. ಉಮ್ಮಪ್ಪ—ಕಾಸರಗೋಡು.
ಹ. ಅನಂತಯ್ಯ—ಹೊಸದುರ್ಗ.

ಉಡುಪಿ ಸರ್ಕಲ್.

ಎ. ಇಮಾಮ್‌ಖಾನ್—ಗಂಗೊಳ್ಳಿ ಫಿಶ್‌ಕ್ಯೂರಿಂಗ್.
ಸ. ಎ. ಸಾಲ್ದಾನ್ಹಾ—ಬ್ರಹ್ಮಾವರ.
ಮು. ಗಿರಿಯಪ್ಪ ಬಂಗೇರಾ—ಮಲ್ಪೆ.
ಬಿ. ನಾಗಪ್ಪಾ—ಬಯಿಂದೂರು.
ಮು. ಸುಬ್ಬರಾವ್—ಕೋಟ.
ಹ. ನಾರಾಯಣ ಪೈ—ಕುಂದಾಪುರ.
ಬ. ಕೃಷ್ಣರಾವ್—ಉಡುಪಿ.
ಮು. ರಾಘವೇಂದ್ರರಾವ್—ಕಾರ್ಕಳ.
ಕೆ. ಕೃಷ್ಣಸಾಮಿರಾವ್—ಕಾಪ.
ಹ. ಶೇಷಗಿರಿರಾವ್—ಪಡುಬಿದ್ರಿ.

D. P. W. ಇಂಜಿನಿಯರ ಇಲಾಖೆ.

Imperial ಇಂಪೀರಿಯಲ್.

A. Joyce Esq., E. E. ಎ. ಜೋಯಿಶ್ ಥೊರೆಗಳು—ಇಂಜನಿಯರ್, ವೆ.ಕೊ.ಡಿವಿಜನ್, ಕಲಿಕಟ್.

ಎ. ಇ. ಪಿ. ವಾಸ್—ಸಬ್‌ಡಿವಿಜನಲ್ ಒಫಿಸರ್, ದಕ್ಷಿಣ ಕನ್ನಡ.

ಶಿ. ಜೆ. ಪೊನ್ನೈಕ—ಓವರ್‌ಸಿಯರ್, ಮಂಗಳೂರು.
ಜೆ. ತಿಮೊಥಿ— ,, ದಕ್ಷಿಣ ತಾಲೂಕು.

Local Fund ಲೋಕೆಲ್ ಫಂಡ್.

J. B. Macfarlane Esq. ಜೆ. ಬಿ. ಮೆಕ್‌ಫರ್ಲೇನ್ ಥೊರೆಗಳು—ಇಂಜನೀಯರ್.

ಡಿ. ಶಿ. ಕಾಸ್ತಲಿನೊ—ಹೆಡ್‌ಕ್ಲರ್ಕ್.

ಬ. ವೈಕುಂಠಬಾಳಿಗರು—ಸುವರ್‌ವಾಯ್ಜರ್, ಕುಂದಾಪುರ ರೇಂಜ. [ತಾಲೂಕು.
ಬಿ. ಮು. ಮೊತ್ತಿ—ಓವರ್‌ಸಿಯರ್, ಮಂಗಳೂರ
ಎ. ರೊದ್ರಿಗ್ಸ್— ,, ಉಪ್ಪಿನಂಗಡಿ ತಾಲೂ.
ಬಿ. ಪಿಂತೊ— ,, ಉಡುಪಿ ,,
ಜೆ.ಪಿ. ಅನ್ದ್ರಾದೆ— ,, ಕಾಸ್ರಗೋಡ ತಾಲೂ.
ಬಿ. ಸ. ಅಲ್ಬುಕೆರ್ಕ್— ,, ಕುಂದಾಪುರ ,,(ರಜೆ)
ಎ. ಫೆರ್ನಾಂಡೆಸ್—ಬದ್ಲಿ ,, ,,

4	M	೪	ಚ		೨	೩೭-೪೮	ಕೃತ್ತಿಕಾ	೨೧- ೮		೨೦		೧೬
5	Tu	೫	ಮ		೩	೩೭-೪೧	ರೋಹಿಣೀ	೨೨-೩೧		೨೧		೧೭
6	W	೬	ಬು		೪	೩೬-೪೦	ಮೃಗಶಿರಾ	೨೨-೪೭		೨೨		೧೮
7	Th	೭	ಗು		೫	೩೫-೪೮	ಆರ್ದ್ರಾ	೨೨-೩೫		೨೩		೧೯
8	F	೮	ಶು	ಫಸಲಿ	೬	೩೫- ೦	ಪುನರ್ವಸೂ	೨೧-೨೪		೨೪		೨೦
9	S	೯	ಕ	ಫಸಲಿ	೭	೨೭-೨೭	ಪುಷ್ಯಾ	೨೯-೨೯		೨೫		೨೧
10	SUN	೧೦	ಆ	ಕಾರ್ತಿಕ	೮	೨೨-೨೯	ಆಶ್ಲೇಷಾ	೩೬-೪೦		೨೬		೨೨
11	M	೧೧	ಚ		೯	೨೭-೪೪	ಮಘಾ	೪೫-೫೫		೨೭		೨೩
12	Tu	೧೨	ಮ		೧೦	೨೨- ೦	ಪುಬ್ಬಾ	೯-೨೮		೨೮		೨೪
13	W	೧೩	ಬು		೧೧	೫-೪೭	ಉತ್ತರಾ	೫-೨೭		೨೯		೨೫
14	Th	೧೪	ಗು		೧೫	೫೨-೨೭	ಹಸ್ತಾ	೦-೨೮		೩೦		೨೬
15	F	೧೫	ಶು		೧೪	೪೭-೧೮	ಸ್ವಾತೀ	೫೧- ೯		೧		೨೭
16	S	೧೬	ಕ		☹	೪೦-೪೭	ವಿಶಾಖಾ	೪೭-೧೭		೨		೨೮
17	SUN	೧೭	ಆ		೧	೪೫-೫೫	ಅನುರಾಧಾ	೪೪-೨೯		೪		೨೯
18	M	೧೮	ಚ		೨	೪೨-೪೫	ಜ್ಯೇಷ್ಠಾ	೪೫- ೨		೪		೩೦
19	Tu	೧೯	ಮ		೩	೪೦-೪೬	ಮೂಲಾ	೪೫-೧೨		೫		೧
20	W	೨೦	ಬು		೪	೪೧- ೨	ಪೂರ್ವಾಷಾಢ	೪೫-೧೯		೬		೨
21	Th	೨೧	ಗು	ಫಸಲಿ	೫	೪೫-೧೨	ಉತ್ತರಾಷಾಢ	೪೯-೧೬		೭		೩
22	F	೨೨	ಶು	ಫಸಲಿ	೬	೪ -೧೨	ಶ್ರವಣಾ	೫೪-೫೪		೮		೪
23	S	೨೩	ಕ	ಫಸಲಿ	೭	೪೨-೪೨	ಧನಿಷ್ಠಾ	೬೦- ೦		೯		೫
24	SUN	೨೪	ಆ	ಪೂರ್ಣಿಮೆ	೮	೪೯- ೯	ಧನಿಷ್ಠಾ	೦-೫೩		೧೦		೬
25	M	೨೫	ಚ		೯	೫೫-೫೩	ಶತಭಿಷಾ	೯-೩೬		೧೧		೭
26	Tu	೨೬	ಮ		೧೦	೬೦- ೦	ಪೂರ್ವಾಭಾದ್ರ	೧೬-೫೬		೧೨		೮
27	W	೨೭	ಬು		೧೧	೨-೧೫	ಉತ್ತರಾಭಾದ್ರ	೨೪-೨೮		೧೩		೯
28	Th	೨೮	ಗು		೧೨	೭-೩೪	ರೇವತೀ	೩೦-೩೨		೧೪		೧೦
29	F	೨೯	ಶು		೧೩	೧೨-೧೯	ಅಶ್ವಿನೀ	೩೫-೧೦		೧೫		೧೧
30	S	೩೦	ಕ		೧೪	೧೪-೫೦	ಭರಣೀ	೩೮-೧೭		೧೬		೧೨

ಭೂಮಿಯ ರಾಜ್ಯಗಳೇ, ದೇವರಿಗೆ ಹಾಡಿರಿ; ಕರ್ತನನ್ನು ಕೀರ್ತಿಸಿರಿ.
ಇವನೇ ಜನರಿಗೆ ಬಲವನ್ನೂ ಶಕ್ತಿಯನ್ನೂ ಕೊಡುತ್ತಾನೆ. ದೇವರಿಗೆ ಆಶೀರ್ವಾದವಾಗಲಿ.
ಕೀರ್ತ. ೬೮, ೩೨. ೩೫.

1895 NOVEMBER—ನವಂಬರ ೧೮೯೫

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
					ಸಾಯಂ.		ರಾತ್ರಿ		ಪ್ರಾತಃ.	
೧	೫	೫೫	೫	೫೨	೪	೫೬	೧೨	೫೯	೪	೫೬
೨	೫	೫೫	೫	೫೨	೫	೧೭	೧೨	೪೫	೫	೨೫
					ಪ್ರಾತಃ.					
೩	೫	೫೬	೫	೫೨	೬	೦			೬	೧೬
೪	೫	೫೬	೫	೫೧	೬	೫೧	೧೨	೫೪	೭	೪
೫	೫	೫೭	೫	೫೧	೭	೪೬	೧	೨೮	೮	೫
೬	೫	೫೭	೫	೫೦	೮	೪೫	೧	೫೯	೯	೨
೭	೫	೫೮	೫	೫೦	೯	೪೪	೨	೩೦	೯	೫೯
೮	೫	೫೮	೫	೫೦	೧೦	೪೩	೨	೫೯	೧೦	೫೬
					ಮಧ್ಯಾಹ್ನ					
೯	೫	೫೯	೫	೫೦	೧೧	೪೨	೩	೨೮	೧೧	೫೩
೧೦	೫	೫೯	೫	೫೦	ಪ್ರಾತಃ.		೪	೦	೧೧	೪೯
೧೧	೫	೫೯	೫	೫೦	೧೧	೪೨	೪	೨೮	೧೨	೪೫
೧೨	೫	೫೯	೫	೫೦	೧	೪೧	೪	೫೭	ಸಾಯಂ.	
೧೩	೬	೦	೫	೧೯	೧	೧೯	೫	೨೬	೧	೩೩
೧೪	೬	೦	೫	೧೯	೨	೧೮	೫	೫೫	೨	೨೦
೧೫	೬	೦	೫	೧೯	೩	೧೭	೬	೨೫	೩	೭
೧೬	೬	೧	೫	೧೯	೪	೧೬	೬	೫೫	೩	೫೩
					ಮಧ್ಯಾಹ್ನ					
೧೭	೬	೧	೫	೧೯	೪	೧೫	೭	೨೫	೪	೪೦
೧೮	೬	೧	೫	೧೯	೫	೧೪	೭	೫೫	೪	೨೭
೧೯	೬	೨	೫	೧೯	೬	೧೩	೮	೨೬	೫	೧೫
೨೦	೬	೨	೫	೧೯	೭	೧೨	೮	೫೭	೬	೩
೨೧	೬	೩	೫	೧೯	೮	೧೧	೯	೨೯	೬	೫೦
೨೨	೬	೩	೫	೧೯	೯	೧೦	೧೦	೦	೭	೩೭
೨೩	೬	೪	೫	೨೦	೧೦	೯	೧೦	೩೨	೮	೨೫
					ಪ್ರಾತಃ.					
೨೪	೬	೪	೫	೨೦	೧೧	೮	೧೧	೬೪	೯	೧೫
೨೫	೬	೫	೫	೨೦	೧೨	೭	೧೨	೫೭	೧೦	೫
೨೬	೬	೫	೫	೨೦	೧೩	೬	೧೩	೪೯	೧೦	೫೬
೨೭	೬	೫	೫	೨೦	೧೪	೫	೧೪	೪೦	೧೧	೪೭
೨೮	೬	೬	೫	೨೦	೧೫	೪	೧೫	೩೨	೧೨	೩೮
೨೯	೬	೬	೫	೨೦	೧೬	೩	೧೬	೨೪	೧೩	೨೯
೩೦	೬	೬	೫	೨೦	೧೭	೨	೧೭	೧೬	೧೪	೨೦

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ಜನನ ಸಂಖ್ಯೆ	ಉದಯ	ಉಚ್ಚ	ಅಸ್ತಮಯ
ಕುಜ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೨	೫ ೨೨	೧೧ ೧೦	೪ ೫೮
	೧೨	೫ ೧೧	೧೦ ೫೨	೪ ೪೨
	೨೨	೫ ೦	೧೦ ೪೪	೪ ೨೯
ಬುಧ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೨	೪ ೪೩	೧೦ ೫೬	೪ ೨೯
	೧೨	೪ ೪೯	೧೦ ೫೨	೪ ೨೬
	೨೨	೫ ೧೧	೧೦ ೫೫	೪ ೫೯
ಗುರು		ರಾತ್ರಿ	ಪ್ರಾತಃ.	ಹಗಲು
		ಘ. ನಿ.	ಘ. ನಿ.	ಘ. ನಿ.
	೨	೧೧ ೨೨	೫ ೪೦	೧೧ ೫೭
	೧೨	೧೦ ೪೬	೫ ೨	೧೧ ೨೦
	೨೨	೧೦ ೨	೪ ೨೪	೧೦ ೪೧
ಶುಕ್ರ		ಪ್ರಾತಃ.	ಪ್ರಾತಃ.	ಮಧ್ಯಾ.
		ಘ. ನಿ.	ಘ. ನಿ.	ಘ. ನಿ.
	೨	೨ ೫೬	೬ ೫೬	೨ ೫೬
	೧೨	೨ ೫೦	೬ ೪೯	೨ ೪೯
	೨೨	೨ ೫೦	೬ ೪೬	೨ ೪೨
ಶನಿ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೨	೫ ೪೩	೧೧ ೫೧	೫ ೧೯
	೧೨	೫ ೯	೧೦ ೫೬	೪ ೪೪
	೨೨	೪ ೩೪	೧೦ ೧೧	೪ ೯

1895 DECEMBER

31 DAYS

೧೮೯೫ ಡಿಸೆಂಬರ

೩೧ ದಿವಸಗಳು

ಡಿಸಂಬರ ೨ ಮಾರ್ಗಶಿರ ಪೂರ್ಣಿಮಿ, ಹಗಲು ಘಂಟೆ ೧೧ ನಿಮಿಷ ೩೮
" ೯ ಕೃಷ್ಣಾರ್ಧಚಂದ್ರ, " " ೧೨ " ೯
" ೧೬ ಮಾರ್ಗಶಿರ ಅಮಾವಾಸ್ಯೆ, " " ೧೧ " ೨೯
" ೨೪ ಶುಕ್ಲಾರ್ಧಚಂದ್ರ, " " ೧೦ " ೨೧
" ೩೧ ಪುಷ್ಯ ಪೂರ್ಣಿಮಿ, ರಾತ್ರಿ " ೧ " ೩೦

ವಿಲಾಯತಿ ಕ್ರಮದ ಚಂದ್ರಸ್ಥಿತಿಗಳು

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
Date	Day	ತಾರೀಖು	ವಾರ	ತಿಂಗಳು	ತಿ.	ಘಂ|ನಿ|ಸೆ	ಹೆಸರು	ಘಂ|ನಿ|ಸೆ	ಸಂಕ್ರಮಣ	ದಿನ	ತಿಂಗಳು	ದಿನ
1	SUN	೧	ಆ	ಪೂರ್ವ. ಫಲ್ಗು.	೧೪	೧೪-೩೭	ಕೃತ್ತಿಕಾ	೩೯-೫೬		೧೭		೧೫
2	M	೨	ಚ		☾	೧೫-೫೮	ರೋಹಿಣೀ	೪೦-೧೫		೧೮		೧೪
3	Tu	೩	ಮ		೧	೧೨- ೫	ಮೃಗಶಿರಾ	೩೯-೨೯		೧೯		೧೫
4	W	೪	ಬು		೨	೯-೧೫	ಆರ್ದ್ರಾ	೩೭-೫೩		೨೦		೧೬
5	Th	೫	ಗು		೩	೫-೪೧	ಪುನರ್ವಸೂ	೩೫-೪೧		೨೧		೧೭
6	F	೬	ಶು		೪	೧-೩೭	ಪುಷ್ಯಾ	೩೩- ೨		೨೨		೧೮
7	S	೭	ಶ		೫	೨೨-೩೪	ಆಶ್ಲೇಷಾ	೩೦-೧೬		೨೩		೧೯
8	SUN	೮	ಆ	ಪೂರ್ವ. ಫಲ್ಗುಣ	೬	೪೭-೪೮	ಮಘಾ	೨೭-೧೪		೨೪		೨೦
9	M	೯	ಚ		೮	೪೨-೫೫	ಪುಬ್ಬಾ	೨೪- ೭		೨೫		೨೧
10	Tu	೧೦	ಮ		೯	೩೭-೫೯	ಉತ್ತರಾ	೨೨-೨೫		೨೬		೨೨
11	W	೧೧	ಬು		೧೦	೩೩- ೫	ಹಸ್ತಾ	೧೮-೪೦	ಧನುರ್ಮಾಸ [ಪ್ರವೇಶ]	೨೭		೨೩
12	Th	೧೨	ಗು		೧೧	೨೮-೧೬	ಚಿತ್ರಾ	೧೪-೨೦		೨೮		೨೪
13	F	೧೩	ಶು		೧೨	೨೩-೪೩	ಸ್ವಾತೀ	೧೧-೩೨		೨೯		೨೫
14	S	೧೪	ಶ		೧೩	೧೯-೪೭	ವಿಶಾಖಾ	೯- ೦		೧		೨೬
15	SUN	೧೫	ಆ		೧೪	೧೬-೧೪	ಅನುರಾಧಾ	೭- ೬		೨		೨೭
16	M	೧೬	ಚ		☽	೧೩-೩೨	ಜ್ಯೇಷ್ಠಾ	೬- ೫		೩		೨೮
17	Tu	೧೭	ಮ		೧	೧೨-೪೮	ಮೂಲಾ	೬-೨೬		೪		೨೯
18	W	೧೮	ಬು		೨	೧೩-೧೬	ಪೂರ್ವಾಷಾಢ	೪-೧೧		೫	ಜಮಾದಿಯಲ್ಆಖರ್	೧
19	Th	೧೯	ಗು		೩	೧೫-೨೪	ಉತ್ತರಾಷಾಢ	೧೧-೪೪		೬		೨
20	F	೨೦	ಶು		೪	೧೮-೧೩	ಶ್ರವಣಾ	೧೬-೨೦		೭		೩
21	S	೨೧	ಶ		೫	೨೪-೨೮	ಧನಿಷ್ಠಾ	೨೨-೫೨		೮		೪
22	SUN	೨೨	ಆ	ಪೂರ್ವ. ಚೈತ್ರ	೬	೨೦-೪೫	ಶತಭಿಷಾ	೨೦-೧೧		೯		೫
23	M	೨೩	ಚ		೭	೨೭-೨೦	ಪೂರ್ವಾಭಾದ್ರ	೨೭-೫೭		೧೦		೬
24	Tu	೨೪	ಮ	ಪೂರ್ವ. ವೈಶಾಖ	೮	೪೪- ೨	ಉತ್ತರಾಭಾದ್ರ	೪೫-೧೩		೧೧		೭
25	W	೨೫	ಬು		೯	೪೯-೪೪	ರೇವತೀ	೫೨-೧೭		೧೨	ರಜಬ್	೮
26	Th	೨೬	ಗು		೧೦	೫೪-೧೦	ಅಶ್ವಿನೀ	೫೭-೪೨		೧೩		೯
27	F	೨೭	ಶು		೧೧	೫೯-೩೦	ಭರಣೀ	೩೦- ೦	ಕುಜನ [ಪ್ರವೇಶ]	೧೪		೧೦
28	S	೨೮	ಶ		೧೨	೫೯- ೫	ಭರಣೀ	೧-೨೦		೧೫		೧೧
29	SUN	೨೯	ಆ		೧೩	೫೫- ೯	ಕೃತ್ತಿಕಾ	೪-೧೦		೧೬		೧೨
30	M	೩೦	ಚ		೧೪	೫೨-೫೪	ರೋಹಿಣೀ	೪-೫೪		೧೭		೧೩
31	Tu	೩೧	ಮ		☾	೪೮-೪೧	ಮೃಗಶಿರಾ	೧-೪೬		೧೮		೧೪

ಜನರಲ್ಲಿ ನಿನ್ನನ್ನು ಕೊಂಡಾಡುವೆನು, ನನ್ನ ಕರ್ತನೇ;
ಜನಗಳಲ್ಲಿ ನಿನ್ನನ್ನು ಕೀರ್ತಿಸುವೆನು; ಯಾಕಂದರೆ ಆಕಾಶದ ವರೆಗೆ ನಿನ್ನ ಕೃಪೆಯೂ,
ಮೇಘಗಳ ವರೆಗೆ ನಿನ್ನ ಸತ್ಯವೂ ದೊಡ್ಡವಾಗಿವೆ. ಕೀರ್ತ. ೫೭, ೯. ೧೦.

1895 DECEMBER—ದಶಂಬರ ೧೮೯೫

ತಾರೀಖು	ಸೂರ್ಯ ಉದಯ ಘಂ.	ಸೂರ್ಯ ಉದಯ ನಿ.	ಸೂರ್ಯ ಅಸ್ತ ಘಂ.	ಸೂರ್ಯ ಅಸ್ತ ನಿ.	ಚಂದ್ರ ಉದಯ ಘಂ.	ಚಂದ್ರ ಉದಯ ನಿ.	ಚಂದ್ರ ಉಚ್ಚ ಘಂ.	ಚಂದ್ರ ಉಚ್ಚ ನಿ.	ಚಂದ್ರ ಅಸ್ತ ಘಂ.	ಚಂದ್ರ ಅಸ್ತ ನಿ.
೧	೬	೯	೫	೫೦	೪	೪೪	೧೧	೧೯	೪	೪೯
೨	೬	೯	೫	೫೦	೫	೫೯	ಪ್ರಾತಃ.		೫	೫೫
೩	೬	೧೦	೫	೫೦	೬	೫೭	೧೨	೧೬	೬	೫೪
೪	೬	೧೦	೫	೫೦	೭	೫೮	೧	೧೫	೭	೫೩
೫	೬	೧೧	೫	೫೧	೮	೫೮	೨	೧೫	೮	೫೩
೬	೬	೧೧	೫	೫೧	೯	೫೯	೩	೧೫	೯	೫೩
೭	೬	೧೧	೫	೫೧	೧೦	೫೪	೪	೧೪	೧೦	೫೪
೮	೬	೧೨	೫	೫೧	೧೧	೧೬	೫	೧೪	೧೧	೫೪
೯	೬	೧೨	೫	೫೧	ಪ್ರಾತಃ.		೫	೫೪	ಮಧ್ಯಾಹ್ನ	
೧೦	೬	೧೨	೫	೫೧	೧೧	೧೫	೬	೫೫	೧೧	೫೪
೧೧	೬	೧೪	೫	೫೧	೧೧	೨೬	೭	೫೫	೧೧	೫೪
೧೨	೬	೧೪	೫	೫೧	೧೧	೩೬	೮	೫೫	೧೧	೫೪
೧೩	೬	೧೪	೫	೫೧	೧೧	೪೬	೯	೫೫	೧೧	೫೪
೧೪	೬	೧೪	೫	೫೧	೧೧	೫೬	೧೦	೫೫	೧೧	೫೪
೧೫	೬	೧೪	೫	೫೧	೧೧	೬೬	ಮಧ್ಯಾಹ್ನ		೧೧	೫೪
೧೬	೬	೧೪	೫	೫೧	೧೨	೬	೧	೫೫	೧೧	೫೪
೧೭	೬	೧೪	೫	೫೧	೧೨	೧೬	೨	೫೫	೧೧	೫೪
೧೮	೬	೧೪	೫	೫೧	೧೨	೨೬	೩	೫೫	೧೧	೫೪
೧೯	೬	೧೪	೫	೫೧	೧೨	೩೬	೪	೫೫	೧೧	೫೪
೨೦	೬	೧೪	೫	೫೧	೧೨	೪೬	೫	೫೫	೧೧	೫೪
೨೧	೬	೧೪	೫	೫೧	೧೨	೫೬	೬	೫೫	೧೧	೫೪
೨೨	೬	೧೪	೫	೫೧	೧೨	೬೬	೭	೫೫	೧೧	೫೪
೨೩	೬	೧೪	೫	೫೧	೧೩	೬	೮	೫೫	೧೧	೫೪
೨೪	೬	೧೪	೫	೫೧	೧೩	೧೬	೯	೫೫	೧೧	೫೪
೨೫	೬	೧೪	೫	೫೧	೧೩	೨೬	೧೦	೫೫	೧೧	೫೪
೨೬	೬	೧೪	೫	೫೧	೧೩	೩೬	ಮಧ್ಯಾಹ್ನ		೧೧	೫೪
೨೭	೬	೧೪	೫	೫೧	೧೩	೪೬	೧	೫೫	೧೧	೫೪
೨೮	೬	೧೪	೫	೫೧	೧೩	೫೬	೨	೫೫	೧೧	೫೪
೨೯	೬	೧೪	೫	೫೧	೧೩	೬೬	೩	೫೫	೧೧	೫೪
೩೦	೬	೧೪	೫	೫೧	೧೪	೬	೪	೫೫	೧೧	೫೪
೩೧	೬	೧೪	೫	೫೧	ಪ್ರಾತಃ.		೫	೫೫	೧೧	೫೪

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
ಕುಜ	೧	ಪ್ರಾತಃ. ಘ. ನಿ. ೪ ೫೩	ಹಗಲು ಘ. ನಿ. ೧೦ ೫೪	ಸಾಯಂ ಘ. ನಿ. ೪ ೧೬
	೧೬	೪ ೪೨	೧೦ ೩೪	೪ ೪
	೩೧	೪ ೫೫	೧೦ ೧೪	೩ ೫೩
ಬುಧ	೧	ಪ್ರಾತಃ. ೪ ೫೯	ಹಗಲು ೧೧ ೧೯	ಸಾಯಂ ೪ ೫೯
	೧೬	೫ ೧೦	೧೧ ೪೩	೫ ೨೪
	೩೧	೫ ೪೨	೧೨ ೧೪	೫ ೪೪
ಗುರು	೧	ರಾತ್ರಿ ಘ. ನಿ. ೨ ೨೬	ಪ್ರಾತಃ. ಘ. ನಿ. ೫ ೪೪	ಪ್ರಾತಃ. ಘ. ನಿ. ೧೦ ೨
	೧೬	೧ ೪೪	೫ ೨	೯ ೧೦
	೩೧	೧ ೪೪	೪ ೨೦	೮ ೨೦
ಶುಕ್ರ	೧	ಪ್ರಾತಃ. ಘ. ನಿ. ೨ ೫೩	ಪ್ರಾತಃ. ಘ. ನಿ. ೬ ೪೬	ಮಧ್ಯಾ. ಘ. ನಿ. ೧ ೫೯
	೧೬	೨ ೫೯	೬ ೪೮	೧ ೫೬
	೩೧	೩ ೫೩	೬ ೫೩	೧ ೫೯
ಶನಿ	೧	ಪ್ರಾತಃ. ಘ. ನಿ. ೩ ೫೯	ಪ್ರಾತಃ. ಘ. ನಿ. ೭ ೪೬	ಮಧ್ಯಾ. ಘ. ನಿ. ೨ ೫೩
	೧೬	೩ ೫೩	೭ ೪೦	೨ ೪೭
	೩೧	೩ ೪೬	೭ ೩೩	೨ ೪೦

೧೮೯೫ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೯೫ನೇ ವರ್ಷದ ಆದಿಯಲ್ಲಿ ಚಿತ್ರಾ ನಕ್ಷತ್ರದ ಅಯನಾಂಶವು ಸೂರ್ಯಸಿದ್ಧಾಂತ ಪ್ರಕಾರ ಭಾಗ ೨೨ ಕಲೆ ೨೨ ವಿಕಲೆ ೫೩.೨ ಎಂದೂ, ವರ್ಷದ ಅಂತ್ಯದಲ್ಲಿ ಭಾಗ ೨೨ ಕಲೆ ೨೩ ವಿಕಲೆ ೪೩.೪ ಎಂದೂ ಗಣಿಸಲ್ಪಟ್ಟಿದೆ.

ಮಹಾನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ಮಧ್ಯಾನ್ಹ	೧	ಪುಷ್ಯಾ	ಜುಲಾಯಿ	೧೮	ಸಾಯಂ.	೪
ಶ್ರವಣಾ	"	೨೨	"	೨	ಆಶ್ಲೇಷಾ	ಆಗೊಸ್ತು	೧	ಮಧ್ಯಾನ್ಹ	೩
ಧನಿಷ್ಠಾ	ಫೆಬ್ರುವರಿ	೪	ಸಾಯಂ.	೩	ಮಘಾ	"	೧೫	"	೧
ಶತಭಿಷಾ	"	೧೭	ರಾತ್ರಿ	೧೧	ಹುಬ್ಬಾ	"	೨೯	ಪ್ರಾತಃ.	೯
ಪೂರ್ವಾಭಾ.	ಮಾರ್ಚಿ	೩	ಪ್ರಾತಃ.	೬	ಉತ್ತರಾ	ಸಪ್ತಂಬರ	೧೨	"	೩
ಉತ್ತರಾಭಾ.	"	೧೬	ಮಧ್ಯಾನ್ಹ	೨	ಹಸ್ತಾ	"	೨೫	ಸಾಯಂ.	೬II
ರೇವತೀ	"	೨೯	ರಾತ್ರಿ	೧	ಚಿತ್ರಾ	ಒಕ್ತೋಬರ	೯	ರಾತ್ರಿ	೧೧II
ಅಶ್ವಿನೀ	ಎಪ್ರಿಲ್	೧೨	ಹಗಲು	೨II	ಸ್ವಾತೀ	"	೨೨	ಸಾಯಂ.	೬II
ಭರಣೀ	"	೨೬	ಪ್ರಾತಃ.	೬	ವಿಶಾಖಾ	ನವಂಬರ	೪	ರಾತ್ರಿ	೨
ಕೃತ್ತಿಕಾ	ಮೇ	೯	ಮಧ್ಯರಾತ್ರಿ	೧	ಅನುರಾಧಾ	"	೧೯	ಪ್ರಾತಃ.	೯
ರೋಹಿಣೀ	"	೨೩	ರಾತ್ರಿ	೯	ಜ್ಯೇಷ್ಠಾ	ದಶಂಬರ	೧	ಹಗಲು	೧
ಮೃಗತಿರಾ	ಜೂನ್	೬	ಸಾಯಂ.	೨	ಮೂಲಾ	"	೧೪	"	೩II
ಆರ್ದ್ರಾ	"	೨೦	"	೫	ಪೂರ್ವಾಷಾ.	"	೨೭	ಸಾಯಂ.	೫
ಪುನರ್ವಸೂ	ಜುಲಾಯಿ	೪	"	೫					

ದೃಕ್ಸಿದ್ಧಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ತಿಂಗಳು	ತಾರೀಖು	ವಾರ	ಘಳಿಗೆ ವಿಘಳಿಗೆ	ರಾಶಿ	ತಿಂಗಳು	ತಾರೀಖು	ವಾರ	ಘಳಿಗೆ ವಿಘಳಿಗೆ	ರಾಶಿ
ಜನವರಿ	೧೨	ಶನಿವಾರ	೩೩-೩೬	ಮಕರ	ಜುಲಾಯಿ	೧೪	ಆದಿತ್ಯವಾರ	೫೭-೪೩	ಕರ್ಕಾಟ
ಫೆಬ್ರುವರಿ	೧೧	ಚಂದ್ರವಾರ	೬- ೯	ಕುಂಭ	ಆಗೊಸ್ತು	೧೫	ಗುರುವಾರ	೧೪- ೩	ಸಿಂಹ
ಮಾರ್ಚಿ	೧೨	ಮಂಗಳವಾರ	೫೯- ೨	ಮೀನ	ಸಪ್ತಂಬರ	೧೫	ಆದಿತ್ಯವಾರ	೧೪- ೯	ಕನ್ಯಾ
ಎಪ್ರಿಲ್	೧೨	ಶುಕ್ರವಾರ	೨೧-೧೭	ಮೇಷ	ಒಕ್ತೋಬರ	೧೫	ಮಂಗಳವಾರ	೪೭-೫೬	ತುಲಾ
ಮೇ	೧೩	ಚಂದ್ರವಾರ	೧೪-೧೭	ವೃಷಭ	ನವಂಬರ	೧೪	ಗುರುವಾರ	೪೬-೪೯	ವೃಶ್ಚಿಕ
ಜೂನ್	೧೩	ಗುರುವಾರ	೫೧- ೦	ಮಿಥುನ	ದಶಂಬರ	೧೪	ಶನಿವಾರ	೨೨-೫೨	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಚಂದ್ರನು ಭೂಮಿಗೆ ಸಮೀಪ (Perigee) ಮತ್ತು ದೂರ (Apogee) ಇರುವ ಸಮಯ ತಿಳಿಯಲಿಕ್ಕೆ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೧೨	ಪ್ರಾತಃಕಾಲ	೫	ಜನವರಿ	೨೬	ರಾತ್ರಿ	೧೦
ಫೆಬ್ರುವರಿ	೯	ಸಾಯಂಕಾಲ	೭	ಫೆಬ್ರುವರಿ	೨೩	ಮಧ್ಯರಾತ್ರಿ	೧೨
ಮಾರ್ಚಿ	೧೦	ಪ್ರಾತಃಕಾಲ	೫	ಮಾರ್ಚಿ	೨೨	ಹಗಲು	೧೨
ಎಪ್ರಿಲ್	೭	"	೧೦	ಎಪ್ರಿಲ್	೧೯	ಪ್ರಾತಃಕಾಲ	೬
ಮೇ	೪	ಹಗಲು	೩	ಮೇ	೧೭	ರಾತ್ರಿ	೧
"	೨೯	"	೪	ಜೂನ್	೧೩	ಸಾಯಂಕಾಲ	೭
ಜೂನ್	೨೫	"	೪	ಜುಲಾಯಿ	೧೧	ಮಧ್ಯಾನ್ಹ	೧೨
ಜುಲಾಯಿ	೨೩	ಸಾಯಂಕಾಲ	೫	ಆಗೊಸ್ತು	೭	ಮಧ್ಯರಾತ್ರಿ	೧೨
ಆಗೊಸ್ತು	೨೧	ಪ್ರಾತಃಕಾಲ	೨	ಸಪ್ತಂಬರ	೪	ಪ್ರಾತಃಕಾಲ	೫
ಸಪ್ತಂಬರ	೧೮	ಮಧ್ಯಾನ್ಹ	೧೨	ಒಕ್ತೋಬರ	೧	"	೭
ಒಕ್ತೋಬರ	೧೮	ರಾತ್ರಿ	೯	"	೨೮	ರಾತ್ರಿ	೯
ನವಂಬರ	೧೫	"	೯	ನವಂಬರ	೨೫	ಸಾಯಂಕಾಲ	೪
ದಶಂಬರ	೯	"	೯	ದಶಂಬರ	೨೩	ಮಧ್ಯಾನ್ಹ	೧

೧೮೯೫ನೇ ವರ್ಷದಲ್ಲಿ ಕುಜಾದಿ ಗ್ರಹಗಳ ರಾತಿಪ್ರವೇಶಕಾಲಗಳು.

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾತಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜನಿಂದ	ಜನವರಿ	೧	ಫೆಬ್ರವರಿ	೧೫	ರಾತ್ರಿ	೧೨	೨೨	ಮೀನದಲ್ಲಿ
	ಫೆಬ್ರವರಿ	೧೫	ಎಪ್ರಿಲ್	೯	ಪ್ರಾತಃಕಾಲ	೧	೫೯	ವೃಷಭ
	ಎಪ್ರಿಲ್	೯	ಮೇ	೨೯	〃	೩	೫೩	ಮಿಥುನ
	ಮೇ	೨೯	ಜುಲಾಯಿ	೧೬	ಸಾಯಂಕಾಲ	೬	೨೨	ಕರ್ಕಾಟಕ
	ಜುಲಾಯಿ	೧೬	ಸಪ್ತಂಬರ	೨	ಪ್ರಾತಃಕಾಲ	೬	೧೦	ಸಿಂಹ
	ಸಪ್ತಂಬರ	೨	ಒಕ್ತೋಬರ	೧೯	〃	೫	೨೬	ಕನ್ಯೆ
	ಒಕ್ತೋಬರ	೧೯	ದಶಂಬರ	೧	ಹಗಲು	೧೧	೫೯	ತುಲಾ
	ದಶಂಬರ	೧	〃	೩೧	ರಾತ್ರಿ	೧೨	೦	ವೃಶ್ಚಿಕ
Mercury ಬುಧನಿಂದ	ಜನವರಿ	೧	ಜನವರಿ	೧೨	ರಾತ್ರಿ	೧೦	೧೬	ಧನುವಿನಲ್ಲಿ
	〃	೧೨	〃	೨೯	ಹಗಲು	೧೧	೨೦	ಮಕರ
	〃	೨೯	ಎಪ್ರಿಲ್	೬	ಸಾಯಂಕಾಲ	೬	೪	ಕುಂಭ
	ಎಪ್ರಿಲ್	೬	〃	೨೪	ಮಧ್ಯಾನ್ಹ	೧	೧೩	ಮೀನ
	〃	೨೪	ಮೇ	೮	ರಾತ್ರಿ	೯	೫೯	ಮೇಷ
	ಮೇ	೮	〃	೨೪	ಪ್ರಾತಃಕಾಲ	೬	೪೨	ವೃಷಭ
	〃	೨೪	ಅಗೊಸ್ತು	೧	〃	೧೧	೬	ಮಿಥುನ
	ಅಗೊಸ್ತು	೧	〃	೧೫	ರಾತ್ರಿ	೬	೧	ಕರ್ಕಾಟಕ
	〃	೧೫	ಸಪ್ತಂಬರ	೧	〃	೯	೫೨	ಸಿಂಹ
	ಸಪ್ತಂಬರ	೧	〃	೨೧	〃	೯	೨೬	ಕನ್ಯಾ
	〃	೨೧	ನವಂಬರ	೨೬	ಮಧ್ಯಾನ್ಹ	೩	೧೨	ತುಲಾ
	ನವಂಬರ	೨೬	ದಶಂಬರ	೧೬	ಸಾಯಂಕಾಲ	೬	೪೦	ವೃಶ್ಚಿಕ
	ದಶಂಬರ	೧೬	〃	೩೧	ರಾತ್ರಿ	೧೨	೦	ಧನು
Jupiter ಗುರುನಿಂದ	ಜನವರಿ	೧	ಜುಲಾಯಿ	೨೯	ಸಾಯಂಕಾಲ	೪	೨೨	ಮಿಥುನದಲ್ಲಿ
	ಜುಲಾಯಿ	೨೯	ದಶಂಬರ	೩೧	ರಾತ್ರಿ	೧೨	೦	ಕರ್ಕಾಟಕ
Venus ಶುಕ್ರನಿಂದ	ಜನವರಿ	೧	ಜನವರಿ	೪	ಮಧ್ಯಾನ್ಹ	೩	೨೦	ಧನುವಿನಲ್ಲಿ
	〃	೪	〃	೨೮	〃	೧	೯	ಮಕರ
	〃	೨೮	ಫೆಬ್ರವರಿ	೨೧	〃	೨	೪	ಕುಂಭ
	ಫೆಬ್ರವರಿ	೨೧	ಮಾರ್ಚಿ	೧೩	ಸಾಯಂಕಾಲ	೬	೪೫	ಮೀನ
	ಮಾರ್ಚಿ	೧೩	ಎಪ್ರಿಲ್	೧೦	ಮಧ್ಯಾನ್ಹ	೧೨	೯	ಮೇಷ
	ಎಪ್ರಿಲ್	೧೦	ಮೇ	೬	ಸಾಯಂಕಾಲ	೪	೩೦	ವೃಷಭ
	ಮೇ	೬	ಜೂನ್	೧	〃	೫	೧೪	ಮಿಥುನ
	ಜೂನ್	೧	〃	೨೯	ಪ್ರಾತಃಕಾಲ	೧೦	೩೬	ಕರ್ಕಾಟಕ
	〃	೨೯	ಅಗೊಸ್ತು	೧	〃	೬	೬	ಸಿಂಹ
	ಅಗೊಸ್ತು	೧	ಸಪ್ತಂಬರ	೨೫	ರಾತ್ರಿ	೧೨	೧೦	ಕನ್ಯಾ
	ಸಪ್ತಂಬರ	೨೫	ಒಕ್ತೋಬರ	೨೬	ಪ್ರಾತಃಕಾಲ	೪	೪೦	ಸಿಂಹದಲ್ಲಿ ವಕ್ರ
	ಒಕ್ತೋಬರ	೨೬	ದಶಂಬರ	೧	ಮಧ್ಯಾನ್ಹ	೨	೧೦	ಕನ್ಯಾ
	ದಶಂಬರ	೧	〃	೨೨	ರಾತ್ರಿ	೧೧	೪೩	ತುಲಾ
	〃	೨೨	〃	೩೧	〃	೧೨	೦	ವೃಶ್ಚಿಕ
Saturn ಶನಿನಿಂದ	ಜನವರಿ	೧	ದಶಂಬರ	೩೧	ರಾತ್ರಿ	೧೨	೦	ಸದಾ ತುಲಾದಲ್ಲಿ
Moon's ascending node ರಾಹುನಿಂದ	ಜನವರಿ	೧	ಮಾರ್ಚಿ	೧೦	ರಾತ್ರಿ	೯	೨೦	ಮೀನ
	ಮಾರ್ಚಿ	೧೦	ದಶಂಬರ	೩೧	〃	೧೨	೦	ಕುಂಭ

೧೮೯೫ನೇ ವರ್ಷದ ಗ್ರಹಣಗಳು.

ಈ ವರ್ಷದಲ್ಲಿ ಸೂರ್ಯಗೆ ಮೂರು ಪಾರ್ಶ್ವಗ್ರಹಣಗಳೂ ಚಂದ್ರಗೆ ಎರಡು ಪೂರ್ಣಗ್ರಹಣಗಳೂ (ಇವೆರಡೂ ಅಮೇರಿಕಕ್ಕೆ) ಹೀಗೆ ಐದು ಗ್ರಹಣಗಳು ಇರುತ್ತವೆ. ಅವುಗಳಲ್ಲಿ ಯಾವದೊಂದೂ ಮಂಗಳೂರಿಗೆ ಗೋಚರವಲ್ಲವಾದ ಕಾರಣ ಅವುಗಳನ್ನು ವರ್ಣಿಸಲಿಲ್ಲ.

ಗುರು ಶುಕ್ರರ ಅಸ್ತೋದಯಗಳು.

ಗುರುವಿನ ಅಸ್ತ ಜೂನ್ ತಾರೀಕು ೨೫ನೇ ಸಾಯಂಕಾಲ ಘಂಟೆ ೬ ನಿಮಿಷ ೨೯ಕ್ಕೆ ಆರಂಭ ಪಶ್ಚಾದಸ್ತ. ಜುಲಾಯಿ ೨೬ನೇ ಪ್ರಾತಃಕಾಲ ಘಂಟೆ ೫ ನಿಮಿಷ ೨೯ಕ್ಕೆ ಪ್ರಾಗುದಯ. ಗುರು ಸೂರ್ಯರ ಸಮಾಗಮವೆಂಬ ಗುರುಗಾಢಾಸ್ತವು ಜುಲಾಯಿ ೧೦ನೇ ಸಾಯಂಕಾಲ ಘಂಟೆ ೫ ನಿಮಿಷ ೫೯ಕ್ಕೆ ಆಗುತ್ತದೆ.

ಶುಕ್ರನ ಅಸ್ತ ಸಪ್ತಂಬರ ತಾರೀಕು ೧೧ನೇಯಿಂದ ಸಪ್ತಂಬರ ತಾರೀಕು ೨೨ನೇ ವರೆಗೆ ೧೨ ದಿನ ಶುಕ್ರನ ಅಸ್ತ, ಸೂರ್ಯಾಧೋಭಾಗದಲ್ಲಿ ಅಸ್ತ; ಗಾಢಾಸ್ತಕಾಲವು ಸಪ್ತಂಬರ ೧೯ನೇ ಮಧ್ಯಾನ್ಹ ಘಂಟೆ ೧೨ ನಿಮಿಷ ೧೫ಕ್ಕೆ ಆಗುತ್ತದೆ. ಶುಕ್ರವು ಪ್ರಾಗಸ್ತ ಪಶ್ಚಾದುದಯವಾಗುತ್ತದೆ.

೧೮೯೫ನೇ ಖಗೋಲದ ವಿಚಿತ್ರಗಳು.

ಈ ವರ್ಷ ಮಂಗಳೂರಿಗೆ ತೋರುವ ಗ್ರಹಣಗಳು ಇಲ್ಲದ ಕಾರಣ ವಾಚಕರು ಅವುಗಳಿಗೆ ಬದಲಾಗಿ ಓದಿ ಸಂತೋಷ ಪಡುವಂತೆ ಗ್ರಹಸಮಾಗಮಗಳನ್ನು ಕೊಡುತ್ತೇವೆ. ಸಮಾಗಮವೆಂದರೆ—ಎರಡು ಗ್ರಹರು ತುಲ್ಯಸ್ಫುಟವಾಗುವ ಸಮಯ, ಮತ್ತು ಯಾವ ಗ್ರಹ ಉತ್ತರಕ್ಕೆ ಇರುವದೆಂದೂ ಎಷ್ಟು ಭಾಗ ಪ್ರಮಾಣದಲ್ಲಿರುವದೆಂದೂ ತಿಳಕೊಳ್ಳಲಿಕ್ಕೆ ಇರುವ ಖಗೋಲಸ್ಥಿತಿಯು. ನಮ್ಮ ವಂಚಾಂಗದಲ್ಲಿ ಈ ವರ್ಷದಿಂದ ಮುಂದೆ ಗ್ರಹಸಮಾಗಮಗಳನ್ನು ಕೂಡಾ ಈಶ್ವರಾನುಗ್ರಹದಿಂದ ಕೊಡುತ್ತಾ ಬರುವೆವು. ಯಾಕಂದರೆ ಇವುಗಳ ಆಧಾರದಿಂದ ವಂಚಾಂಗದ ಸ್ಥಿತಿಯು ಗೊತ್ತಿಗೆ ಬರುತ್ತದೆ. ಆಗ ಇತರ ವಂಚಾಂಗಗಳಿಗೂ ಇದಕ್ಕೂ ಇರುವ ತಾರತಮ್ಯವನ್ನು ವಾಚಕರೇ ತಿಳಿಯ ಬಹುದು.

			ಘ.	ನಿ.				
ಜನವರಿ	೫	ಮಧ್ಯರಾತ್ರಿ	೧	೪	ಚಂದ್ರ ಕುಜ ಸಮಾಗಮ	ಕುಜ	೨I	ಭಾಗೆ ದಕ್ಷಿಣ.
,,	,,	,,	೧	೧೦	ಚಂದ್ರ ಗುರು ,,	ಗುರು	೫I	,, ,,
,,	೧೦	ಪ್ರಾತಃಕಾಲ	೯	೦	ಬುಧ ಉಚ್ಚ ಗಾಢಾಸ್ತ			
,,	೧೯	ಮಧ್ಯರಾತ್ರಿ	೧೨	೧೦	ಚಂದ್ರ ಶನಿ ಸಮಾಗಮ	ಶನಿ	೬II	,, ಉತ್ತರ.
,,	೨೦	ಮಧ್ಯಾನ್ಹ	೧೨	೦	ಸ್ಫುಟಸಾಯನ ರವಿ ಕುಂಭದಲ್ಲಿ ಪ್ರವೇಶ.			
,,	೨೬	ಮಧ್ಯರಾತ್ರಿ	೨	೫೩	ಚಂದ್ರ ಬುಧ ಸಮಾಗಮ	ಬುಧ	೧I	ಉತ್ತರ.
,,	೨೭	ಪ್ರಾತಃಕಾಲ	೬	೫೯	ಚಂದ್ರ ಶುಕ್ರ ,,	ಶುಕ್ರ	೧I	,,
ಫೆಬ್ರುವರಿ	೧	ಸಾಯಂಕಾಲ	೧	೦	ಬುಧ ಶುಕ್ರ ,,	ಬುಧ	೦II	,,
,,	೩	ಪ್ರಾತಃಕಾಲ	೯	೪೯	ಚಂದ್ರ ಕುಜ ,,	ಕುಜ	೩	ಭಾಗೆ ದಕ್ಷಿಣ.
,,	೬	,,	೬	೬	ಚಂದ್ರ ಗುರು ,,	ಗುರು	೫I	,, ,,
,,	೧೦	ಸಾಯಂಕಾಲ	೬	೦	ಬುಧ ಶುಕ್ರ ,,	ಬುಧ	೨III	,, ಉತ್ತರ.
,,	೧೫	ಪ್ರಾತಃಕಾಲ	೮	೪೪	ಚಂದ್ರ ಶನಿ ,,	ಶನಿ	೬III	,, ,,
,,	೧೯	ರಾತ್ರಿ	೨	೦	ಸ್ಫುಟಸಾಯನ ರವಿ ಮೀನದಲ್ಲಿ ಪ್ರವೇಶ.			
,,	೨೪	ಸಾಯಂಕಾಲ	೯	೧೦	ಚಂದ್ರ ಬುಧ ಸಮಾಗಮ	ಬುಧ	೫III	ಉತ್ತರ.
,,	೨೫	ಮಧ್ಯಾನ್ಹ	೧೨	೦	ಬುಧ ನೀಚಗಾಢಾಸ್ತ.			
,,	೨೬	ರಾತ್ರಿ	೯	೨೭	ಚಂದ್ರ ಶುಕ್ರ ಸಮಾಗಮ	ಶುಕ್ರ	೨	ದಕ್ಷಿಣ.
ಮಾರ್ಚಿ	೩	ಪ್ರಾತಃಕಾಲ	೮	೩	ಚಂದ್ರ ಕುಜ ,,	ಕುಜ	೩II	,,
,,	೫	ಸಾಯಂಕಾಲ	೪	೧೨	ಚಂದ್ರ ಗುರು ,,	ಗುರು	೫I	,,

			ಘ.	ನಿ.				
ಮಾರ್ಚಿ	೧೪	ಸಾಯಂಕಾಲ	೫	೧೦	ಚಂದ್ರ ಶನಿ	ಸಮಾಗಮ ಶನಿ	೭	ಭಾಗೆ ಉತ್ತರ.
,,	೨೦	ರಾತ್ರಿ	೨	೦	ಸ್ಫುಟಸಾಯನ ರವಿ ಮೇಷದಲ್ಲಿ ಪ್ರವೇಶ.			
,,	೨೩	,,	೨	೫೨	ಚಂದ್ರ ಬುಧ	ಸಮಾಗಮ ಬುಧ	೦೧೦	ಉತ್ತರ.
,,	೨೪	,,	೪	೫೪	ಚಂದ್ರ ಶುಕ್ರ	,,	ಶುಕ್ರ ೪	ದಕ್ಷಿಣ.
ಏಪ್ರಿಲ್	೧	ಪ್ರಾತಃಕಾಲ	೬	೫೫	ಚಂದ್ರ ಕುಜ	,,	ಕುಜ ೫III	,,
,,	,,	ರಾತ್ರಿ	೨	೧೦	ಚಂದ್ರ ಗುರು	,,	ಗುರು ೫I	,,
,,	೧೦	,,	೧೨	೪೨	ಚಂದ್ರ ಶನಿ	,,	ಶನಿ ೬III	ಉತ್ತರ.
,,	೧೯	ಮಧ್ಯಾನ್ಹ	೨	೦	ಸ್ಫುಟಸಾಯನ ರವಿ ವೃಷಭದಲ್ಲಿ ಪ್ರವೇಶ.			
,,	೨೪	ಪ್ರಾತಃಕಾಲ	೯	೪೯	ಚಂದ್ರ ಬುಧ	ಸಮಾಗಮ ಬುಧ	೪III	ದಕ್ಷಿಣ.
,,	,,	ಮಧ್ಯಾನ್ಹ	೩	೦	ರವಿ ಶನಿ ವರಸ್ವರ ಶನಿಯ ಉಂಗುರ ತೋರುವಪು.			
,,	೨೭	ಪ್ರಾತಃಕಾಲ	೭	೦	ಕುಜ ಗುರು	ಸಮಾಗಮ ಕುಜ	೧II	ಭಾಗೆ ಉತ್ತರ.
,,	೨೮	ರಾತ್ರಿ	೩	೦	ಚಂದ್ರ ಶುಕ್ರ	,,	ಶುಕ್ರ ೩III	,,
,,	೨೯	ಮಧ್ಯಾನ್ಹ	೨	೨೩	ಚಂದ್ರ ಗುರು	,,	ಗುರು ೫	ದಕ್ಷಿಣ.
,,	,,	ಸಾಯಂಕಾಲ	೪	೫೭	ಚಂದ್ರ ಕುಜ	,,	ಕುಜ ೩II	,,
ಮೇ	೫	ಪ್ರಾತಃಕಾಲ	೫	೦	ಬುಧ ಉಚ್ಚ ಗಾಥಾಸ್ತ.			
,,	೯	,,	೬	೫೫	ಚಂದ್ರ ಶನಿ	ಸಮಾಗಮ ಶನಿ	೬III	ಭಾಗೆ ಉತ್ತರ.
,,	೧೪	ರಾತ್ರಿ	೯	೦	ಗುರು ಶುಕ್ರ	,,	ಗುರು ೨	ದಕ್ಷಿಣ.
,,	೨೧	ಹಗಲು	೨	೦	ಸ್ಫುಟಸಾಯನ ರವಿ ಮಿಥುನದಲ್ಲಿ ಪ್ರವೇಶ.			
,,	೨೬	ಪ್ರಾತಃಕಾಲ	೯	೪೪	ಚಂದ್ರ ಬುಧ	ಸಮಾಗಮ ಬುಧ	೨III	ದಕ್ಷಿಣ.
,,	೨೭	,,	೫	೪೨	ಚಂದ್ರ ಗುರು	,,	ಗುರು ೪III	,,
,,	೨೭	ಸಾಯಂಕಾಲ	೯	೦	ಚಂದ್ರ ಶುಕ್ರ	,,	ಶುಕ್ರ ೨I	ಭಾಗೆ ದಕ್ಷಿಣ.
,,	೨೯	ಪ್ರಾತಃಕಾಲ	೪	೦	ಚಂದ್ರ ಕುಜ	,,	ಕುಜ ೫	,, ,,
ಜೂನ್	೪	,,	೧೦	೫೯	ಚಂದ್ರ ಶನಿ	,,	ಶನಿ ೬III	,, ಉತ್ತರ.
,,	೫	ಮಧ್ಯಾನ್ಹ	೩	೦	ಶುಕ್ರ ಕುಜ	,,	ಶುಕ್ರ ೧	,, ,,
,,	೯	ರಾತ್ರಿ	೯	೦	ಬುಧ ಗುರು	,,	ಬುಧ III	,, ,,
,,	೧೧	,,	೧೦	೦	ಸ್ಫುಟಸಾಯನ ರವಿ ಕರ್ಕಾಟಕದಲ್ಲಿ ಪ್ರವೇಶ.			
,,	೧೨	ಪ್ರಾತಃಕಾಲ	೭	೦	ಬುಧ ಗುರು	ಸಮಾಗಮ ಬುಧ	೨II	ಭಾಗೆ ದಕ್ಷಿಣ.
,,	೧೩	ರಾತ್ರಿ	೧೦	೧೪	ಚಂದ್ರ ಬುಧ	,,	,, ೭II	,, ,,
,,	,,	,,	೧೧	೪೩	ಚಂದ್ರ ಗುರು	,,	ಗುರು ೪I	,, ,,
,,	೧೫	ಸಾಯಂಕಾಲ	೪	೧೭	ಚಂದ್ರ ಕುಜ	,,	ಕುಜ ೧III	,, ,,
,,	೧೬	ಪ್ರಾತಃಕಾಲ	೯	೧೧	ಚಂದ್ರ ಶುಕ್ರ	,,	ಶುಕ್ರ ೦II೦	,, ,,
ಜುಲಾಯಿ	೧	ಹಗಲು	೩	೨೪	ಚಂದ್ರ ಶನಿ	,,	ಶನಿ ೬III	,, ಉತ್ತರ.
,,	,,	ಸಾಯಂಕಾಲ	೭	೦	ಬುಧ ನೀಚ ಗಾಥಾಸ್ತ.			
,,	೧೦	,,	೫	೫೯	ಗುರು ಗಾಥಾಸ್ತ.			
,,	೨೦	ರಾತ್ರಿ	೧೧	೩೪	ಚಂದ್ರ ಬುಧ	,,	ಬುಧ ೭II	ಭಾಗೆ ದಕ್ಷಿಣ.
,,	೨೧	ಸಾಯಂಕಾಲ	೭	೩೪	ಚಂದ್ರ ಗುರು	,,	ಗುರು ೪	,, ,,
,,	೨೩	ಪ್ರಾತಃಕಾಲ	೯	೦	ಸ್ಫುಟಸಾಯನ ರವಿ ಸಿಂಹದಲ್ಲಿ ಪ್ರವೇಶ.			
,,	೨೪	,,	೬	೪೨	ಚಂದ್ರ ಕುಜ	ಸಮಾಗಮ ಕುಜ	೦II೦	ಭಾಗೆ ದಕ್ಷಿಣ.
,,	೨೫	ಮಧ್ಯಾನ್ಹ	೨	೫೦	ಚಂದ್ರ ಶುಕ್ರ	,,	ಶುಕ್ರ ೦III೦	,, ,,
,,	೨೮	ರಾತ್ರಿ	೯	೫೬	ಚಂದ್ರ ಶನಿ	,,	ಶನಿ ೬III	,, ಉತ್ತರ.
ಆಗೊಸ್ತು	೧	,,	೧೦	೦	ಗುರು ಬುಧ	,,	ಬುಧ ೦೧೦	,, ದಕ್ಷಿಣ.
,,	೧೨	,,	೧೨	೦	ಬುಧ ಉಚ್ಚ ಗಾಥಾಸ್ತ.			
,,	೧೪	ಹಗಲು	೩	೪೪	ಚಂದ್ರ ಗುರು	ಸಮಾಗಮ ಗುರು	೩III	ಭಾಗೆ ದಕ್ಷಿಣ.
,,	೨೦	ರಾತ್ರಿ	೧೧	೨೩	ಚಂದ್ರ ಬುಧ	,,	ಬುಧ ೦III	,, ಉತ್ತರ.
,,	೨೧	,,	೧೦	೪೪	ಚಂದ್ರ ಕುಜ	,,	ಕುಜ ೧೦	,, ,,

ದೇವರು ಹಗಲಾಳುವದಕ್ಕೆ ದೊಡ್ಡ ಬೆಳಕನ್ನೂ, ರಾತ್ರಿ ಆಳುವದಕ್ಕೆ ಸಣ್ಣ ಬೆಳಕನ್ನೂ ನಕ್ಷತ್ರಗಳನ್ನೂ ಉಂಟು ಮಾಡಿದನು. ಉತ್ಪ. ೧, ೧೬.

			ಘ.	ನಿ.	
ಆಗೊಸ್ತು	೨೨	ರಾತ್ರಿ	೧೨	೩೯	ಚಂದ್ರ ಶುಕ್ರ ಸಮಾಗಮ ಶುಕ್ರ ೪ ಭಾಗೆ ದಕ್ಷಿಣ.
"	೨೩	ಹಗಲು	೩	೦	ಸ್ಫುಟಸಾಯನ ರವಿ ಕನ್ಯೆಯಲ್ಲಿ ಪ್ರವೇಶ.
"	೨೫	ಪ್ರಾತಃಕಾಲ	೯	೦	ಚಂದ್ರ ಶನಿ ಸಮಾಗಮ ಶನಿ ೩ ಭಾಗೆ ಉತ್ತರ.
ಸಪ್ತಂಬರ	೧	ಸಾಯಂಕಾಲ	೪	೦	ಬುಧ ಕುಜ " ಬುಧ ೧ ಲಿಪ್ತಿ ದಕ್ಷಿಣ.
"	೫	ರಾತ್ರಿ	೩	೦	ಬುಧ ಶುಕ್ರ " " ೧೦ ಭಾಗೆ ಉತ್ತರ.
"	೧೦	ಪ್ರಾತಃಕಾಲ	೪	೦	ಶುಕ್ರ ಕುಜ " ಶುಕ್ರ ೧೦ " ದಕ್ಷಿಣ.
"	೧೫	"	೧೦	೩೦	ಚಂದ್ರ ಗುರು " ಗುರು ೩1 " "
"	೧೯	ರಾತ್ರಿ	೯	೪೯	ಚಂದ್ರ ಶುಕ್ರ " ಶುಕ್ರ ೪11 " "
"	೧೯	ಹಗಲು	೧೨	೧	ಶುಕ್ರ ನೀಚ ಗಾಥಾಸ್ತ.
"	"	ಸಾಯಂಕಾಲ	೪	೫	ಚಂದ್ರ ಕುಜ ಸಮಾಗಮ ಕುಜ ೩ ಭಾಗೆ ಉತ್ತರ.
"	೨೧	ರಾತ್ರಿ	೯	೩೧	ಚಂದ್ರ ಶನಿ " ಶನಿ ೩ " "
"	೨೩	ಮಧ್ಯಾಹ್ನ	೧೨	೦	ಸ್ಫುಟಸಾಯನ ರವಿ ತುಲಾದಲ್ಲಿ ಪ್ರವೇಶ.
ಒಕ್ತೋಬರ	೨	ರಾತ್ರಿ	೧೨	೦	ಬುಧ ತನಿ ಸಮಾಗಮ ಬುಧ ೫111 ಭಾಗೆ ದಕ್ಷಿಣ.
"	೧೧	ಹಗಲು	೨	೦	ಕುಜ ಗಾಥಾಸ್ತ.
"	೧೨	ಮಧ್ಯರಾತ್ರಿ	೧	೪೪	ಚಂದ್ರ ಗುರು ಸಮಾಗಮ ಗುರು ೨111 ದಕ್ಷಿಣ.
"	೧೫	ರಾತ್ರಿ	೧೦	೨೦	ಚಂದ್ರ ಶುಕ್ರ " ಶುಕ್ರ ೪ "
"	೧೯	ಹಗಲು	೧೦	೨	ಚಂದ್ರ ಕುಜ " ಕುಜ ೪1 ಉತ್ತರ.
"	"	ಸಾಯಂಕಾಲ	೬	೦	ಬುಧ ತನಿ " ಬುಧ ೫1 ದಕ್ಷಿಣ.
"	೧೯	ಮಧ್ಯಾಹ್ನ	೧೨	೧೪	ಚಂದ್ರ ಬುಧ " ಬುಧ ೧111 ಉತ್ತರ.
"	"	"	೧	೦	ಚಂದ್ರ ತನಿ " ತನಿ ೩ "
"	೨೩	ರಾತ್ರಿ	೯	೦	ಸ್ಫುಟಸಾಯನ ರವಿ ವೃಶ್ಚಿಕದಲ್ಲಿ ಪ್ರವೇಶ.
"	೨೫	"	೫	೦	ಬುಧ ನೀಚ ಗಾಥಾಸ್ತ.
"	೨೯	ಹಗಲು	೧	೦	ಬುಧ ಕುಜ ಸಮಾಗಮ ಬುಧ 110 ಭಾಗೆ ದಕ್ಷಿಣ.
ನವಂಬರ	೨	ರಾತ್ರಿ	೯	೦	ತನಿ ಗಾಥಾಸ್ತ.
"	೯	ಹಗಲು	೧೨	೧೦	ಚಂದ್ರ ಗುರು ಸಮಾಗಮ ಗುರು ೨1 ದಕ್ಷಿಣ.
"	೧೩	"	೨	೪೩	ಚಂದ್ರ ಶುಕ್ರ " ಶುಕ್ರ ೫1 ಉತ್ತರ.
"	೧೫	ಸಾಯಂಕಾಲ	೫	೨೧	ಚಂದ್ರ ಬುಧ " ಬುಧ ೬111 "
"	೧೭	ಪ್ರಾತಃಕಾಲ	೪	೫	ಚಂದ್ರ ಕುಜ " ಕುಜ ೫ "
"	"	"	೪	೪೩	ಚಂದ್ರ ತನಿ " ತನಿ ೩ "
"	"	ರಾತ್ರಿ	೧೦	೦	ಕುಜ ತನಿ " ತನಿ ೨ "
"	"	"	೧೦	೦	ಕುಜ ಸ್ವಾತೀಯೋಗ ಕುಜ ೬ ಲಿಪ್ತಿ ಮಾತ್ರ ದಕ್ಷಿಣ.
"	೨೧	ಪ್ರಾತಃಕಾಲ	೩	೦	ಬುಧ ತನಿ ಸಮಾಗಮ ಬುಧ ೦11 ಭಾಗೆ ದಕ್ಷಿಣ.
"	೨೨	ಸಾಯಂಕಾಲ	೬	೦	ಸ್ಫುಟಸಾಯನ ರವಿ ಧನು ಪ್ರವೇಶವು.
"	೨೪	ಪ್ರಾತಃಕಾಲ	೬	೦	ಕುಜ ಬುಧ ಸಮಾಗಮ ಕುಜ ೧1 ಭಾಗೆ ದಕ್ಷಿಣ.
ದಶಂಬರ	೬	ಸಾಯಂಕಾಲ	೬	೧೧	ಚಂದ್ರ ಗುರು " ಗುರು ೨ " "
"	೧೨	ಮಧ್ಯರಾತ್ರಿ	೧	೪	ಚಂದ್ರ ಶುಕ್ರ " ಶುಕ್ರ ೭11 " ಉತ್ತರ.
"	೧೪	ಸಾಯಂಕಾಲ	೬	೧೨	ಚಂದ್ರ ತನಿ " ತನಿ ೭1 " "
"	"	ರಾತ್ರಿ	೯	೫೨	ಚಂದ್ರ ಕುಜ " ಕುಜ ೫ " "
"	೧೬	ಪ್ರಾತಃಕಾಲ	೬	೫೭	ಚಂದ್ರ ಬುಧ " ಬುಧ ೩111 " "
"	೨೦	ರಾತ್ರಿ	೧೦	೦	ಬುಧನ ಉಚ್ಚ ಗಾಥಾಸ್ತ.
"	೨೨	ಪ್ರಾತಃಕಾಲ	೧೦	೦	ಸ್ಫುಟಸಾಯನ ರವಿ ಮಕರದಲ್ಲಿ ಪ್ರವೇಶ.
"	"	ರಾತ್ರಿ	೩	೦	ತನಿ ಶುಕ್ರ ಸಮಾಗಮ ಶುಕ್ರ ೦110 ಭಾಗೆ ಉತ್ತರ.

ಲೋಕವೃತ್ತಾಂತವು.

ಸರ್ವತ್ರಾಣಿಯಾಗಿ ಪರಮ ದಯಾಳುವಾಗಿ ಜಗತ್ಪತಿಯಾಗಿರುವ ದೇವರು ಪಂಚಾಂಗವನ್ನು ಓದುವವರೆಲ್ಲರಿಗೆ ಆಯುರಾರೋಗ್ಯವನ್ನು ವೃದ್ಧಿ ಪಡಿಸುವವನಾಗಲೆಂದು ಪ್ರಾರ್ಥಿಸಿ ಇದೇ ಕಳೆದ ವರ್ಷದಲ್ಲಿ ಲೋಕದ ಬೇರೆ ಬೇರೆ ಪ್ರದೇಶಗಳಲ್ಲಿ ಸಂಭವಿಸಿದ ವಿಶೇಷ ಗೋಷ್ಠಿಗಳನ್ನು ವೇದ್ಯವರಿಸುತ್ತೇವೆ.

ಹಿಂದುಸ್ಥಾನದ ವೈಸರಾಯ ದೊರೆಯವರಾದ ಲೋರ್ಡ್ ಲೆಂಡ್ಸ್‌ಡೌನ್ ಪ್ರಭು ರಾಜ್ಯಭಾರವನ್ನು ತಮ್ಮ ಉತ್ತರಾಧಿಕಾರಿಯಾಗಿ ಬಂದ ಲೋರ್ಡ್ ಎಲ್ಜಿನ್ ಪ್ರಭುವಿಗೆ ಕೈವರ್ತಿಸಿ ಕೊಟ್ಟು ಇಂಗ್ಲಾಂಡಿಗೆ ತೆರಳಿದರು.—ಹಿಂದುಸ್ಥಾನದಲ್ಲಿ ಅಫೀಮಿನ ವ್ಯಾಪಾರವನ್ನು ನಿಲ್ಲಿಸಬೇಕೆಂದು ಹಿತಚಿಂತಕರಾದವರು ಪಾರ್ಲಿಮೆಂಟ ವರೆಗೆ ಅರ್ಜಿ ಬರ ಕೊಂಡದ್ದಕ್ಕೆ ಸರಕಾರದವರು ಅಫೀಮಿನ ವ್ಯಾಪಾರದಿಂದ ಆಗುವ ಕೆಡಕು ಎಷ್ಟು, ಅದರ ಪ್ರಯೋಗವು ಜನರಲ್ಲಿ ಎಷ್ಟು ವರೆಗೆ ರೂಢಿಯಾಗಿದೆ ಎಂಬುವ ಸಂಗತಿಯನ್ನೆಲ್ಲಾ ಕೂಲಂಕಶವಾಗಿ ವಿಚಾರಿಸಿ, ಆ ವಿಷಯದಲ್ಲಿ ವರದಿ ಬರಿಯಬೇಕೆಂದು ಪಂಚಾಯತರನ್ನು ನೇಮಿಸಿ ಇತ್ತಕಡೆ ಕಳಿಸಿದ್ದರು; ಅವರು ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗಿ ಅನೇಕರಿಂದ ವಾಗ್ಮೂಲ ತಕ್ಕೊಂಡು ಇಂಗ್ಲಾಂಡಿಗೆ ತೆರಳಿದರು.

ಕಲ್ಲಿಕೋಟೆಯಿಂದ ಮದ್ರಾಸಿಗೆ ಹೋಗುವ ರೈಲುಮಾರ್ಗಕ್ಕೆ ಮೇಟುಪಾಳ್ಯಕ್ಕೆ ಹೋಗುವ ಶಾಖೆಯು ಕೂಡುತ್ತದೆ. ಈ ಮಾರ್ಗವು ಹೋಗುವ ಪ್ರದೇಶದಲ್ಲಿ ಬಿರು ಮಳೆ ಸುರಿದು, ರೈಲಿನ ಕೆಳಗಣ ಮಣ್ಣು ಕುಸಿದುಹೋಗಿತ್ತು. ಅಕಸ್ಮಾತ್ತಾಗಿ ಸಂಭವಿಸಿದ ಈ ಅಪಾಯವನ್ನು ಅರಿಯದೆ, ಮದ್ರಾಸಿಗೆ ಬಂಡಿಗಳನ್ನು ಓಡಿಸಿದ್ದರಿಂದ, ಬಂಡಿಗಳು ಕಬ್ಬಿಣದ ಸರಳಿನಿಂದ ಜಾರಿ ಕವುಚಿಬಿದ್ದು, ಬಹು ಜನರು ಸತ್ತುಹೋದರು.—ಕಲ್ಲಿಕೋಟೆಯಲ್ಲಿ ಸಾಮುದಿರಿ ರಾಜವಂಶದವರಾದ ಮಾನವೇದನ್ ರಾಜರು ಅನಂತಪುರ ಜಿಲ್ಲೆಯ ಕಲೆಕ್ಟರರಾಗಿಯೂ ಮೆಜಿಸ್ತ್ರೇಟರಾಗಿಯೂ ನೇಮಕವಾಗಿದ್ದಾರೆ. ಮದ್ರಾಸ ಸಂಸ್ಥಾನದಲ್ಲಿ ಈ ದೇಶಸ್ಥರಲ್ಲಿ ಇಂಥಾ ಘನವಾದ ಉದ್ಯೋಗವನ್ನು ಹೊಂದಿದವರಲ್ಲಿ ಇವರೇ ಮೊದಲನೆಯವರು.—ತೆಂಕಲಾಗೆ ಕೆಲವು ಜಿಲ್ಲೆಗಳಲ್ಲಿ ವಾಂತಿಭೇದಿ ಹಬ್ಬಿತ್ತು; ತಂಜಾವೂರು ಜಿಲ್ಲೆಯಲ್ಲಿ ಸುಮಾರು ಎರಡು ಸಾವಿರ ಜನರು ಅದರಿಂದ ಸತ್ತುಹೋದರು.

ಕೊಲ್ಲಾಪುರದ ಶಾಹುಛತ್ರಪತಿ ಮಹಾರಾಜರವರು ಪ್ರಾಯಪ್ರಬುದ್ಧರಾದದರಿಂದ ಮುಂಬಾಯಿ ಗವರ್ನರ್ ದೊರೆಗಳು ಅವರಿಗೆ ಪಟ್ಟಕಟ್ಟಿ ರಾಜ್ಯಭಾರವನ್ನು ಕೈವರ್ತಿಸಿದರು.—ಮುಂಬಾಯಿ ಪಟ್ಟಣದಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ವಿರೋಧವು ಹುಟ್ಟಿ ಒಳಗಿದ್ದ ಹಗೆ ಕಾರ್ಯರೂಪವಾಗಿ ತೋರಿದ್ದರಿಂದ ಮಹಾ ಅನಾಹುತಿಗೆ ಕಾರಣವಾಯಿತು. ಮುಸಲ್ಮಾನರು ಕೈಯಲ್ಲಿ ಟೊಣಪೆಗಳನ್ನು ಹಿಡಿದು, ಬೀದಿಗಳಲ್ಲಿ ಸಿಕ್ಕಿದ ಹಿಂದುಗಳನ್ನು ಹೊಡೆದು, ಜೀವದರಿಸಿ ಕೊಲ್ಲುವದಕ್ಕೆ ಆರಂಭಿಸಿದರು. ಹಿಂದುಜನರೂ ಪ್ರತೀಕಾರ ಮಾಡುವದಕ್ಕೆ ಎದ್ದು, ಮುಸಲ್ಮಾನರನ್ನು

ಹೊಡೆದು ಕೊಲ್ಲುವದಕ್ಕೆ ಆರಂಭಿಸಿದರು. ಹೀಗಾಗಿ ಪಟ್ಟಣದವರೆಲ್ಲಾ ತಲ್ಲಣಗೊಂಡು ಹಲವರು ಬಾಗಲು ಹಾಕಿ ಒಳಗೆ ಕೂತರು. ವ್ಯಾಪಾರಸ್ಥರು ಅಂಗಡಿ ತೆರೆಯಲಿಲ್ಲಾ; ಸಂತೆಗೆ ಜಿನಸು ಬರುವದು ನಿಂತಿತು. ಪೊಲೀಸಿನವರು ದಂಗೆಯನ್ನು ಅಣಗಿಸಲಾರದೆ ಹೋದದರಿಂದ, ಪಟಾಲಮೆನ್ನು ಕರಿಸಿ ಪಟ್ಟಣದಲ್ಲೆಲ್ಲಾ ಪಹರೆ ಇಟ್ಟು ಬಂದೋಬಸ್ತು ಮಾಡಿಸಿದರು. ಮುಂಬಾಯಿಯಲ್ಲಿ ದಂಗೆ ಉಂಟಾಗುವ ಮೊದಲು ಕತ್ತಿಯವಾಡಕ್ಕೆ ಸೇರಿದ ಜುನಾಗಡ ಎಂಬುವಲ್ಲಿ ಮೊಹರಮ್ ಸಮಯದಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ಭಾರಿ ಜಟಾಪಟಿಯಾಗಿತ್ತು. ಅಲ್ಲಿಯೂ ಪೊಲೀಸು ಬಂದೋಬಸ್ತು ಸಾಲದೆ ಹೋಗಿತ್ತು. ಅನಂತರ ಯೋಲ ಎಂಬ ಊರಿನಲ್ಲಿ ಮತ್ತೂ ಹಿಂದುಗಳಿಗೂ ಮುಸಲ್ಮಾನರಿಗೂ ವಿರೋಧ ಹುಟ್ಟಿ ಉಭಯತರೂ ಖಡಾಖಡಿ ಕದನಕ್ಕೆ ನಿಂತರು. ಆದರೆ ಸರಕಾರದವರ ಬಂದೋಬಸ್ತಿನಿಂದ ಹೆಚ್ಚು ಅನಾಹುತಕ್ಕೆ ಕಾರಣವಾಗಲಿಲ್ಲಾ.

ಉತ್ತರ ಹಿಂದುಸ್ಥಾನದಲ್ಲಿ ಪೇಶಾವರ, ಅಲ್ಲಹಾಬಾದು, ಲಖನೌ ಮುಂತಾದ ಊರುಗಳಲ್ಲಿ ಭೂಕಂಪವು ಸಂಭವಿಸಿತು; ಆದರೆ ಮನೆಗಳಿಗಾಗಲಿ ಮನುಷ್ಯರಿಗಾಗಲಿ ಉಪಹತಿಯುಂಟಾಗಲಿಲ್ಲಾ.—ಕಾಶ್ಮೀರದಲ್ಲಿ ಅತಿರೇಕ ಮಳೆಯಾಗಿ, ನದಿಯ ನೀರು ಊರಿನೊಳಗೆ ಹರಿದು ಬಂದು, ಅನೇಕ ಕಟ್ಟಡಗಳೂ ಸೇತುಗಳೂ ಬಿದ್ದುಹೋಗಿ, ಹೆಚ್ಚು ಹಾವಳಿಯಾಯಿತು.—ನಮ್ಮ ದೇಶದವರು ರಾಷ್ಟ್ರೀಯಸಭೆ ಎಂಬ ಹೆಸರಿನ ಸಭೆಯನ್ನು ಸ್ಥಾಪಿಸಿದ್ದಾರಷ್ಟೇ. ಕಳೆದ ವರ್ಷದಲ್ಲಿ ಈ ಸಭೆಯವರು ಲಾಹೋರಿನಲ್ಲಿ ನೆರೆದು ಬೇರೆ ಬೇರೆ ವಿಷಯಗಳನ್ನು ಚರ್ಚಿಸಿದರು. ಈ ಸಭೆಯವರು ದೇಶದವರಿಗೆ ಹಿತಕರವಾದ ಹಲವು ವಿಷಯಗಳನ್ನು ಸರಕಾರದವರಿಗೆ ಸೂಚನೆ ಮಾಡುತ್ತಾರೆ; ಅಂಥವುಗಳನ್ನು ಸರಕಾರದವರು ಗವನಕ್ಕೆ ತರುತ್ತಾರೆ.—ಬೆಲೂಚಿಸ್ಥಾನದ ಅಧಿಪತಿಯಾದ ಖಾನ ಎಂಬವನು ರಾಜತ್ವಕ್ಕೆ ಯೋಗ್ಯವಲ್ಲದ ಕೊಲೆಪಾತಕದ ಕೃತ್ಯಗಳನ್ನು ನಡಿಸಿದ್ದಾನೆಂದು ಕಂಡುಬಂದದರಿಂದ ಇಂಗ್ಲಿಷ ಸರಕಾರದವರು ಅವನನ್ನು ಪಟ್ಟದಿಂದ ತೆಗದು, ಅವನ ಮಗನಿಗೆ ರಾಜಧಾನಿಯಾದ ಖೇಲಾತಿನಲ್ಲಿ ಪಟ್ಟಕಟ್ಟಿ ರಾಜ್ಯಭಾರವನ್ನು ಕೈವರ್ತಿಸಿದರು.—ಹಿಂದುಸ್ಥಾನದ ಗವರ್ನಮೆಂಟಿನವರು ಅಫಘಾನಿಸ್ಥಾನದ ಅಮೀರರ ಬಳಿಗೆ ಆಯಾ ರಾಜಕೀಯವಾದ ಕಾರ್ಯಗಳನ್ನು ಕುರಿತು ಮೊಖತಾ ಮಾತಾಡಿ ಬರುವ ಬಗ್ಗೆ ತಮ್ಮ ಕಡೆಯಿಂದ ರಾಯಭಾರಿಗಳನ್ನು ಕಳುಹಿಸಿದ್ದರು. ಅಮೀರರು ಇವನನ್ನು ಸಾಭಿಮಾನದೊಡನೆ ಅಗತಸ್ವಾಗತ ಮಾಡಿದರು. ರಾಯಭಾರಿಗಳು ಅಮೀರರ ಸತ್ಕಾರವನ್ನು ಸ್ವೀಕರಿಸಿ ಹಿಂದುಸ್ಥಾನಕ್ಕೆ ಮರಳಿ ಬಂದರು.

ಇಂಗ್ಲಾಂಡು. ಪ್ರಧಾನ ಮಂತ್ರಿಯಾದ ಗ್ಲಾಡ್‌ಸ್ಟನ್ ದೊರೆಯವರು ವೃದ್ಧಾಪ್ಯದಿಂದ ಕಣ್ಣು ಕಿವಿ ಮಂದವಾದದರಿಂದ ರಾಜ್ಯಭಾರವನ್ನು ವಹಿಸಲಾರೆನೆಂದು ಚಕ್ರವರ್ತಿನಿಯವರಿಗೆ ಬಿನ್ನವಿಸಿ ರಾಜಿಕೊಟ್ಟರು. ಚಕ್ರವರ್ತಿನಿಯವರು ಅವರ ಬದಲಿಗೆ ರೋಸ್‌ಬರಿ ಪ್ರಭುವನ್ನು ಪ್ರಧಾನ ಮಂತ್ರಿತ್ವಕ್ಕೆ ನೇಮಿಸಿದ್ದಾರೆ. ಚಕ್ರವರ್ತಿನಿಯವರು ವಯೋವೃದ್ಧರಾದಾಗ್ಯೂ ಹಿಂದುಸ್ಥಾನಿ ಭಾಷೆ ಕಲಿತು, ಇಲ್ಲಿಂದ ಹೋಗುವ ರಾಜರೂ ಸಂಸ್ಥಾನಿಕರೂ ಮುಂತಾಗಿ ಭೇಟಿಗೆ ಬಂದವರೊಂದಿಗೆ ಆ ಭಾಷೆಯಲ್ಲಿಯೇ ಮಾತಾಡುತ್ತಾರೆ. ಚಕ್ರವರ್ತಿನಿಯವರು ಗಲಿಷಿಟಲ್ಲು ಮೃತ್ಯುಪತ್ರವನ್ನು ಠರಾಯಿಸಿದ್ದಾರೆಂದು

ಇತ್ತಲಾಗೆ ತಿಳಿದುಬಂತು. ಆ ಪತ್ರವನ್ನು ಚಲೋ ಅಕ್ಷರದಿಂದ ಬರೆಸಿ ಅದಕ್ಕೆ ಮುದ್ರೆಯನ್ನೂ ಬೀಗವನ್ನೂ ಮಾಡಿಸಿ ಭದ್ರವಾಗಿ ಇಟ್ಟಿದ್ದಾರೆ. ಅವರ ಕುಮಾರ್ತೆಯೊಬ್ಬರೂ ಒಬ್ಬ ಕುಮಾರರೂ ತೀರಿಕೊಂಡ ವೇಳೆಯಲ್ಲಿ ಎರಡಾವರ್ತಿ ಮಾತ್ರವೇ ಆ ಪತ್ರವನ್ನು ತೆರದು ವಕ್ಕಣೆಯನ್ನು ತಿದ್ದುಪಾಟು ಮಾಡಿದ್ದರು.

ಎಲಾಯತಿಯಲ್ಲಿ ಅನರ್ಕಿಸ್ಟರೆಂಬ ಅರಾಜಕ ಪಕ್ಷದವರು, ಇದ್ದ ಅಧಿಕಾರಗಳನ್ನೆಲ್ಲಾ ನಿರ್ಮೂಲ ಮಾಡಬೇಕೆಂಬ ಉದ್ದೇಶದಿಂದ ನಾನಾ ಕೆಡಕು ಮಾಡುತ್ತಾರೆ. ಫ್ರಾನ್ಸ್ ದೇಶದ ಪರಿಸ ಪಟ್ಟಣದಲ್ಲಿ ರಾಜಸಭೆ ನೆರೆದು ಬಂದಿದ್ದಾಗ್ಯೆ ಮಂತ್ರಿಯನ್ನು ಕೊಲ್ಲುವದಕ್ಕೆ ಅರಾಜಕಕೂಟದವನೊಬ್ಬನು ಮದ್ದು ತುಂಬಿದ ಗುಂಡನ್ನು ಕೋಣೆಯೊಳಗೆ ಹಾಕಿದನು. ಅದರಿಂದ ಕೆಲವರಿಗೆ ಗಾಯವಾದರೂ ಯಾರಿಗೂ ಪ್ರಾಣ ಹಾನಿಯಾಗಲಿಲ್ಲಾ. ಆದೇ ಕೂಟದವರು ಮದ್ದುತುಂಬಿದ ಪೆಟ್ಟಿಗೆಗಳನ್ನು ಜರ್ಮನಿ ಮಹಾರಾಜರಿಗೂ ಇತರ ದೊಡ್ಡ ಹುದ್ದೆದಾರರಿಗೂ ಕಳುಹಿಸಿದ್ದರು. ಬೀಗದ ಕೈಗಳಿಂದ ಪೆಟ್ಟಿಗೆಗಳನ್ನು ತೆರೆದವರು ಕೂಡಲೇ ಸಾಯುವಂತೆ ಅವುಗಳಲ್ಲಿ ಯುಕ್ತಿ ಮಾಡಿದ್ದರು. ಆ ಪೆಟ್ಟಿಗೆಗಳನ್ನು ಸುಂಕದ ಮನೆಯವರು ಗುಮಾನಿಯ ಮೇಲೆ ಒಡದು ನೋಡಲಾಗಿ ಗುಟ್ಟೆಲ್ಲಾ ತಿಳಿದುಬಂತು. ಯಾರಿಗೂ ಕೆಡಕು ಸಂಭವಿಸಲಿಲ್ಲಾ. ಜರ್ಮನಿ ಅರಸ್ಥಾನದವರು ರಾಜಸಭೆಯ ಸದಸ್ಯರು ನೆರದು ಬರುವದಕ್ಕೆ ಬಹು ಸುಂದರವಾದ ದೊಡ್ಡ ಮನೆಯನ್ನು ಕಟ್ಟಿಸಿದ್ದಾರೆ. ಈ ಮನೆಯ ಮುಂದುಗಡೆಯಲ್ಲಿ ಮೊದಲು ಮಂತ್ರಿಯಾಗಿದ್ದ ಬಿಸ್ಮಾರ್ಕ ಪ್ರಭುವಿನ ಪುತ್ಥಳಿಯನ್ನು ಇರಿಸುವರು.

ಇತಲಿ ದೇಶದ ಒಂದು ಊರಿನಲ್ಲಿ ಪ್ರಜೆಗಳು ಸರಕಾರದ ಮೇಲೆ ವಿತುಷ್ಟಿಗೊಂಡು ಮಾರ್ಮಲೆತರು; ಸರಕಾರದವರು ಬಂಡಾಯವನ್ನು ಅಣಗಿಸುವದಕ್ಕೆ ಸೈನ್ಯ ಕಳಿಸಿದ್ದಲ್ಲಿ ದಂಗೆಗಾರರಿಗೂ ಸೈನ್ಯಕ್ಕೂ ಪದೇ ಪದೇ ಜಗಳವಾಯಿತು. ಈ ಪ್ರಕಾರ ಪ್ರಜೆಗಳು ಮಾರ್ಮಲೆಯುವದಕ್ಕೆ ಸರಕಾರದವರು ತೆರಿಗೆ ಕಂದಾಯವನ್ನು ಹೆಚ್ಚಿಸಿದ್ದು ಮುಖ್ಯ ಕಾರಣವಾಗಿದೆ.—ಸ್ಪೇನ ದೇಶದ ಕರಾವಳಿಯ ಒಂದು ಪಟ್ಟಣದಲ್ಲಿ ಡಿನಾಮೈಟ್ ಎಂಬ ಕೋವಿಮದ್ದಿನಿಂದ ಭಯಂಕರ ಅಪಘಾತವು ಸಂಭವಿಸಿತು. ಆ ಮದ್ದು ತುಂಬಿದ ಹಡಗಕ್ಕೆ ಬೆಂಕಿ ಹತ್ತಿ ಅದು ಒಡೆಯಲಾಗಿ, ಊರು ಹಾವಳಿಯಾಗಿ ಸಾವಿರಾರು ಜನರು ಮಡಿದುಹೋದರು.

ಗ್ರೀಸ್ ದೇಶದಲ್ಲಿ ಹಲವು ಸಾರಿ ಭೂಕಂಪವು ಸಂಭವಿಸಿ ಸೀಮೆಯಲ್ಲೆಲ್ಲಾ ಬಹಳ ಹಾವಳಿಯಾಯಿತು; ಮೂವತ್ತು ಮೈಲು ವಿಶಾಲವಾದ ಪ್ರದೇಶದಲ್ಲಿ ಹೊಂಡ ಬಿದ್ದು ಹೇರಳ ಜನರು ಸತ್ತುಹೋದರು. ಜನರೆಲ್ಲಾ ಕಕ್ಕಾಬಿಕ್ಕಿಯಾಗಿ ಪದೇ ಪದೇ ಆಗುತ್ತಿದ್ದ ಕಂಪಗಳಿಗೆ ತಪ್ಪಿಸಿಕೊಳ್ಳುವದಕ್ಕೆ ದೋಣಿಗಳಲ್ಲಿ ಕಾಲಕ್ಷೇಪ ಮಾಡುವವರಾದರು. ಪಾರ್ಶಿಸ್ಥಾನದ ಶಿರಾಜ ಪಟ್ಟಣದಲ್ಲಿಯೂ ಭೂಕಂಪವಾಗಿ ಅದರ ಸಂಗಡಲೇ ಮಳೆಯಾದದರಿಂದ ಹೇರಳ ಮನೆಗಳು ಬಿದ್ದುಹೋದವಂತೆ. ಖೊರಾಸಾನ್ ಊರಿನಲ್ಲಿ ಸಂಭವಿಸಿದ ಭೂಕಂಪದಿಂದ ಕೆಲವು ಸಾವಿರ ಜನರು ಮಡಿದುಹೋದರು.

ಅಮೇರಿಕ ಖಂಡದ ಚಿಕಾಗೋ ಪಟ್ಟಣದಲ್ಲಿ ಅಲ್ಲಿಯ ಅರಸ್ಥಾನದವರು ಡಿಸಿದ ಮಹಾಪ್ರದರ್ಶನವನ್ನು ನೋಡುವದಕ್ಕೆ ಎಲ್ಲಾ ದೇಶಗಳಿಂದ ಜನರು

ಗಿದ್ದರು. ಲೋಕದಲ್ಲಿರುವ ಅತಿ ಚಿತ್ರವಿಚಿತ್ರವಾದ ನಾನಾ ಜಮತ್ಕಾರದ ವಸ್ತು ಒಡವೆಗಳನ್ನು ಅಲ್ಲಿ ಶೇಖರಿಸಿ, ಜನರು ನೋಡುವ ಹಾಗೆ ಕ್ರಮವಾಗಿ ಇಟ್ಟಿದ್ದರು. ಈ ಸಮಯದಲ್ಲಿ ಮತಸಂಬಂಧವಾದ ಪಂಡಿತಸಮಾಜವೂ ಕೂಡಿ ಬರುವಂತೆ ಮಾಡಬೇಕೆಂದು ಅಮೇರಿಕದ ಪಂಡಿತರು ಯೋಚಿಸಿ, ಆ ಬಗ್ಗೆ ತಕ್ಕ ವ್ಯವಸ್ಥೆ ಮಾಡಿದ್ದರಿಂದ, ಲೋಕದಲ್ಲಿರುವ ಬೇರೆ ಬೇರೆ ಮತಗಳವರು, ಅಂದರೆ ಯೆಹೂದಿಯರು, ಪಾರ್ಸಿಗಳು, ಬೌದ್ಧರು, ಚೀನಿಮತದವರು, ಜಪಾನಿಗಳು, ಮುಸಲ್ಮಾನರು, ಹಿಂದು ಮತಗಳವರು, ಕ್ರೈಸ್ತರು ಮೊದಲಾದವರಲ್ಲಿ ಪ್ರಾಜ್ಞರಾದವರು ಆ ಸಮಾಜಕ್ಕೆ ಹೋಗಿ, ತಂತಮ್ಮ ಮತವನ್ನು ವಿದ್ವಾಂಸರ ಮುಂದೆ ಪ್ರತಿಪಾದನೆ ಮಾಡಿದರು. ಅನೇಕರು ಅಲ್ಲಿಯ ವರೆಗೆ ಹೋಗಲಾರದವರು ಪರಿಷ್ಕಾರವಾಗಿ ಬರೆದ ನಿಬಂಧಗಳನ್ನು ಕಳಿಸಿ ಕೊಟ್ಟಿದ್ದರು. ಈ ನಿಬಂಧಗಳನ್ನೂ ಬೇರೆ ಬೇರೆ ಭಾಷಣಗಳನ್ನೂ ಛಾಪೆಮಾಡಿದ್ದಾರೆ. ಇಂಥಾ ಪಂಡಿತಸಮಾಜವು ಅತಃಪೂರ್ವದಲ್ಲಿ ಯಾವ ದೇಶದಲ್ಲಿಯೂ ನೆರದು ಬಂದ ದ್ದಿಲ್ಲಾ.—ಅಮೇರಿಕದ ದಕ್ಷಿಣ ಭಾಗದಲ್ಲಿ ಬ್ರಜಿಲ್ ಎಂಬುವ ಸಾಮ್ರಾಜ್ಯವದೆ; ಅದನ್ನು ಪೊರ್ತುಗಿಸ್ ರಾಜವಂಶದ ಮಹಾರಾಜನು ಆಳುತ್ತಿದ್ದನು. ಆದರೆ ಪ್ರಜೆಗಳಲ್ಲಿ ಮುಖಂಡರು ಆ ಅರಸನನ್ನು ಪಟ್ಟದಿಂದ ತಳ್ಳಿ ವಿಲಾಯತಿಗೆ ಕಳಿಸಿ, ಪ್ರಜಾಧಿಪತ್ಯವನ್ನು ಸ್ಥಾಪಿಸಲಾಗಿ, ಇತರ ಪ್ರಜೆಗಳೇ ಇದನ್ನು ವಿರೋಧಿಸಿದರು; ಹೀಗೆ ಎರಡು ಪಕ್ಷಗಳಾಗಿ ಅವರು ತಂತಮ್ಮೊಳಗೆ ಕಾದಾಡಿದ್ದರಿಂದ ರಾಜ್ಯದಲ್ಲೆಲ್ಲಾ ಅವ್ಯವಸ್ಥೆಯಾಗಿತ್ತು. ಆದರೆ ಪ್ರಜಾಧಿಪತ್ಯವನ್ನು ಸ್ಥಾಪಿಸಿದವರೇ ಬೇರೆ ಪಕ್ಷದವರನ್ನು ಅಣಗಿಸಿ ರಾಜ್ಯವನ್ನು ಕ್ರಮಪಡಿಸುತ್ತಾರೆ.

ನಾಲ್ಕು ವರ್ಗಗಳು.

ಈ ಕಾಲದಲ್ಲಿ ಹಿಂದುಸ್ಥಾನದಲ್ಲಿ ಯೇಸು ಕ್ರಿಸ್ತನ ಸುವಾರ್ತೆಯ ಬೋಧನೆ ಪ್ರಬಲಗೊಳ್ಳುತ್ತಿರುವದು ಸರಿಯಷ್ಟೇ. ಮುಖ್ಯ ಮುಖ್ಯವಾದ ಪಟ್ಟಣಗಳ ಬೀದಿಗಳಲ್ಲಿಯೂ ಜಾತ್ರೆ ಉತ್ಸವಗಳು ಆಗುವಲ್ಲಿಯೂ ಉಪದೇಶಕರು ಹೋಗಿ ಜನರನ್ನು ಕೂಡಿಸಿ ಬೋಧನೆ ಮಾಡುವದನ್ನು ಕಾಣಬಹುದು. ಅವರು ಜನರಿಗೆ ಏನು ಉಪದೇಶ ಮಾಡುತ್ತಾರೆ? ಪರಲೋಕ ಭೂಲೋಕಗಳನ್ನು ಸೃಷ್ಟಿ ಮಾಡಿದ ಸರ್ವಶಕ್ತನಾದ ಜೀವಂತ ಒಬ್ಬನೇ ದೇವರು ಪಾಪಿಗಳಾದ ನಿಮ್ಮ ಮೇಲೆ ಮಹಾ ದಯೆ ಮಾಡಿದ್ದಾನೆ; ಪಾಪಿಯು ನಾಶನವಾಗುವದು ಆತನ ಚಿತ್ತವಲ್ಲ, ಪಾಪಿ ಮನಸ್ಸು ಬೇರೆ ಮಾಡಿ ಪಶ್ಚಾತ್ತಾಪ ಪಟ್ಟು ತನ್ನ ಬಳಿಗೆ ಬರಬೇಕೆಂದು ಇಚ್ಛೆಯಿಸುತ್ತಾನೆ; ಪಾಪಿಗಳನ್ನು ವಿಮೋಚನೆ ಮಾಡುವ'ಬಗ್ಗೆ ಆತನು ತನ್ನ ಕುಮಾರನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳಿಸಿದನು; ಆತನಲ್ಲಿ ವಿಶ್ವಾಸವಿಡುವವನು ನಾಶವಾಗದೆ ನಿತ್ಯ ಜೀವವನ್ನು ಪಡೆಯುವನು ಎಂಬುವದೇ ಅವರ ಬೋಧಾಸಾರವು. ಈಗ ಈ ಉಪದೇಶವನ್ನು ಕೇಳುವ ಜನರನ್ನು ನಾವು ನಾಲ್ಕು ವರ್ಗಗಳಾಗಿ ಮಾಡಬಹುದು.

ಮೊದಲನೇ ವರ್ಗದವರು ಯೇಸು ಕ್ರಿಸ್ತಸ್ವಾಮಿಯವರನ್ನೂ ಅವರ ವಾಕ್ಯವನ್ನೂ ಆ ವಾಕ್ಯವನ್ನು ಬೋಧಿಸುವವರನ್ನೂ ಹಗೆ ಮಾಡುವರು. ಸ್ವಾಮಿಯವರು ತಮ್ಮ ಶಿಷ್ಯರ ಸಂಗಡ ಇದ್ದ ಕಡೇ ದಿನದಲ್ಲಿ ಸಮಸ್ತ ಲೋಕಕ್ಕೆ ಹೋಗಿ ಸರ್ವೇ ಮನುಷ್ಯರಿಗೆ ಉಪದೇಶ ಮಾಡಿರೆಂದು ಅಪ್ಪಣೆ ಮಾಡಿ, ಪರಲೋಕಕ್ಕೆ ತೆರಳಿ ಅಂತರ್ಧಾನವಾದ ಮೇಲೆ, ಆ ಶಿಷ್ಯರು ಯೆರೂಸಲೇಮ ಪಟ್ಟಣದಲ್ಲಿ ಉಪದೇಶ ಮಾಡುವದಕ್ಕೆ ಆರಂಭಿಸಿದಾಗ, ಯೆಹೂದಿಯರಲ್ಲಿ ಮುಖಂಡರೂ ಅಧಿಕಾರಿಗಳೂ ಶಿಷ್ಯರ ಮೇಲೆ ದುಹಿಗೊಂಡು, ಅವರನ್ನು ಕರಿಸಿ ವಿಚಾರಿಸಿ, ಇನ್ನು ಮುಂದೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಬೋಧಿಸ ಬಾರದೆಂದು ಕಟ್ಟು ಮಾಡಿ, ಹೊಡಿಸಿ, ಸೆರೆಯಲ್ಲಿ ಇಡಿಸಿ, ನಾನಾ ಪ್ರಕಾರದಲ್ಲಿ ಅವರಿಗೆ ಹಿಂಸೆ ಮಾಡಿದರು. ಆದರೆ ಅಪೊಸ್ತಲರೆಂಬ ಆ ಶಿಷ್ಯರು ಮನುಷ್ಯರಿಗೆ ಹೆದರದೆ, ಸ್ವಾಮಿಯ ಅಪ್ಪಣೆಯನ್ನು ಶಿರಸಾವಹಿಸಿ, ಮನುಷ್ಯರು ಮಾಡಿದ ನಿಂದೆಯನ್ನೇ ಬಹುಮಾನವೆಂದೆಣಿಸಿ, ಹಿಂಸೆಗಳಲ್ಲಿಯೂ ಆನಂದಭರಿತರಾಗಿ ಕ್ರೈಸ್ತ ಮಂಡಲಿಯನ್ನು ಸ್ಥಾಪಿಸಿದರು. ಯೆರೂಸಲೇಮು ಪಟ್ಟಣದಲ್ಲಿ ಮಾತ್ರವಲ್ಲ, ಕ್ರೈಸ್ತ ಉಪದೇಶಕರು ಎಲ್ಲೆಲ್ಲಿಗೆ ಹೋಗಿ ಬೋಧನೆ ಮಾಡಿದರೋ, ಅಲ್ಲಿ ಅವರಿಗೆ ಮನುಷ್ಯರು ಇದೇ ಪ್ರಕಾರ ಅಪಕಾರ ಮಾಡಿದರು. ಹಲವರು ದೇವರ ವಾಕ್ಯಕ್ಕೋಸ್ಕರವಾಗಿ ತಮ್ಮ ಜೀವವನ್ನೂ ಅರ್ಪಣೆ ಮಾಡಿದರು. ಅಪೊಸ್ತಲರೆಂಬ ಶಿಷ್ಯರ ಅನಂತರದವರೂ ಯೇಸುಸ್ವಾಮಿಯವರ ನಾಮಕ್ಕಾಗಿ ಅರಸ್ಥಾನದವರಿಂದಲೂ ಸಾಮಾನ್ಯ ಜನರಿಂದಲೂ ಹೇರಳ ಉಪಟಲಗಳನ್ನು ಅನುಭವಿಸಿದರು. ಆದರೆ ಹಿಂಸೆ ಮಾಡಿದವರೇ ಸೋತರಲ್ಲದೆ ದೇವರ ವ್ಯಾಕ್ಯವು ಸೋಲಲಿಲ್ಲಾ; ಕಾಲಾನುಗತವಾಗಿ ಆ ಕಾಲದ ರೋಮಸಾಮ್ರಾಜ್ಯದಲ್ಲೆಲ್ಲಾ ಕ್ರೈಸ್ತ ಸಭೆಗಳು ಪ್ರವರ್ಧಮಾನವಾಗಿ ಕಡೆಗೆ ಕ್ರೈಸ್ತ ಧರ್ಮವೇ ರಾಜ್ಯದ ಧರ್ಮವಾಯಿತು. ಈಗ ನಮ್ಮ ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಚೀನದಲ್ಲಿ, ಅಫ್ರಿಕದಲ್ಲಿ, ಆಸ್ಯದ ಬೇರೆ ಬೇರೆ ರಾಜ್ಯಗಳಲ್ಲಿ ಯೇಸುಸ್ವಾಮಿಯವರ ಸುವಾರ್ತೆಯನ್ನು ಬೋಧಿಸಲಿಕ್ಕೆ ಹೋದವರೂ, ಅವರ ಬೋಧನೆ ಮನನ ಮಾಡಿ ಕ್ರೈಸ್ತರಾದವರೂ, ದುರ್ಜನರು ಮಾಡುವ ಪರಿಪರಿಯ ಹಿಂಸೆಗಳನ್ನು ತಾಳಬೇಕಾಗುತ್ತದೆ. ಆದರೆ ದೇವರ ಕಾರ್ಯವನ್ನು ಯಾರೂ ಕೆಡಿಸಲಾರರು. ನಮ್ಮ ದೇಶದಲ್ಲಿಯೂ ಯೇಸುಸ್ವಾಮಿಯವರ ಸುವಾರ್ತೆ ಸಾರುವವರಿಗೆ ಪರಿಹಾಸ್ಯ ಮಾಡುವವರೂ, ಅವರು ಉಪದೇಶ ಮಾಡದಂತೆ ನಾನಾ ವಿಧದಲ್ಲಿ ಅಟಕು ಮಾಡುವವರೂ ಇಲ್ಲವೋ? ಇನ್ನು ಹಲವರು ಅವರ ಮಾತು ಯಾಕೆ ಕೇಳಬೇಕು? ಅದು ಹೂಣ ಶಾಸ್ತ್ರ, ನಾವು ಕೇಳ ತಕ್ಕದ್ದಲ್ಲವೆಂದು ತಾತ್ಸಾರ ಮಾಡುವವರು ಇಲ್ಲವೋ? ಬೇರೊಬ್ಬರು ಅವರವರ ಶಾಸ್ತ್ರ ಅವರವರಿಗೆ ದೊಡ್ಡದೆಂದು ತಟಸ್ಥರಾಗಿರುವರು. ಹೆಚ್ಚು ಕೇಳಿ ತಿಳುಕೊಳ್ಳಬೇಕೆಂದು ಮನಸ್ಸು ಮಾಡರು. ಇವರೆಲ್ಲಾ ಮೊದಲನೇ ವರ್ಗದವರು. ಇವರು ದೇವರ ವಾಕ್ಯವು ತಮಗೆ ಬೇಡವೆಂದು ಹೇಳಿ, ಅದು ಪ್ರವರ್ಧಮಾನವಾಗದಂತೆ ಎಷ್ಟು ಧಾವತಿ ಮಾಡಿದರೂ ನಿರರ್ಥಕವಾಗುವದು. ಬೆಳಕು ಈ ದೇಶಕ್ಕೆ ಬಂದದೆ; ಆದರೆ ಮನುಷ್ಯರ ಕೃತ್ಯಗಳು ಕೆಟ್ಟವಾಗಿರುವ ಕಾರಣ ಬೆಳಕನ್ನು ಹಗೆ ಮಾಡಿ ಕತ್ತಲೆಯನ್ನು ಪ್ರೀತಿ ಮಾಡುತ್ತಾರೆ.

ಎರಡನೇ ವರ್ಗದವರು ಯಾರಂದರೆ: ದೇವರ ವಾಕ್ಯವನ್ನು ಕೇಳಿ ಒಪ್ಪಿ, ಸ್ವಮ

ತಾಭಿಮಾನವನ್ನು ಬಿಟ್ಟು, ಕ್ರೈಸ್ತವೇದಗ್ರಂಥವನ್ನು ತೆಗದುಕೊಂಡು ಓದಿ, ಯೇಸುಸ್ವಾಮಿಯವರ ಕೆಲ ವಾಕ್ಯಗಳನ್ನು ಅಂಗೀಕರಿಸುವರು. ಯೇಸು ಕ್ರಿಸ್ತನು ಮಹಾ ಋಷಿ, ಒಳ್ಳೇ ಜ್ಞಾನಿ, ಮನುಷ್ಯರಿಗೆ ಹೆದರದೆ, ಯಾರ ದಾಕ್ಷಿಣ್ಯವನ್ನು ಮಾಡದೆ, ಧೈರ್ಯಶಾಲಿಯಾಗಿ ಉಪದೇಶ ಮಾಡಿದಾತನು ಎಂದು ಒಪ್ಪಿಕೊಳ್ಳುವರು. ಆದರೆ ಅವರು ಸ್ವಾಮಿಯವರ ಸಂಪೂರ್ಣ ಉಪದೇಶವನ್ನು ಸ್ವೀಕರಿಸಲೊಲ್ಲರು. ಅವರು ಸಾಕ್ಷಾದ್ದೇವರು, ದೇವರ ಮಗನು, ತಮ್ಮ ರಕ್ಷಕನು, ತಮ್ಮನ್ನು ಪಾಪದಿಂದ ವಿಮೋಚಿಸುವಾತನು ಎಂದು ಮನಃಪೂರ್ವಕವಾಗಿ ನಂಬುವದಕ್ಕೆ ಮನಸ್ಸು ಮಾಡುವದಿಲ್ಲಾ. ಪುರಾತನದಲ್ಲಿ ಯವನರಲ್ಲಿದ್ದ ವಿದ್ವಾಂಸರು ಸುವಾರ್ತಾವಾಕ್ಯವನ್ನು ಕೇಳಿದಾಗ ಅದನ್ನು ಪೂರ್ಣವಾಗಿ ಅಂಗೀಕರಿಸದೆ, ತಮ್ಮ ಬುದ್ಧಿಗೆ ತೋರಿದ ಆಯಾ ವಾಕ್ಯಗಳನ್ನು ತೆಗದುಕೊಂಡು, ಅವುಗಳನ್ನೂ ತಮ್ಮ ತತ್ವಜ್ಞಾನವನ್ನೂ ಬೆರಸಿ ಹೊಸ ಮತವನ್ನು ಮಾಡಿದ್ದರು. ನಮ್ಮ ದೇಶದಲ್ಲಿಯೂ ಹೀಗೆಯೇ ಸಂಭವಿಸಿಯದೆ. ಬಂಗಾಳದಲ್ಲಿ ಕ್ರೈಸ್ತಧರ್ಮವು ಪ್ರಸಿದ್ಧವಾದಾಗ ಅದರ ಸತ್ಯತ್ವಕ್ಕೆ ಮೆಚ್ಚಿದವರು ಕೆಲವರು, ತಮ್ಮ ಪೂರ್ವಮತದಲ್ಲಿದ್ದ ಸ್ವಾರಸ್ಯವನ್ನು ಕಳಕೊಂಡರೂ ಅದನ್ನು ಪೂರ್ಣವಾಗಿ ಬಿಡಲೊಲ್ಲದೆ ಕ್ರೈಸ್ತಧರ್ಮದಿಂದ ಕೆಲ ಕೆಲ ವಾಕ್ಯಗಳನ್ನು ತೆಗದುಕೊಂಡು, ಬ್ರಹ್ಮಸಮಾಜವೆಂದು ಹೊಸ ಮತವನ್ನು ಏರ್ಪಡಿಸಿದರು. ಹಾಗೆಯೇ ಮುಂಬಾಯಿ ಪುಣೆ ಮೊದಲಾದ ಊರುಗಳಲ್ಲಿ ಇಂಗ್ಲಿಷು ವಿದ್ಯೆ ಬಲ್ಲವರು ಹಲವರು ತಮ್ಮ ಪೂರ್ವ ಮತದಲ್ಲಿದ್ದ ವಿಶ್ವಾಸವನ್ನು ಕಳಕೊಂಡಾಗ್ಯೂ ಅದನ್ನು ಬಿಡಲೊಲ್ಲದೆ, ದೇವರ ವಾಕ್ಯವನ್ನು ಸ್ವೀಕರಿಸಲೂ ಮನಸ್ಸಿಲ್ಲದೆ, ಎರಡನ್ನೂ ಮಿಶ್ರ ಮಾಡಿ ಪ್ರಾರ್ಥನಾಸಮಾಜವೆಂದು ಹೊಸ ಮತವನ್ನು ಮಾಡಿಕೊಂಡರು. ಈ ಉಭಯ ಮತಸ್ಥರೂ ಕ್ರೈಸ್ತರಂತೆ ಕ್ಲುಪ್ತವಾದ ದಿವಸದಲ್ಲಿ ಮಂದಿರದಲ್ಲಿ ಕೂಡಿ ಬಂದು, ದೇವರ ನಾಮದಲ್ಲಿ ಸಂಗೀತಸೇವೆಯನ್ನೂ ಪ್ರಾರ್ಥನೆಯನ್ನೂ ಮಾಡುವರು, ಕ್ರೈಸ್ತವೇದವನ್ನು ಪಠಣೆ ಮಾಡುವರು. ಕ್ರೈಸ್ತಧರ್ಮವು ಈ ದೇಶದಲ್ಲಿ ಪ್ರಸಿದ್ಧಿಯಾಗದೆ ಇರುತ್ತಿದ್ದರೆ, ಬ್ರಹ್ಮಸಮಾಜವಾಗಲಿ ಪ್ರಾರ್ಥನಾಸಮಾಜವಾಗಲಿ ಪ್ರಕಾಶಕ್ಕೆ ಬರುತ್ತಿದ್ದಿಲ್ಲವೆಂಬುವದು ನಿಶ್ಚಯವು. ಕ್ರೈಸ್ತಧರ್ಮವು ತಿಳಿದುಬಾರದ ದೇಶಗಳಲ್ಲಿ ಈ ಸಮಾಜಗಳಿಗೆ ಸಮಾನವಾದ ಮಂಡಲಿಗಳು ಅದದ್ದು ಕಂಡುಬರುವದಿಲ್ಲಾ. ದೇವರನ್ನೂ ದೇವರ ದಯೆಯನ್ನೂ ಕುರಿತು, ಮನುಷ್ಯನ ಅವಸ್ಥೆಯನ್ನು ಕುರಿತು, ಶುದ್ಧ ಸತ್ಯವಾದ ಬೋಧನೆ ಸತ್ಯವೇದದಲ್ಲಿ ಅಲ್ಲದೆ ಇತರವಾದ ಯಾವ ಶಾಸ್ತ್ರದಲ್ಲಿಯೂ ಕಾಣದು. ದೇವರ ಪರಮ ದಯೆ, ಪರಿಶುದ್ಧತ್ವ, ನೀತಿ, ಕರುಣೆ ಮೊದಲಾದ ದಿವ್ಯಗುಣಗಳನ್ನೂ ಮನುಷ್ಯನು ಸ್ವಬುದ್ಧಿಯಿಂದ ತಿಳಿಯನು; ಮನುಷ್ಯನ ಅವಸ್ಥೆಯನ್ನೂ ಪಾಪವಿಮೋಚನೆಯನ್ನೂ ಮುಂದಣ ಲೋಕದ ವಿದ್ಯಮಾನವನ್ನೂ ಮನುಷ್ಯನು ತಾನಾಗಿ ಗ್ರಹಿಸಲಾರನು; ಈ ಸತ್ಯಾರ್ಥಗಳನ್ನು ದೇವರೇ ಮಹಾತ್ಮರಿಂದ ಪ್ರಕಟಿಸಿದನು.

ಮೂರನೇ ವರ್ಗದವರು ದೇವರ ವಾಕ್ಯವನ್ನು ಮನಃಪೂರ್ವಕವಾಗಿ ಕೇಳುತ್ತಾರೆ, ಸತ್ಯವೆಂದು ಒಪ್ಪುತ್ತಾರೆ; ಯೇಸುಸ್ವಾಮಿಯವರೇ ರಕ್ಷಕರು, ರಕ್ಷಣೆಯ ಮಾರ್ಗವು ಬೇರೆ ಇಲ್ಲ ಎಂದು ತಿಳಿಯುತ್ತಾರೆ; ತಾವು ಕ್ರೈಸ್ತಮಂಡಲಿಗೆ ಸೇರಬೇಕೆಂದು ಅವರಿಗೆ ಮನಸ್ಸದೆ. ಆದರೆ ಅವರಿಗೆ ಧೈರ್ಯವಿಲ್ಲ; ಮನುಷ್ಯರಿಗೆ ಅಂಜುತ್ತಾರೆ;

ದೇವರ ಮಹಿಮೆಗಿಂತ ಮನುಷ್ಯರಿಂದ ಬರುವ ಮಹಿಮೆ ದೊಡ್ಡದೆಂದು ಅವರ ಮನಸ್ಸಿಗೆ ತೋರುತ್ತದೆ. ಜಾತಿ ಕುಲಾಚಾರ ಬಂಧುಬಳಗದವರ ಮಾಯೆ ಹ್ಯಾಗೆ ಬಿಡುವದು? ಎಂದು ಹೇಳಿ ಹಿಂದೆ ನಿಲ್ಲುತ್ತಾರೆ. ನಮ್ಮ ಸ್ವಾಮಿಯವರು ಭೂಲೋಕದಲ್ಲಿದ್ದಾಗ ಇಂಥಾ ಗುಪ್ತ ಶಿಷ್ಯರಿದ್ದರು, ಈಗಲೂ ಇದ್ದಾರೆ. ಯೇಸುಸ್ವಾಮಿಯವರು ಇಂಥವರ ವಿಷಯದಲ್ಲಿ ಹೇಳಿದ್ದು: ತಂದೆಯನ್ನಾಗಲಿ ತಾಯಿಯನ್ನಾಗಲಿ ನನಗಿಂತ ಹೆಚ್ಚಾಗಿ ಸ್ನೇಹಿಸುವವನು ನನಗೆ ಯೋಗ್ಯನಲ್ಲ; ಹೆಂಡತಿಯನ್ನಾಗಲಿ ಮಕ್ಕಳನ್ನಾಗಲಿ ನನಗಿಂತ ಹೆಚ್ಚಾಗಿ ಸ್ನೇಹಿಸುವವನು ನನಗೆ ಯೋಗ್ಯನಲ್ಲ; ಮತ್ತು ತನಗಾಗಿ ಹಿಂಸೆಯನ್ನೂ ನಿಂದೆಯನ್ನೂ ಪಡುವದಕ್ಕೆ ಸಿದ್ಧನಾಗಿ ತನ್ನ ಹಿಂದೆ ಬರಲೊಲ್ಲದವನು ತನ್ನ ಶಿಷ್ಯನಲ್ಲ ಎಂದು ಅವರು ಹೇಳಿದರು. ಈ ಮಾತು ಕಠಿಣವೆಂದು ತೋರುತ್ತದೆ ಖರೆ; ಆದರೆ ಬೇರೆ ಮಾರ್ಗವಿಲ್ಲಾ. ಆತ್ಮರಕ್ಷಣೆಯನ್ನು ಪಡೆಯುವದೇ ದೊಡ್ಡದು; ದೇವರ ಮಹಿಮೆಯೇ ದೊಡ್ಡದು; ದೇವರನ್ನು ಮಹಿಮೆ ಪಡಿಸುವವರನ್ನು ದೇವರು ಮಹಿಮೆ ಪಡಿಸುತ್ತಾನೆ. ಮನುಷ್ಯರಿಗೆ ಅಂಜುವದು ಯಾತಕ್ಕೆ? ಅವರು ನಮ್ಮನ್ನು ರಕ್ಷಣೆ ಮಾಡುವವರಲ್ಲಾ, ನಾಳೆ ನಮ್ಮ ಸಂಗಡ ಬರುವವರಲ್ಲಾ. ನಾವು ಒಬ್ಬೊಂಟಿಗರಾಗಿ ತೆರಳಬೇಕು. ನಮ್ಮ ಜೀವಮಾನದಲ್ಲಿಯೂ ಮರಣದಲ್ಲಿಯೂ ನಮ್ಮ ಸಂಗಡಲಿದ್ದು ನಮ್ಮನ್ನು ಕೈಹಿಡಿದು ನಡಿಸುವ ರಕ್ಷಕನು ಯೇಸುಸ್ವಾಮಿಯವರೊಬ್ಬರೇ. ಇಂಥಾ ಪ್ರೀತಿಯುಳ್ಳ ರಕ್ಷಕನನ್ನು ಶರಣುಹೊಗುವದಕ್ಕೆ ನಾಚಿಕೆಯೂ ಅಂಜಿಕೆಯೂ ಯಾತಕ್ಕೆ?

ನಾಲ್ಕನೇ ವರ್ಗದವರು ಯಾರಂದರೆ: ದೇವರ ವಾಕ್ಯವನ್ನು ಕೇಳಿ ಸಂತೋಷದಿಂದ ಅಂಗೀಕಾರ ಮಾಡಿ, ಯೇಸುಸ್ವಾಮಿಯವರೇ ರಕ್ಷಕನೆಂದು ಹೃದಯಪೂರ್ವಕವಾಗಿ ನಂಬುವವರು. ಹೃದಯದಲ್ಲಿ ಹುಟ್ಟಿದ ವಿಶ್ವಾಸಕ್ಕೆ ಅನುಸಾರವಾಗಿ ತಾವು ನಡೆಯಬೇಕು; ಅಂತರಂಗದಲ್ಲಿ ಕ್ರೈಸ್ತನಾಗಿರುವದು ಸಾಲದು ಎಂದು ಅವರು ತಿಳಿದು, ಮನುಷ್ಯರ ಭಯವನ್ನೂ ಅಪಮಾನವನ್ನೂ ಹಿಂದಕ್ಕೆ ಹಾಕಿ, ಬೇಕಾದರೆ ಸರ್ವಸ್ವವನ್ನೂ ನಷ್ಟಪಟ್ಟು ಬಹಿರಂಗದಲ್ಲಿಯೂ ಯೇಸುಸ್ವಾಮಿಯವರ ಶಿಷ್ಯರಾಗುವರು; ಆತ್ಮರಕ್ಷಣೆಯೇ ದೊಡ್ಡದೆಂದು ಅವರಿಗೆ ತೋರುತ್ತದೆ. ಮತ್ತು ತನ್ನ ನಾಮಕ್ಕಾಗಿ ನಷ್ಟ ಪಟ್ಟವರಿಗೆ ದೇವರು ಇಮ್ಮಡಿಯಾಗಿ ಪ್ರತಿಫಲವನ್ನು ಕೊಡುತ್ತಾನೆಂದು ಅವರು ನಂಬುತ್ತಾರೆ. ದೇವರ ಬಳಿಯಲ್ಲಿ ಅನ್ಯಾಯವಿಲ್ಲಾ. ನಿನ್ನ ಕೈಯಲ್ಲಿರುವ ಹುಸಿಮುತ್ತುಗಳನ್ನೆಲ್ಲಾ ಬಿಸಾಡು, ನಿನಗೆ ಅಮೂಲ್ಯವಾದ ಒಂದೇ ಮುತ್ತನ್ನು ಕೊಡುತ್ತೇನೆಂದು ಉದಾರನಾದ ಮನುಷ್ಯನು ಹೇಳಿದರೆ, ಹುಸಿಮುತ್ತುಗಳನ್ನು ಬಿಸಾಟು ಒಳ್ಳೇ ಮುತ್ತನ್ನು ತೆಗದುಕೊಳ್ಳದವನು ಯಾರು? ಹಾಗೆಯೇ ಈ ನಾಲ್ಕನೇ ವರ್ಗದವರು ಸ್ವಂತ ಪುಣ್ಯವನ್ನೂ ಸ್ವಭರವಸವನ್ನೂ ತೊರೆದು, ದೇವರು ಯೇಸು ಕ್ರೈಸ್ತನ ಮುಖಾಂತರವಾಗಿ ಉಚಿತವಾಗಿ ಪಾಲಿಸುವ ವಿಮೋಚನೆಯನ್ನೂ ಹೃದಯಶುದ್ಧಿಯನ್ನೂ ಮನಃಶಾಂತಿಯನ್ನೂ ಸ್ವೀಕರಿಸಿ, ದೇವರನ್ನು ಮಹಿಮೆ ಪಡಿಸುತ್ತಾ ಇತರರಿಗೆ ಉಪಕಾರಿಗಳಾಗಿದ್ದು ಭೂಸಂಚಾರವನ್ನು ಕಳೆಯುತ್ತಾರೆ. ಈ ಸಂಚಾರದ ಅಂತ್ಯದಲ್ಲಿ ತಮಗೆ ನಿತ್ಯಜೀವದ ಬಾಧ್ಯತೆಯುಂಟೆಂಬುವ ಪ್ರತೀಕ್ಷೆಯು ಅವರಲ್ಲಿ ಸಜೀವವಾಗಿದೆ. ಭೂಲೋಕದಲ್ಲಿ ಎಂಥೆಂಥಾ ಅವಸ್ಥೆ ಬಂದರೂ ತಾವು ನಂಬಿದ ಸ್ವಾಮಿ ತಮ್ಮ

ನ್ನು ಕೈಹಿಡಿದು ನಡಿಸುತ್ತಾನೆಂಬ ಭರವಸವು ಅವರಲ್ಲಿ ಅದೆ. ಈ ಪ್ರಕಾರ ಯೇಸು ಕ್ರಿಸ್ತಸ್ವಾಮಿಯ ಶಿಷ್ಯರಾದವರ ಸಭೆಗಳು ಈ ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಾ ಬರುತ್ತವೆ, ಇನ್ನೂ ಹೆಚ್ಚಾಗಲಿ ಎಂಬುವದೇ ನಮ್ಮ ಪ್ರಾರ್ಥನೆ.

ಘನ. ಪಂಡಿತ ಹೆರ್ಮನ್ ಗುಂಡರ್ತ್ ದೊರೆ.

ಪಂಚಾಂಗದ ಮೊದಲನೇ ಪಾನಿನಲ್ಲಿ ಘನ. ಗುಂಡರ್ತ್ ಪಂಡಿತರ ಚಿತ್ರವು ಕಾಣಿಸಿಯದೆ. ಇವರು ಜರ್ಮನಿಯಲ್ಲಿ ಮಹಾ ವಿದ್ಯಾಲಯದಲ್ಲಿ ಕಲಿತವರಾಗಿ ಯವನ ಭಾಷೆಗಳಲ್ಲಿಯೂ ಸಂಸ್ಕೃತ, ದ್ರಾವಿಡ ಭಾಷೆಗಳಲ್ಲಿಯೂ ಅಧ್ಯಾತ್ಮ ಜ್ಞಾನದಲ್ಲಿಯೂ ವ್ಯುತ್ಪತ್ತಿಯುಳ್ಳವರಾಗಿದ್ದರು. ಇಷ್ಟು ವಿದ್ಯಾವಂತರಾಗಿ ಊರಿನಲ್ಲೇ ಪಂಡಿತೋದ್ಯೋಗ ಮಾಡುವದಕ್ಕೆ ಮನಸ್ಸಿಲ್ಲದೆ ದೇವರ ಜ್ಞಾನವಿಲ್ಲದ ಮೂರ್ತಿಪೂಜಕರಿಗೆ ದೇವರ ವಾಕ್ಯವನ್ನೂ ರಕ್ಷಣೆಯ ಮಾರ್ಗವನ್ನೂ ಉಪದೇಶ ಮಾಡಬೇಕೆಂದು ಯೋಚಿಸಿ, ಹಿಂದುಸ್ಥಾನಕ್ಕೆ ಹೋಗಬೇಕೆಂದು ಹೊರಟು ಮದ್ರಾಸಿಗೆ ಬಂದರು. ಅವರು ಅಲ್ಲಿ ತಮಿಳ ಭಾಷೆಯನ್ನಾಡುವ ಜನಾಂಗಗಳಿಗೆ ಉಪದೇಶ ಮಾಡುವ ಕೆಲಸದಲ್ಲಿ ಕೆಲವು ವರ್ಷ ಕಳೆದ ಬಳಿಕ ಮಂಗಳೂರಿಗೆ ಬಂದು, ಮಿಶ್ಯನಸಂಘದವರ ಅಪ್ಪಣೆಯ ಮೇರೆಗೆ ತಲಚೇರಿಗೆ ತೆರಳಿ, ಅಲ್ಲಿಯೇ ಸ್ಥಿರವಾಗಿ ವಾಸ ಮಾಡಿಕೊಂಡಿದ್ದು, ಜನರಿಗೆ ಉಪದೇಶ ಮಾಡುವದರಿಂದಲೂ ಉಪದೇಶಸಾರವು ಅಡಗಿರುವ ಹಲ ಪುಸ್ತಕಗಳನ್ನು ರಚಿಸುವದರಿಂದಲೂ ಸ್ವಾಮಿಯ ಸೇವೆ ಮಾಡಿದರು. ಕೆಲವು ಕಾಲ ಸರಕಾರದವರು ಅವರಿಗೆ ಪಾಠಶಾಲೆಗಳ ಮೇಲ್ವಿಚಾರಣೆ ಮಾಡುವ ಉದ್ಯೋಗವನ್ನು ಕೊಡಿಸಿದ್ದರು. ಹೀಗೆ ಅನೇಕ ವರ್ಷಗಳು ಈ ದೇಶದಲ್ಲಿ ಕಳೆದು ಜರ್ಮನಿಗೆ ತೆರಳಿದ ಮೇಲೆ ಅಲ್ಲಿ ಮಲೆಯಾಳ ಭಾಷೆಗೆ ನಿಘಂಟು ರಚಿಸಿದರು. ಈ ನಿಘಂಟು ಈ ಛಾಪಖಾನೆಯಲ್ಲಿ ಮುದ್ರಿತವಾಗಿದೆ. ಅವರು ವೃದ್ಧಾಪ್ಯದಲ್ಲಿಯೂ ಸಹ ಪುಸ್ತಕಗಳನ್ನು ರಚಿಸುವದರಲ್ಲಿಯೂ ಉಪದೇಶ ಮಾಡುವದರಲ್ಲಿಯೂ ನಿರತರಾಗಿ ಸ್ವಾಮಿಯ ಸೇವೆ ಮಾಡುತ್ತಾ ಇತ್ತಲಾಗೆ ಎರಡು ಮೂರು ವರ್ಷಗಳ ಹಿಂದೆ ಸಮಾಧಾನದಿಂದ ತೀರಿಕೊಂಡರು.

ಪಾಪದ ಸಂಬಳವು ಮರಣವು.

ಈ ವಾಕ್ಯದಲ್ಲಿ ಮೂರು ಮಾತುಗಳನ್ನು ಸರ್ವರೂ ಆಲೋಚಿಸ ತಕ್ಕದ್ದು. ಪಾಪಸಂಬಳ ಮರಣವೆಂಬ ಮಾತುಗಳಲ್ಲಿ ಮಹಾ ಅರ್ಥವದೆ. ಅದನ್ನು ಓದುವವರು ಚನ್ನಾಗಿ ಮನನ ಮಾಡಿ ಎಚ್ಚರಿಕೆಯಾಗಬೇಕು. ಪಾಪವಂದರೇನು? ದೇವರ ಆಜ್ಞಾಭಂಗವೇ ಪಾಪ. ಮನುಷ್ಯನು ಮನಸೋವಾಕ್ಕಾಯಗಳಿಂದ ದೇವರ ಅಪ್ಪಣೆಗಳನ್ನು ಮೀರುತ್ತಾನಲ್ಲವೋ? ಅಕೃತ್ಯಕರಣ ಕೃತ್ಯಾಕರಣ ಅಂದರೆ ಮಾಡಬಾರದ್ದನ್ನು ಮಾಡುತ್ತಾನೆ, ಮಾಡಬೇಕಾದದ್ದನ್ನು ಮಾಡದಿರುತ್ತಾನೆ; ಇದು ಪ್ರತಿ ಮನುಷ್ಯನ

ಅನುಭವಕ್ಕೆ ಬರುವದಿಲ್ಲವೋ? ಅಂಗೈಹುಣ್ಣಿಗೆ ಕನ್ನಡಿ ಬೇಡಾ. ತನ್ನ ಹೃದಯವನ್ನೂ ನಡತೆಯನ್ನೂ ಪರೀಕ್ಷೆ ಮಾಡಿದವನು ತಾನು ಪಾಪಿ ಎಂದು ಒಪ್ಪುವನು. ಈಗ ಪಾಪ ಮಾಡುವದು ಸೇವೆಯಾಗಿದೆ, ಅದು ಒಂದು ಊಳಿಗ. ಈ ಊಳಿಗದಲ್ಲಿ ಎಲ್ಲರೂ ಸೇರಿದ್ದಾರೆ. ಬಡಿಗೆಯವನು ನೇಯಿಗೆಯವನ ಉದ್ದಿಮೆ ಮಾಡನು, ಅಕ್ಕಸಾಲಿಗನು ಅಂಬಿಗನಂತೆ ಬಲೆ ಬೀಸಲಿಕ್ಕೆ ಹೋಗನು. ಆದರೆ ಪಾಪದ ಸೇವೆಯನ್ನು ಪ್ರತಿಯೊಬ್ಬನು ಮಾಡುವನು. ಪಾಪ ಮಾಡುವವನು ಪಿಶಾಚನ ಕಡೆಯವನು, ಪಿಶಾಚನ ಅಡಿಯಾಳು. ಪಾಪದ ಊಳಿಗ ಮಾಡುವದು ಎಲ್ಲವರಿಗೂ ಸುಲಭವಾಗಿ ಬರುತ್ತದೆ. ಇತರ ಕೈಗಾರಿಕೆಕೆಲಸಗಳನ್ನು ಬಲ್ಲವರಿಂದ ಕಲಿಯಬೇಕು. ಅದು ಬರಬೇಕಾದರೆ ಎಷ್ಟೋ ಪ್ರಯತ್ನ ಮಾಡಬೇಕು. ಪಾಪದ ಊಳಿಗವನ್ನು ನಡಿಸುವದಕ್ಕೆ ಕಲಿಯುವದು ಬೇಡಾ; ಅದನ್ನು ಹಗೆ ಮಾಡಿಬಿಡಲಿಕ್ಕೆ ಮಾತ್ರ ಕಲಿಯಬೇಕಾಗುತ್ತದೆ. ಆದರೆ ಅದನ್ನು ಮಾಡಬೇಕೆಂಬ ಅಭಿಲಾಷೆಯು ಸರ್ವರಿಗೂ ಸಹಜವಾಗಿದೆ. ಈ ಸೇವೆಗೆ ಸೇರಿದವರು ಸಾಧಾರಣವಾಗಿ ಹೆಚ್ಚು ಕೆಲಸ ಮಾಡುವರು; ಆಗುವಷ್ಟು ಕಡಮೆ ಕೆಲಸ ಮಾಡುತ್ತೇನೆಂದು ಎಣಿಸುವ ನಮ್ಮ ದೇಶದ ಕೂಲಿಯವರ ಹಾಗೆಯೂ, ಒಡೆಯನು ಸ್ವಲ್ಪ ಹೆಚ್ಚು ಹೊತ್ತು ಕೆಲಸ ಮಾಡಿಸಿದರೆ ಬೊಬ್ಬಾಟ ಮಾಡುವ ಕೂಲಿಯವರ ಹಾಗೆಯೂ ಅಲ್ಲಾ. ಪಿಶಾಚನ ಆಳುಗಳು ಜೀವಮಾನವೆಲ್ಲಾ ಅವನ ಊಳಿಗದಲ್ಲೇ ಇದ್ದಾರೆ; ಎಷ್ಟು ಮಾಡಿದರೂ ಗುಣುಗುಟ್ಟುವದಿಲ್ಲಾ, ದಣಿಯುವದಿಲ್ಲಾ; ಇಲ್ಲವೆ ಹೊತ್ತಾಯಿತೆಂದು ಹಿಡಿದ ಕೆಲಸವನ್ನು ಅರ್ಧದಲ್ಲೇ ಬಿಟ್ಟುಹೋಗುವದಿಲ್ಲಾ. ಆ ಊಳಿಗ ಮುಗಿಯಿತು, ಇನ್ನೆಲ್ಲಿಗೆ ಹೋಗಲಿ ಎಂತ ಚಿಂತೆ ಮಾಡುವದಕ್ಕೂ ತನಗೆ ವರ್ಗಾವರ್ಗಿಯಾದೀತೆಂದು ಹೆದರುವದಕ್ಕೂ ಕಾರಣವಿಲ್ಲಾ. ಯಾಕಂದರೆ ಪಾಪದ ಸೇವೆಗೆ ಒಡೆಯನಾದ ಪಿಶಾಚನು ತನ್ನಲ್ಲಿರುವ ಎಲ್ಲಾ ಊಳಿಗದವರಿಗೆ ಮರಣದ ಮಟ್ಟಿಗೆ ಮಾಡಿದರೂ ಪೂರೈಸದಷ್ಟು ಸೇವೆಯನ್ನು ಕೊಡುತ್ತಿರುವನು.

ಕೆಲಸ ಮಾಡುತ್ತಾ ಹೋದ ಮೇಲೆ ಸಂಬಳ ಸಿಕ್ಕುವ ಸಮಯವೂ ಬರುತ್ತದೆ. ಪಾಪದಾಸಯ್ಯನಿಗೆ ಸಂಬಳ ತಕ್ಕೊಳ್ಳಲಿಕ್ಕೆ ಮನಸ್ಸಿದ್ದರೂ ಇಲ್ಲದಿದ್ದರೂ ಒಡೆಯನಾದ ಪಿಶಾಚನು ಅವನ ಕೈಯಲ್ಲಿ ಸಂಬಳ ಹಾಕಿಬಿಡುವನು. ಆ ಸಂಬಳವೇ ಮರಣವು. ಎಂಥಾ ಭಯಂಕರ ಮಾತು! ಸೈತಾನನ ಊಳಿಗದವರೆಲ್ಲರೂ ಆತ್ಮದ ಮರಣವೆಂಬ ಸಂಬಳವನ್ನು ಇಲ್ಲಿಯೇ ಮುಂಗಡವಾಗಿ ಹೊಂದಿದ್ದಾರೆ. ದೇವರ ಸಂಪರ್ಕವನ್ನು ಅಗಲಿದ ಮನುಷ್ಯನ ಶರೀರಕ್ಕೆ ಮರಣ ಬರುವ ಮೊದಲೇ ಆತ್ಮಕ್ಕೆ ಮರಣವು ಹಿಡಿದಿರುವದು. ಹಾಗಂದರೇನು—ಸನ್ಮಾರ್ಗಸಂಬಂಧವಾದ ಎಲ್ಲಾ ಜ್ಞಾನವೂ ತಿಳಿವೂ ಅವನೊಳಗೆ ಕ್ಷಯವಾಗುತ್ತದೆ, ಒಂದಾನೊಂದು ಸಂಕಟದಿಂದ ಶರೀರದ ಒಂದು ಅಂಗವು ನಿರ್ಜೀವವಾಗಿ, ಚಿವುಟಿದರೆ ನೋವು ತಿಳಿಯದೆ ಹೋಗುವದುಂಟು. ಹಾಗೆಯೇ ಪಾಪದಾಸಯ್ಯನ ಆತ್ಮದ ತಿಳಿವೆಲ್ಲಾ ಸಾಯುತ್ತಾ ಆದೆ; ದೇವರ ಭಯವಿಲ್ಲಾ, ಭಕ್ತಿ ಇಲ್ಲಾ, ಸ್ಮರಣೆ ಇಲ್ಲಾ; ಸ್ವರ್ಗ ನರಕಗಳುಂಟೆಂಬ ಹಂಬಲಿಲ್ಲಾ; ಅಂಥವನ ಆತ್ಮಿಕ ಮರಣವು ಇಲ್ಲಿಯೇ ಪ್ರಾರಂಭವಾಗುವದು. ಕೆಲಸವು ಮುಗಿದ ಕೂಡಲೇ ಕೈತುಂಬಾ ಸಂಬಳವು ಸಿಕ್ಕುವದು. ನೀನು ಕೆಲಸ ಕಡಮೆ ಮಾಡಿದಿ, ನಿನಗೆ ದಂಡ ಕಟ್ಟುತ್ತೇನೆ ಅಂಬುವ ಮಾತಿಲ್ಲಾ. ಪಾಪದಾಸಯ್ಯನ ನೆನೆವರಿಕೆಗೆ ಎಂದೂ ಬಾರದಷ್ಟು

ಸಂಬಳವು ದೊರಕುವದು. ಕೂಲಿಯ ವಿಷಯದಲ್ಲಿ ಸೈತಾನನು ತನ್ನ ಮಾತು ವಿಾಠುವವನಲ್ಲಾ. ಪೂರ್ಣ ಸಂಬಳವೇನು? ನಿತ್ಯಮರಣವು. ನರಕದಲ್ಲಿ ಸದಾಕಾಲಕ್ಕೂ ಯಾತನೆಯನ್ನು ಅನುಭವಿಸುವದು; ಮೊದಲಿನ ಕೆಟ್ಟ ಜೀವವನ್ನು ನೆನೆನೆನಸಿ ಅಳುವದು, ಹಲ್ಲು ಕಡಿಯುವದು.

ವಾಚಕನೇ, ಸೈತಾನನ ಕೂಲಿಯಾಳಾಗಿ ಪಾಪದಾಸಯ್ಯನಾಗಿ ನಿನ್ನ ಜೀವಮಾನವನ್ನು ಕಳೆಯಬೇಕೆಂದು ಮನಸ್ಸುಂಟೋ? ನಿತ್ಯಮರಣವೆಂಬುವ ಸಂಬಳವನ್ನು ದುಡಿಯ ಬೇಕೆಂದು ಮನಸ್ಸಿದ್ದರೆ, ಪಿಶಾಚನ ಆಳಾಗಿರು; ಪಾಪಸೇವೆ ಮಾಡು. ಇದೊಂದೇ ಸೇವೆ ಲೋಕದಲ್ಲಿ ಕಾಣುತ್ತೇನೆ, ಬೇರೆ ಸೇವೆ ಕಾಣೆ ಎಂದೆನ್ನಬೇಡಾ. ನಿನಗೆ ಹಿತವಾಗಿರುವ, ಯೋಗ್ಯವಾಗಿರುವ ಸೇವೆ ಮತ್ತೊಂದು ಅದೆ; ಅದು ಯಾವದಂದರೆ: ದೇವರ ಸೇವೆ. ಎಷ್ಟು ಚಲೋ ಮಾತು! ದೇವರು ತನ್ನ ಸೇವೆ ಮಾಡುವದಕ್ಕೆ ನಿನ್ನನ್ನು ಕರೆಯುತ್ತಾನೆ. ಆ ಸೇವೆ ಏನು? ವಿಗ್ರಹಗಳನ್ನು ಪೂಜಿಸುವದೋ? ದೇವಸ್ಥಾನ ಕಟ್ಟಿಸುವದೋ? ದೇವಸ್ಥಾನದಲ್ಲಿ ಕೆಲಸ ಮಾಡುವದೋ? ಪುಣ್ಯಕ್ಷೇತ್ರಗಳಿಗೆ ಯಾತ್ರೆ ಮಾಡುವದೋ? ಅಲ್ಲಾ, ಇದೆಲ್ಲಾ ದೇವರ ಸೇವೆಯಲ್ಲಾ. ನಾನು ಪಾಪಿ, ಪಾಪದ ಸೇವೆ ಮಾಡಿದವನಾಗಿ ಪಾಪದ ಸಂಬಳವಾದ ಮರಣವನ್ನು ಹೊಂದಲಿಕ್ಕೆ ತಕ್ಕವನಾದೆ, ಪುಣ್ಯವು ನನ್ನಲ್ಲಿ ಇಲ್ಲಾ, ಎಂಥಾ ಕಂಗಾಲ ಮನುಷ್ಯನೆಂದು ಪಶ್ಚಾತ್ತಾಪ ಪಟ್ಟು, ನಿನ್ನನ್ನು ಉಂಟುಮಾಡಿ ಸಲಹುವವನಾಗಿ ತನ್ನ ಸೇವೆಗೆ ನಿನ್ನನ್ನು ಕರೆಯುವ ಮಹಾ ದೇವರ ಹತ್ತರ ಕ್ಷಮೆ ಬೇಡುವದೇ ದೇವರ ಸೇವೆ. ನನ್ನನ್ನು ಪವಿತ್ರನಾಗ ಮಾಡು, ಶುದ್ಧ ಹೃದಯವನ್ನೂ ಮನಸ್ಸಾಕ್ಷಿಯನ್ನೂ ನನಗೆ ದಯೆ ಮಾಡೆಂದು ಪ್ರಾರ್ಥಿಸುವದೇ ದೇವರ ಸೇವೆ. ನಾನು ಅಶುದ್ಧನು, ನರಕಕ್ಕೆ ಯೋಗ್ಯನು, ಪರಿಶುದ್ಧನಾದ ದೇವರ ಬಳಿಗೆ ಹ್ಯಾಗೆ ಬರಲಿ, ಹ್ಯಾಗೆ ಪ್ರಾರ್ಥನೆ ಮಾಡಲಿ ಎಂದು ಮರುಕಬೇಡಾ. ದೇವರಿಗೂ ನಿನಗೂ ಮಧ್ಯಸ್ಥನಾಗಿ, ದೇವರನ್ನು ನಿನಗೆ ಸಂಧಾನ ಮಾಡುವವನಾಗಿ, ನಿನ್ನ ವಿಮೋಚಕನಾಗಿ, ನಿನ್ನನ್ನು ಪಾಪದ ದಾಸತ್ವದಿಂದಲೂ ಪಿಶಾಚನ ಅಧಿಕಾರದಿಂದಲೂ ಕ್ರಯ ಕೊಟ್ಟು ಬಿಡಿಸುವದಕ್ಕಾಗಿ ಲೋಕಕ್ಕೆ ಅವತಾರ ಮಾಡಿದ ಯೇಸು ಕ್ರಿಸ್ತನು ಇದ್ದಾನೆ. ಪಿಶಾಚನ ಕ್ರಿಯೆಗಳನ್ನು ಲಯ ಮಾಡುವದಕ್ಕೆ ದೇವರ ಮಗನಾಗಿರುವ ಆತನು ಪ್ರತ್ಯಕ್ಷವಾದನು. ಆತನ ಬಳಿಗೆ ಬಾ; ಆತನ ಸುವಾರ್ತೆಯನ್ನು ಆಲೈಸು; ಆತನಲ್ಲಿ ವಿಶ್ವಾಸವಿಡು. ಆತನೇ ನಿನ್ನನ್ನು ವಿಮೋಚನೆ ಮಾಡುವವನು. ನನಗೆ ಯಾರ ಸಹಾಯವೂ ಬೇಡಾ, ಪಾಪದ ಸೇವೆಯಿಂದ ನನಗೆ ಬಂದ ಕಟ್ಟುಗಳನ್ನೆಲ್ಲಾ ನಾನೇ ಹರಿಯುವೆನು, ಎಂತ ಯೋಚಿಸ ಬೇಡಾ. ಪಾಪದ ಪಾಶಗಳು ಬಹು ಬಲವಾದವುಗಳು; ಅವನ್ನು ಬಿಚ್ಚುವದಾಗಲಿ ಹರಿಯುವದಾಗಲಿ ನಿನ್ನಿಂದ ಸರ್ವಥಾ ಆಗದು. ನೀನೇ ಬಿಡಿಸಿಕೊಳ್ಳುವದಕ್ಕೆ ನೋಡಿದರೆ, ಪಾಶಗಳು ಪುತ್ತಷ್ಟೂ ಬಿಗಿಯಾಗುವವು. ನಿನ್ನಂಥಾ ಮನುಷ್ಯರು ನಿನಗೆ ಸಹಾಯ ಮಾಡುವರೆಂದು ನಂಬಿದ್ದಿಯಾ? ಪುಣ್ಯಕೃತ್ಯಗಳನ್ನು ಮಾಡಿ ಪಾಪದ ಸಂಬಳವಾದ ಮರಣದಿಂದ ಬಿಡುಗಡೆಯಾದೇನೆಂದು ಮಾಡಿದ್ದಿಯಾ? ಇದೆಲ್ಲಾ ಆಗದ ಮಾತು. ಮಹಾ ಮಹಾ ಗುರುಗಳೂ ಸ್ವಾಮಿಗಳೂ ನಿನ್ನಂತೆ ಪಾಪದ ದಾಸರೂ ಪಾಪದ ಬಂಧಕದಲ್ಲಿರುವವರೂ ಆಗಿದ್ದಾರೆ; ತಮ್ಮನ್ನು ತಾವು ವಿಮೋಚನೆ ಮಾಡಿಕೊಳ್ಳಲಾರದವರು ನಿನಗೆ ಸಹಾಯ

ಮಾಡುವರೋ? ಬರಿದೇ ಹೊತ್ತು ಕಳೆಯಬೇಡಾ; ಪಾಪದ ಸಂಬಳವು ಮರಣವೆಂದು ಕೇಳುವಾಗ ಭಯವಾಗುವದಿಲ್ಲವೋ? ನಿನ್ನನ್ನು ಪಾಪಬಂಧನದಿಂದ ಬಿಡುಗಡೆ ಮಾಡಿ ದೇವರ ಮಕ್ಕಳಿಗೆ ಯೋಗ್ಯವಾದ ಸ್ವತಂತ್ರವನ್ನು ನಿನಗೆ ಕೊಟ್ಟು ಪರಮಾನಂದದಲ್ಲಿ ಸೇರಿಸಿಕೊಳ್ಳಬೇಕೆಂದು ಕಾದುಕೊಂಡಿರುವ ಪಾಪಿಗಳ ಸ್ನೇಹಿತನು ಎಂದನ್ನಿಸಿಕೊಳ್ಳುವ ಯೇಸುಕ್ರಿಸ್ತನ ಬಳಿಗೆ ಬಾ.

ಛಾಪಖಾನೆ.

ಲೋಕದಲ್ಲಿ ಪುಸ್ತಕಗಳನ್ನು ಛಾಪೆ ಮಾಡುವ ಯುಕ್ತಿಯನ್ನು ಪ್ರಥಮತಾ ಕಂಡು ಹಿಡಿದ **ಗುತ್ತೆನಬೆರ್ಗನು** ಅಬೊರ್ಸಗೊತ್ ಮಠದಲ್ಲಿ ಮೊಳೆಯಕ್ಷರಗಳನ್ನು ಜೋಡಿಸುತ್ತಿರುವಾಗ ಎರಡು ತರದ ಆಲೋಚನೆಗಳು ಅವನಲ್ಲಿ ಹುಟ್ಟಿದವು. "ನೀನು ಈ ಜಂಬರ ಬಿಡು; ತ್ವರಿತದಲ್ಲಿ ಪುಸ್ತಕಗಳನ್ನು ಹೆಚ್ಚು ಮಾಡುವ ಯುಕ್ತಿಯು ದುಷ್ಟರ ತಿಳುವಿಕೆಗೆ ಬಂದರೆ, ಅವರು ಕೆಟ್ಟ ಪುಸ್ತಕಗಳನ್ನು ಛಾಪೆ ಮಾಡಿ ಅನೇಕರನ್ನು ಕೆಡಿಸುವರು. ಮತ್ತು ಮುಂದಿನ ತಲೆಯಂತರದ ಮನುಷ್ಯರು ನಿನ್ನನ್ನು ಬಯ್ಯುವರು"ಎಂಬುವದೊಂದು ಆಲೋಚನೆ ಮೊದಲು ಅವನ ಮನಸ್ಸಿನಲ್ಲಿ ಮೂಡಿತು. ಈ ಆಲೋಚನೆ ಬಲವಾಗಿ ಮತ್ತೂ ಮತ್ತೂ ಬರಲು ಅವನು ಸುತ್ತಿಗೆ ತೆಗದು ಕೊಂಡು ತಾನು ಜೋಡಿಸಿದ ಅಕ್ಷರಗಳ ಪುಟವನ್ನು ಒಡೆಯುತ್ತೇನೆಂದು ಕೈಯೆತ್ತಿದನು. ಅಷ್ಟರಲ್ಲಿ: "ತಾಳು, ಒಡೆಯಬೇಡ; ಕೆಲಸ ಮುಂದರಿಯಲಿ; ಅನೇಕ ಒಳ್ಳೇ ಕರಣಗಳಿಂದಲೂ ದುಷ್ಟರು ಲಂಡ ಕೃತ್ಯಗಳನ್ನು ಮಾಡುವರು, ಖರೆ, ಹೆದರಬೇಡಾ; ನೀತಿಯಾಗಿರುವ ಕೃತ್ಯವನ್ನು ದೇವರು ಕಡೆಗೆ ಶುಭಗಾಣಿಸುವನು" ಎಂಬ ಯೋಚನೆ ಎರಡನೇ ಬರಲು ಅವನು ಕೈಯಲ್ಲಿದ್ದ ಸುತ್ತಿಗೆ ಬಿಸಾಡಿ, ಹಿಡಿದ ಕೆಲಸವನ್ನು ಸಾಂಗವಾಗಿ ಪೂರೈಸಿದನು.

ಲುಥರನು ಹೇಳಿದ್ದು: "ಛಾಪೆ ಮಾಡುವ ಕೆಲಸವು ದೇವರು ಪಾಲಿಸಿದ ವರವಾಗಿದೆ. ಅದರಿಂದ ನಾವು ಆತನ ಸುವಾರ್ತೆಯ ಕಾರ್ಯವನ್ನು ವೃದ್ಧಿ ಪಡಿಸಬೇಕು: ಇದೇ ಆತನ ಚಿತ್ತವು. ಲೋಕದಲ್ಲಿ ದೇವರ ಜ್ಞಾನವೆಂಬ ಪ್ರಕಾಶವು ನಂದಿ ಹೋಗಲಿಕ್ಕಿರುವಾಗಲೇ ಛಾಪಖಾನೆ ಎಂಬುವದು ಹೊಸ ಜ್ಯೋತಿಯಾಗಿ ತೋರಿಸಿಕೊಳ್ಳುತ್ತದೆ; ಅಂತ್ಯದಿನವು ಬರುವ ಮೊದಲೇ ಅದು ಪ್ರತ್ಯಕ್ಷವಾಗುವಂತೆ ದೇವರು ಮಾಡಿದನು. ಆತನಿಗೆ ಸ್ತೋತ್ರವಾಗಲಿ."

ಛಾಪಖಾನೆಯ ಮುಖಾಂತರವಾಗಿ ಸೈತಾನನು ದುರ್ಬೀಜವನ್ನು ನಿತ್ತುತ್ತಾನೆ; ನಾಸ್ತಿಕ ಪುಸ್ತಕಗಳೂ ಲಂಡಬಂಡ ಕಾದಂಬರಿ ಪುಸ್ತಕಗಳೂ ಹೇರಳವಾಗಿ ಛಾಪೆಯಾಗಿ ಅನೇಕ ಹರೇದವರ ಹೃದಯವನ್ನು ಕೆಡಿಸುತ್ತವೆ. ಇಂಥಾ ಕೆಡಕು ಪುಸ್ತಕಗಳ ಹಾವಳಿಯನ್ನು ನಿವೃತ್ತಿ ಮಾಡಿ ಸದಾಚಾರವನ್ನೂ ಭಕ್ತಿಯನ್ನೂ ವರ್ಧಿಸತಕ್ಕ ಗ್ರಂಥಗಳನ್ನು ಪ್ರಸಿದ್ಧಿ ಮಾಡುವದಕ್ಕೆ ಸತ್ಪುರುಷರು ಸಹಾ ಧಾವಿಸುತ್ತಾರೆ. ಶುಭಕಾರ್ಯ ಮಾಡುವದಕ್ಕೆ ಛಾಪೆಯಂತ್ರವು ಬಲವಾದ ಸಾಧನವಲ್ಲವೇ? ನಿಮ್ಮಲ್ಲಿ ಒಳ್ಳೇ ಯೋಚನೆಗಳನ್ನು ಹುಟ್ಟಿಸಿ ಸಂಶಯವನ್ನೂ ಕತ್ತಲನ್ನೂ ನಿವಾರಣೆ ಮಾಡಿದ ಪುಸ್ತಕಗಳನ್ನು

ಬೇರೆಯವರಿಗೂ ಕೊಡ ಬಾರದೋ? ಸೈತಾನನು ಕೆಟ್ಟ ಜಂಬರದಲ್ಲಿ ಆಸಕ್ತನಾಗಿರುವಾಗ ನೀವು ಸುಮ್ಮನೆ ಕೂತಿರುವದು ಯಾಕೆ? ವಾಚಕರೇ, ಕೆಟ್ಟ ಪುಸ್ತಕಗಳು ಹೇರಳವಾಗಿ ಛಾಪೆಯಾಗುತ್ತವೆ; ಅವನ್ನು ಓದಿ ಮನಸ್ಸು ಕೆಡಿಸಿಕೊಂಡು ಪಾಪಾಚರಣೆಯಲ್ಲಿ ಮುಳುಗಬೇಡಿರಿ; ಏಕೋದೇವರ ಜ್ಞಾನವನ್ನೂ ಭಕ್ತಿಯನ್ನೂ ಸದಾಚಾರವನ್ನೂ ಬೋಧಿಸುವ ಪುಸ್ತಕಗಳನ್ನೇ ಓದಿರಿ.



ಗುತ್ತೆನ್‌ಬೆರ್ಗನ ಛಾಪಖಾನೆ.

ಠ ಸೇ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ: ಸ್ಟಾಂಪ್ ದಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ಪಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂ ಪಾಯಿಗೆ ಎಂಬಿದರೆ . . . . . ೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕ ದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಎಂಬಿದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ನಮೂದಿಸಿದ ರೂಪಾಯಿ ೨೦ಂಕ್ಕೆ ಎಂಬಿದ್ದರೆ	೦ ೩	೦ ೧	೦ ೧
ರೂಪಾಯಿ ೨೦ಂಕ್ಕೆ ಎಂಬಿ ೪೦೦ "	೦ ೪	೦ ೨	೦ ೨
" ೪೦೦ " ೬೦೦ "	೦ ೬	೦ ೩	೦ ೨
" ೬೦೦ " ೧೦೦೦ "	೦ ೧೦	೦ ೫	೦ ೪
" ೧೦೦೦ " ೧೫೦೦ "	೦ ೧೫	೦ ೭	೦ ೪
" ೧೫೦೦ " ೧೬೦೦ "	೧ ೦	೦ ೮	೦ ೬
" ೧೬೦೦ " ೨೫೦೦ "	೧ ೮	೦ ೧೨	೦ ೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂತಕ್ಕೆ.	೧ ೮	೦ ೧೨	೦ ೮
೧೦೦೦೦ ರೂಪಾಯಿ ಮೇಲೆ ೨೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂತಕ್ಕೆ. . . .	೨ ೦	೧ ೮	೧ ೦
೨೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೬ ೦	೩ ೦	೨ ೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ರಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ಸಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ಸಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಎಂಬಿದ್ದರೆ ೨ ಆಣೆ
೧೦ ರೂಪಾಯಿಗೆ ಎಂಬಿ ೫೦ ರೂಪಾಯಿಗೆ ಎಂಬಿದ್ದರೆ. . ೪ ಆಣೆ
೫೦ " " ೧೦೦ " " . . ೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂತಕ್ಕೆ ೮ ಆಣೆ
೧೦೦೦, " ಪ್ರತಿ ರೂ. ೫೦ಂಕ್ಕೆ ಯಾ ಅದರ ಅಂತಕ್ಕೆ . . ೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಋಣ ವು ಪಸ್ತಾವೇಜು (ಒಂದು ಉದ್ಯೋಗ ಯಾ ಕೆಲಸವನ್ನು ಸರಿಯಾಗಿ ನೆರ ವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾ ಧಾನ ಪಡಿಸ ತಕ್ಕ ಬಗ್ಗೆ ಜವಾಬುದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಎಂಬಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ . . . . . ೪ ಆಣೆ

" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬಿಲೆಯುಳ್ಳ ಸಾಧನಗಳನ್ನು ತೀವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:—*a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೆ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೆ ದಸ್ತಾವೇಜು . . . . ೫ ರೂಪಾಯಿ

35. ಸೊತ್ತಿನ ಬದಲಾವಣೆಪತ್ರ— } ಅಂಥಾ ಸೊತ್ತಿನ ಕಿಮ್ಮತಿನ ಬಗ್ಗೆ 21ನೇ

36. ದಾನಪತ್ರ— } ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೆ ಠಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ನಾಯಿದೆ

ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರುಷಕ್ಕೆ ಮೀರಿ, ೫ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ವರ್ಷ ೧ಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ಸಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು). ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂತವನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ. . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲನಾಗಲೀ ಮುತ್ತಾಲಿಕನಾಗಲೀ ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಸರಕನ್ನಾಗಲಿ ಜೀನಸನ್ನಾಗಲೀ ಕೊಂಡುಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು). . . . . ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೪ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಅಗಲಿ ಸಾಮಾನ್ಯವಾಗಿ ಅಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮೀರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . . × ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಅಗಲಿ ಸಾಮಾನ್ಯವಾಗಿ ಅಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಮೀರಿ ೧೦೦ಕ್ಕೆ ಮೀರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಹೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ. ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಮೀರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟುಬಿಡುವ ದಸ್ತಾವೇಜು):—

a) ಬಾಧ್ಯತೆಯ ಹೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

57. (Settlement) ಸೆಟ್ಲ್‌ಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜನ ಮೇಲೆ ಜೀನಸುಗಳನ್ನು ಮೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ × ರೂಪಾಯಿಗೆ ಮೀರದಿದ್ದರೆ— ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

60. (Transfer) ಟ್ರಿನ್ಸ್‌ಫೆರ್ (ಪರಭಾರೆಪತ್ರ ಯಾ ಮೇಲ್ಸಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ—21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾಸಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶೂರೆನ್ಸ (ಬೀಮು ಉತ್ತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶೂರೆನ್ಸ ಹಾಸಲು × ರೂಪಾಯಿಗೆ ಮೀರದಿದ್ದರೆ, ಅದರಷ್ಟೆ ಹಾಸಲು

ಇತರ ಸಂಗತಿಯಲ್ಲಿ— × ರೂಪಾಯಿ

ಠಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. a) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕಿನ ಮಾರಾಟದ ಸಮ್ಮಂಧವಾಗುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೬. ಗೇಣಿಚೀಟುಗಳೂ ಅವುಗಳ ಎದುರ್ಸುದಿಗಳೂ:—b) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ, ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಒಟ್ಟಾರೆ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; c) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ಸುದಿ.

೧೫. ರಶೀದಿ:—a) ಕ್ರಮವಾಗಿ ಠಸೇ ಮೇಲೆ ಆದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಶನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; b) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರಶೀದಿ; h) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ಠೇವಣಿ ಇಟ್ಟ ಹಣದ ಬಗ್ಯೆ ಯಾ ಹಣದ ಪಾತರೀ ಬಗ್ಯೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಮ್ಮಂಧಿಸುವದಿಲ್ಲ.

೧೬. ಗೇಣಿಸೋಡಚೀಟು—ಅಂಥಾ ಗೇಣಿಚೀಟಿಗೆ ಠಸೆ ಮಾಫಿ ಆಗಿದ್ದರೆ.

೧೭. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡುವ ಬಗ್ಯೆ ರಿಜಿಸ್ತ್ರಾರರಿಗೆ ತೆರ ತಕ್ಕ ಫೀಸಿನ ದರ.

								ರೂ.	ಆ.
